## ಕರ್ನಾಟಕದಲ್ಲೇ ಮೊಟ್ಟಮೊದಲ ಬಾರಿಗೆ UPSC/KAS ಪರೀಕ್ಷೆಯನ್ನು ಕನ್ನಡ ಮಾಧ್ಯಮದಲ್ಲಿ ತಯಾರಿನಡೆಸಲು ರಚಿಸಿರುವಂತಹ ವೆಬ್ ಸೈಟ್

# UPSC/KAS ಪ್ರಚಲಿತ ವಿದ್ಯಮಾನಗಳ ಮಾಸಿಕ ಕೈಪಿಡಿ- ಜನವರಿ -2018

## PART-1


**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

**http://www.nammaiasacademy.com**

**DOWNLOAD OUR ANDROID MOBILE APP**

http://www.nammaiasacademy.com/download-app

## CONTENTS

1. ಅರುಣಾಚಲ ಪ್ರದೇಶ ಬಯಲು ಬಹಿರ್ದೆಸೆ ಮುಕ್ತ .......... 1

2. ಟೆಲಿಕಾಂ ಓಂಬುಡ್ಸ್‌ಮನ್ (ಸಾರ್ವಜನಿಕ ತನಿಖಾಧಿಕಾರಿ) .......... 2

3. ರಾಷ್ಟ್ರೀಯ ಪೌರತ್ವ ನೋಂದಣಿ (National Register of Citizens) .......... 3

4. ಪಶ್ಚಿಮ ಘಟ್ಟದಲ್ಲಿ ಹೊಸ ರಾತ್ರಿ ಕಪ್ಪೆ ಪ್ರಭೇದ ಪತ್ತೆ .......... 4

5. ಒಸಿ ಐ ಮತ್ತು ಪಿ ಐ ಓ ಕಾರ್ಡ್ ಗಳು .......... 5

6. "ನಾರಿ" ಪೋರ್ಟಲ್ .......... 6

7. ಇ-ಸಂವಾದ .......... 7

8. ಭಾರತ-ಪಾಕ್ ನಡುವೆ ಪರಮಾಣು ಪಟ್ಟಿ ವಿನಿಮಯ(India, Pakistan exchange list of nuclear installations) .......... 8

9. ಪಾರ್ಕರ್ ಸೌರ ಪ್ರೋಬ್ .......... 10

10. ಭಾರತದ ಎರಡನೇ ಅತಿದೊಡ್ಡ ಮೇಲ್ಚಾವಣಿ ಸೌರ ವಿದ್ಯುತ್ ಘಟಕವನ್ನು ಉತ್ತರ ಪ್ರದೇಶದಲ್ಲಿ ... 12

11. ಸೌದಿ ಅರೇಬಿಯಾ ಮತ್ತು ಯುಎಇ ಯಲ್ಲಿ ಮೊದಲ ಬಾರಿಗೆ ವ್ಯಾಟ್ ಜಾರಿ .......... 13

12. ಜಿಇಎಸ್ -2017 ಸಹ ಆಯೋಜನೆಗಾಗಿ ಭಾರತ ಮತ್ತು ಅಮೆರಿಕಾ ನಡುವೆ ತಿಳಿವಳಿಕೆ ಒಪ್ಪಂದಕ್ಕೆ ಸಂಪುಟದ ಅನುಮೋದನೆ .......... 14

13. ಐಸಿಸಿಆರ್ ಅಧ್ಯಕ್ಷರಾಗಿ ವಿನಯ್ ಸಹಸ್ರಬುದ್ಧೆ ನೇಮಕ .......... 16

14. ಗೋಧಿಯ ಉತ್ಪಾದನೆಯನ್ನು ಹೆಚ್ಚಿಸಲು ಪ್ರಪಂಚದ ಮೊದಲ 'ವೇಗ ತಳಿ ' (Speed Breeding) ತಂತ್ರ .......... 18

15. ಎಚ್1ಬಿ ವೀಸಾ .......... 19

16. ಪಿಪಿಪಿ ಯೋಜನೆಗಳಿಗೆ ಪರಿಷ್ಕೃತ ಮಾದರಿ ರಿಯಾಯಿತಿ ಒಪ್ಪಂದಕ್ಕೆಸಂಪುಟದ ಅನುಮೋದನೆ ... 23

17. ಜಂಗಲ್ ಮಹಲ್ ಉತ್ಸಬ್ .......... 26

18. ಎಲೆಕ್ಟೋರಲ್ ಬಾಂಡ್ ಮೂಲಕ ರಾಜಕೀಯ ಪಕ್ಷಗಳಿಗೆ ದೇಣಿಗೆ ನಿಡುವ ಯೋಜನೆಯನ್ನು ತರಲು ಕೇಂದ್ರ ಸರಕಾರ ಚಿಂತನೆ....27

19. ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (PMSSY) ....28

20. ಹಂದಿ ಜ್ವರ(Swine flu)....30

21. ವಿಶ್ವಸಂಸ್ಥೆಯಲ್ಲಿ ಅಧಿಕೃತ ಭಾಷೆ....33

22. ನಬಾರ್ಡ್ ಮಸೂದೆ ....34

23. ಝೋಜಿಲಾ ಸುರಂಗ ನಿರ್ಮಾಣಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ....35

24. ಭಾರತ-ಮಯನ್ಮಾರ್ ಭೂ ಗಡಿ ದಾಟುವ ಒಪ್ಪಂದಕ್ಕೆ ಸಚಿವ ಸಂಪುಟ ಒಪ್ಪಿಗೆ ....38

25. ವಿಶ್ವ ಪುಸ್ತಕ ಮೇಳ ....39

26. ಪುರುಷ-ಮಹಿಳೆಯರಿಗೆ ಐಸ್ ಲ್ಯಾಂಡ್ ನಲ್ಲಿ ಸಮಾನ ವೇತನ (Iceland becomes first country to legalise equal pay) ....40

27. ಪಾಕಿಸ್ತಾನವನ್ನು ವಿಶೇಷ ಕಣ್ಗಾವಲು ಪಟ್ಟಿಯಲ್ಲಿ ಸೇರಿಸಿದ ಅಮೇರಿಕ....41

28. ರಾಷ್ಟ್ರೀಯ ಜಲಮಾರ್ಗ -1 ....42

29. ನಾಸಾದಿಂದ ಎರಡು ಹೊಸ ಯೋಜನೆ....43

30. 'ಟ್ರಾನ್ಸ್ ಪೋರ್ಟ್ ಫಾರ್ ಲಂಡನ್'....45

31. H5 ಏವಿಯನ್ ಇನ್‌ಫ್ಲುಯೆಂಝಾ ....46

32. ಪ್ರವಾಸಿ ಭಾರತೀಯ ದಿವಸ್ ....48

33. ಭಾರತ ಮತ್ತು ಬೆಲ್ಜಿಯಂ ನಡುವಿನ ತಿಳಿವಳಿಕೆ ಒಪ್ಪಂದಕ್ಕೆ ಸಂಪುಟದ ಸಮ್ಮತಿ ....49

34. ಅರ್ಜೆಂಟೀನಾದ ಬ್ಯೂನಸ್ ಐರಿಸ್ ನಲ್ಲಿ ನಡೆದ ಡಬ್ಲ್ಯು.ಟಿ.ಓ.ದ ಹನ್ನೊಂದನೆಯ ಸಚಿವ ಮಟ್ಟದ ಸಮಾವೇಶದಲ್ಲಿ ಭಾರತವು ಅಳವಡಿಸಿಕೊಳ್ಳಬೇಕಾದ ನಿಲುವಿಗೆ ಸಂಪುಟದ ಅನುಮೋದನೆ....51

35. ಭಾರತ್ ನೆಟ್ ....54

36. ಇ-ಸಂಸತ್ ಮತ್ತು ಇ-ವಿಧಾನ್....56

37. ಭಾರತಕ್ಕೆ ಸಿಕ್ಕಿತು ಫಾಸ್ಟೆಸ್ಟ್ ಸೂಪರ್ ಕಂಪ್ಯೂಟರ್-ಪ್ರತ್ಯುಷ್....................................57

38. ರೈಲ್ವೆ ಯೋಜನೆಗಳ ಮೇಲ್ವಿಚಾರಣೆಗೆ ಡ್ರೋನ್ ಬಳಕೆ ....................................59

39. ಮಧುಬಾನಿ ವರ್ಣಚಿತ್ರ....................................60

40. ಭಾರತ ಮತ್ತು ಕೆನಡಾ ನಡುವಿನ ತಿಳಿವಳಿಕೆ ಒಪ್ಪಂದಕ್ಕೆ ಸಂಪುಟದ ಸಮ್ಮತಿ ....................................64

41. ತುಂಗಭದ್ರಾ ಉಕ್ಕು ಉತ್ಪನ್ನ ನಿಯಮಿತ ಮುಚ್ಚುವ ಸಿಸಿಇಎ ನಿರ್ಧಾರದ ಜಾರಿಗೆ ಸಂಪುಟದ ಅನುಮೋದನೆ....................................65

42. ಎಫ್.ಡಿ.ಐ. ನೀತಿಯಲ್ಲಿ ತಿದ್ದುಪಡಿಗಳಿಗೆ ಸಂಪುಟದ ಅನುಮೋದನೆ ....................................66

43. ರಾಷ್ಟ್ರೀಯ ಟ್ರಸ್ಟ್ ಅಧ್ಯಕ್ಷರು ಮತ್ತು ಸದಸ್ಯರಿಗೆ ನಿರ್ದಿಷ್ಟ ಕಾಲಾವಧಿ ನಿಗದಿಗೆ ಸಂಪುಟದ ಸಮ್ಮತಿ70

44. ಚಿತ್ರಮಂದಿರಗಳಲ್ಲಿ ರಾಷ್ಟ್ರಗೀತೆ ಕಡ್ಡಾಯವಲ್ಲ: ಸುಪ್ರೀಂಕೋರ್ಟ್....................................72

45. ತಂಬಾಕು ಉತ್ಪನ್ನಗಳ ಪ್ಯಾಕ್ ಮೇಲೆ 85% ಎಚ್ಚರಿಕೆ ಸೂಚನೆ: ರಾಜ್ಯ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ತಡೆ ....................................74

46. ಇಸ್ರೋ ಅಧ್ಯಕ್ಷರಾಗಿ ಹಿರಿಯ ವಿಜ್ಞಾನಿ ಶಿವನ್....................................76

47. ಸುಪ್ರೀಂ ಕೋರ್ಟ್‌ಗೆ ಮತ್ತೊಬ್ಬರು ಮಹಿಳಾ ನ್ಯಾಯಮೂರ್ತಿ ....................................77

48. ಇಸ್ರೊದಿಂದ 100ನೇ ಉಪಗ್ರಹ ಉಡಾವಣೆ ಯಶಸ್ವಿ....................................78

49. ಸುಲಲಿತ ಲಾಜಿಸ್ಟಿಕ್ಸ್ (ಲೀಡ್ಸ್) ವಿವಿಧ ರಾಜ್ಯಗಳಲ್ಲಿನ ಸೂಚ್ಯಂಕ ....................................79

50. ಅಪಾಯಕಾರಿ ಓಜೋನ್ ರಂಧ್ರ ಕ್ಷೀಣ: ನಾಸಾ ಅಧ್ಯಯನದಿಂದ ಬೆಳಕಿಗೆ....................................80

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 1. ಅರುಣಾಚಲ ಪ್ರದೇಶ ಬಯಲು ಬಹಿರ್ದೆಸೆ ಮುಕ್ತ

### ಪ್ರಮುಖ ಸುದ್ದಿ

- ಸಿಕ್ಕಿಂ ನಂತರ ಬಯಲು ಶೌಚ ಮುಕ್ತವಾದ ಎರಡನೇ ಈಶಾನ್ಯ ರಾಜ್ಯ ಎಂಬ ಹೆಗ್ಗಳಿಕೆಗೆ ಅರುಣಾಚಲ ಪ್ರದೇಶ ಪಾತ್ರವಾಗಿದೆ.
- ಅರುಣಾಚಲ ಪ್ರದೇಶದಲ್ಲಿ 21 ಜಿಲ್ಲೆಗಳಿದ್ದು 2019 ರ ಅಕ್ಟೋಬರ್ 2 ಕ್ಕೆ ಬಯಲು ಶೌಚ ಮುಕ್ತವಾಗಬೇಕೆಂಬ ಗಡುವು ನಿಗದಿಪಡಿಸಲಾಗಿತ್ತು.
- ನಿಗದಿತ ಗಡುವಿಗಿಂತಲೂ ಮುನ್ನವೇ ಅರುಣಾಚಲ ಪ್ರದೇಶ ಬಯಲು ಶೌಚ ಮುಕ್ತ ರಾಜ್ಯವಾಗಿ ಘೋಷಣೆಯಾಗಿದೆ.

### ಸ್ವಚ್ಛ ಭಾರತ ಅಭಿಯಾನ:

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಸಾರ್ವತ್ರಿಕ ನೈರ್ಮಲೀಕರಣ ವ್ಯಾಪ್ತಿಯನ್ನು ಸಾಧಿಸಲು ಮತ್ತು ನೈರ್ಮಲ್ಯದ ಕಡೆಗೆ ಗಮನಹರಿಸಲು ಸ್ವಚ್ಛ ಭಾರತ ಮಿಷನ್ (ಎಸ್ಬಿಎಂ) ಅನ್ನು 2014ರ ಅಕ್ಟೋಬರ್‌ನಲ್ಲಿ ಪ್ರಾರಂಭಿಸಲಾಯಿತು.
- ಮಹಾತ್ಮಾ ಗಾಂಧಿಯವರ 150 ನೇ ಜನ್ಮ ವಾರ್ಷಿಕೋತ್ಸವಕ್ಕೆ ಸಮರ್ಪಕವಾಗಿ ಗೌರವಿಸುವಂತೆ, 2019 ರ ಹೊತ್ತಿಗೆ ಸ್ವಚ್ಛ ಭಾರತ ಸಾಧಿಸಲು ಉದ್ದೇಶಿಸಲಾಗಿದೆ.
- SBM ಅನ್ನು ಎರಡು ಪ್ರಮುಖ ಉಪಕ್ರಮಗಳಾಗಿ ಅನುಷ್ಠಾನಗೊಳಿಸಲಾಗುತ್ತಿದೆ ಅವುಗಳೆಂದರೆ ಸ್ವಚ್ ಭಾರತ್ ಮಿಷನ್ (ಗ್ರಾಮೀಣ) ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಸ್ವಚ್ ಭಾರತ್ ಮಿಷನ್ (ನಗರ) ನಗರ ಪ್ರದೇಶಗಳಲ್ಲಿ.

- SBM-ಗ್ರಾಮೀಣದಡಿ ಗ್ರಾಮೀಣ ಪ್ರದೇಶಗಳಲ್ಲಿ ಬಯಲು ಮಲ ವಿಸರ್ಜನೆಯನ್ನು ತೊಡೆದುಹಾಕಲು ಪ್ರಯತ್ನಿಸಲಾಗುತ್ತಿದೆ. ಇದರ ಜೊತೆಗೆ ಶೌಚಾಲಯಗಳ ನಿರ್ಮಾಣ ಮತ್ತು ಬಳಕೆಗೆ ಪ್ರೇರೆಪಿಸಲಾಗುತ್ತಿದೆ. ಅಲ್ಲದೇ ಸಮರ್ಥನೀಯ ನೈರ್ಮಲ್ಯ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಸಮುದಾಯಗಳನ್ನು ಪ್ರೇರೇಪಿಸಲು, ಜಾಗೃತಿ ಮೂಡಿಸಲು ಮತ್ತು ನೈರ್ಮಲ್ಯಕ್ಕಾಗಿ ಸೂಕ್ತ ತಂತ್ರಜ್ಞಾನಗಳ ಬಳಕೆಯನ್ನು ಪ್ರೋತ್ಸಾಹಿಸಲು ಸಹ ಪ್ರಯತ್ನಿಸಲಾಗುತ್ತಿದೆ.
- While rural mission comes under the purview of Ministry of Drinking Water and Sanitation; the urban mission comes under Ministry of Urban Development.
- ಬಯಲು ಮಲ ವಿಸರ್ಜನೆ ಕರುಳಿನ ಸೋಂಕುಗಳು, ಅತಿಸಾರ, ಪೋಲಿಯೊ, ಹೆಪಟೈಟಿಸ್ ಮುಂತಾದ ವಿವಿಧ ರೋಗಗಳಿಗೆ ಎಡೆಮಾಡುತ್ತದೆ.

## 2. ಟೆಲಿಕಾಂ ಓಂಬುಡ್ಸ್‌ಮನ್ (ಸಾರ್ವಜನಿಕ ತನಿಖಾಧಿಕಾರಿ)

### ಪ್ರಮುಖ ಸುದ್ದಿ

- ದೂರಸಂಪರ್ಕ ವಲಯದಲ್ಲಿ ಗ್ರಾಹಕರ ಕುಂದುಕೊರತೆಗಳನ್ನು ನಿಭಾಯಿಸಲು ಓಂಬುಡ್ಸ್‌ಮನ್ ನ್ನು ಸ್ಥಾಪಿಸಲು TRAI ಎರಡು ಬಾರಿ ಶಿಫಾರಸು ಮಾಡಿದ್ದರೂ ವಿಳಂಬವಾಗುವುದನ್ನು ಸಂಸದೀಯ ಸಮಿತಿಯು ಕಳವಳ ವ್ಯಕ್ತಪಡಿಸಿದೆ.

### ಓಂಬುಡ್ಸ್‌ಮನ್ ನ ಅಗತ್ಯತೆಯೇನು ?

- ಪ್ರಸಕ್ತ ಪ್ರವೃತ್ತಿಗಳ ಪ್ರಕಾರ, ಸುಮಾರು 10 ಮಿಲಿಯನ್ ದೂರುಗಳು ಪ್ರತಿ ತ್ರೈಮಾಸಿಕದಲ್ಲಿ ಸಲ್ಲಿಸಿವೆ ಮತ್ತು ಪ್ರಸ್ತುತ ದೂರುಗಳ ಸಂಖ್ಯೆ ಹೆಚ್ಚುತ್ತಿವೆ.
- ಇತ್ತೀಚಿನ ದಿನಗಳಲ್ಲಿ ಭಾರತೀಯ ದೂರಸಂಪರ್ಕ ವಲಯದಲ್ಲಿ ನಡೆದ ಪ್ರಮುಖ ಬದಲಾವಣೆಗಳ ದೃಷ್ಟಿಯಿಂದ ಇದು ಸಹ ಅಗತ್ಯವಾಗಿದೆ.

## 3. ರಾಷ್ಟ್ರೀಯ ಪೌರತ್ವ ನೋಂದಣಿ (National Register of Citizens)

### ಪ್ರಮುಖ ಸುದ್ದಿ

- ಬಹುನಿರೀಕ್ಷಿತ ರಾಷ್ಟ್ರೀಯ ಪೌರತ್ವ ನೋಂದಣಿಯ ಮೊದಲ ಕರಡು ಬಿಡುಗಡೆಗೊಂಡಿದೆ. ರಾಷ್ಟ್ರೀಯ ಪೌರತ್ವ ನೋಂದಣಿಗೆ ಅರ್ಜಿ ಸಲ್ಲಿಸಿದ್ದ 3.29 ಕೋಟಿ ಜನರಲ್ಲಿ 1.9 ಕೋಟಿ ಜನರು ಅಧಿಕೃತವಾಗಿ ಭಾರತೀಯ ಪೌರತ್ವ ಹೊಂದಿದ್ದಾರೆ ಎಂದು ಕರಡಿನಲ್ಲಿ ಗುರುತಿಸಲಾಗಿದೆ.
- ಬಾಂಗ್ಲಾದೇಶದ ಗಡಿಯಿಂದ ಅಕ್ರಮವಾಗಿ ಅಸ್ಸಾಂ ಪ್ರವೇಶಿಸಿದವರನ್ನು ಪತ್ತೆ ಹಚ್ಚುವ ಸಲುವಾಗಿ ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ರಾಷ್ಟ್ರೀಯ ಪೌರತ್ವ ನೋಂದಣಿಯನ್ನು ರೂಪಿಸಲಾಗಿದೆ.

### ಹಿನ್ನಲೆ:

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಬಾಂಗ್ಲಾದೇಶದಿಂದ ಅಸ್ಸಾಂಗೆ ಅಕ್ರಮವಾಗಿ ವಲಸೆ ಬರುವುದನ್ನು ತಡೆಯುವ ಸಲುವಾಗಿ ರಾಷ್ಟ್ರೀಯ ಪೌರತ್ವ ನೋಂದಣಿಯನ್ನು ತಯಾರಿಸಲಾಗಿದೆ.

- 1951 ರಲ್ಲಿ ಮೊದಲ ಬಾರಿಗೆ ತಯಾರಿಸಲ್ಪಟ್ಟ ಎನ್‌ಆರ್ಸಿ ಹೊಂದಿರುವ ಏಕೈಕ ರಾಜ್ಯ ಅಸ್ಸಾಂ. ಸಂಪೂರ್ಣ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡುತ್ತಿರುವ ಸುಪ್ರೀಂ ಕೋರ್ಟ್ ಎನ್‌ಆರ್ಸಿಯ ಮೊದಲ ಕರಡು ಪ್ರತಿಯನ್ನು ಡಿಸೆಂಬರ್ 31 ರೊಳಗೆ ಪ್ರಕಟಿಸುವಂತೆ ಆದೇಶಿಸಿತ್ತು.

### ಎನ್‌ಆರ್‌ಸಿ ಪರಿಷ್ಕರಣೆ ಯಾಕೆ?

- ಎನ್‌ಆರ್‌ಸಿ ಹೊಂದಿರುವ ಏಕೈಕ ರಾಜ್ಯ ಅಸ್ಸಾಂ. 1951ರಲ್ಲಿ ಇದನ್ನು ಮೊದಲು ತಯಾರಿಸಲಾಗಿತ್ತು.
- 1971ರಿಂದ ಬಾಂಗ್ಲಾದೇಶ ಮೂಲಕ ಅಕ್ರಮ ವಲಸಿಗರು ರಾಜ್ಯಕ್ಕೆ ನುಸುಳಿರುವುದಾಗಿ ಅಖಿಲ ಅಸ್ಸಾಂ ವಿದ್ಯಾರ್ಥಿಗಳ ಸಂಘಟನೆ 6 ವರ್ಷ ನಿರಂತರ ಪ್ರತಿಭಟನೆ ನಡೆಸಿತ್ತು.

- 1985ರಲ್ಲಿ ಸಂಘಟನೆ ಜತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾಡಿ ಕೊಂಡ ಒಪ್ಪಂದದಂತೆ ಎನ್‌ಆರ್‌ಸಿ ಪಟ್ಟಿ ಪರಿಷ್ಕರಣೆಗೆ 2005ರಲ್ಲಿ ಚಾಲನೆ ನೀಡಲಾಯಿತು.

- ಕಳೆದ ಮೂರು ವರ್ಷಗಳಲ್ಲಿ ಎನ್‌ಆರ್‌ಸಿ ಕುರಿತು ಸುಪ್ರೀಂಕೋರ್ಟ್ 40 ಬಾರಿ ವಿಚಾರಣೆ ನಡೆಸಿ, ಡಿ.31, 2017ರೊಳಗೆ ಮೊದಲ ಕರಡು ಬಿಡುಗಡೆಗೆ ಸೂಚಿಸಿತ್ತು.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 4. ಪಶ್ಚಿಮ ಘಟ್ಟದಲ್ಲಿ ಹೊಸ ರಾತ್ರಿ ಕಪ್ಪೆ ಪ್ರಭೇದ ಪತ್ತೆ

### ಪ್ರಮುಖ ಸುದ್ದಿ

- ವಿಜ್ಞಾನಿಗಳು ಕೋಜಿಕೋಡೆಯ ಮಲಬಾರ್ ವನ್ಯಜೀವಿ ಅಭಯಾರಣ್ಯದಲ್ಲಿ ಹೊಸ ಕಪ್ಪೆ ಪ್ರಭೇದವನ್ನು ಪತ್ತೆಹಚ್ಚಿದ್ದು ಇದಕ್ಕೆ Nyctibatrachus mewasingh ಎಂದು ಹೆಸರಿಡಲಾಗಿದೆ.

- ಪೆರುವನ್ನಮುಳಿ ಅಣೆಕಟ್ಟು ಉದ್ದಕ್ಕೂ ಹರಿಯುವ ಸಣ್ಣ ನೀರಿನ ಝರಿಯಲ್ಲಿ ಹೊಸ ಕಪ್ಪೆ ಪ್ರಭೇದವನ್ನು ಪತ್ತೆ ಹಚ್ಚಲಾಗಿದೆ. ಭಾರತದ ಉದ್ದಗಲಕ್ಕೂ ಕೈಗೊಳ್ಳಲಾಗುತ್ತಿರುವ ಉಭಯಜೀವಿಗಳ ಸಂಶೋಧನೆಗೆ ಇದು ಮಹತ್ವರ ಕೊಡುಗೆಯಾಗಿದೆ.

ಮೆವಸಿಂಗ್ ರಾತ್ರಿ ಕಪ್ಪೆ ಬಗ್ಗೆ:

- ಇದು ಪಶ್ಚಿಮ ಘಟ್ಟ ಪರ್ವತ ಶ್ರೇಣಿಗೆ ಮಾತ್ರ ಸ್ಥೀಮಿತವಾಗಿರುವ ನಿಕ್ಟಿಬಾಟ್ರಾಕಸ್ (ಸಾಮಾನ್ಯವಾಗಿ ರಾತ್ರಿ ಕಪ್ಪೆಗಳು ಎಂದು ಕರೆಯಲ್ಪಡುತ್ತದೆ) ಗುಂಪಿಗೆ ಸೇರಿದೆ.
- ಈ ಗುಂಪಿನಲ್ಲಿ ಮೆವಸಿಂಗ್ ರಾತ್ರಿ ಕಪ್ಪೆ ಸೇರಿದಂತೆ ಒಟ್ಟು 36 ಕಪ್ಪೆಗಳಿವೆ. ಪರಿಸರ ವಿಜ್ಞಾನಕ್ಕೆ ಅಪಾರ ಕೊಡುಗೆ ನೀಡಿರುವ ವನ್ಯಜೀವಿ ವಿಜ್ಞಾನಿ ಮೆವಸಿಂಗ್ ರವರ ಗೌರವಾರ್ಥವಾಗಿ ಈ ಹೊಸ ಪ್ರಭೇದಕ್ಕೆ ಅವರ ಹೆಸರನ್ನು ಇಡಲಾಗಿದೆ.

IAS/KAS

## 5. ಒಸಿ ಐ ಮತ್ತು ಪಿ ಐ ಓ ಕಾರ್ಡ್ ಗಳು

ಪ್ರಮುಖ ಸುದ್ದಿ

ನಮ್ಮ ಐಎಎಸ್ ಅಕಾಡೆಮಿ

- ಭಾರತೀಯ ಮೂಲದ ವ್ಯಕ್ತಿಯ (ಪಿಐಒ) ಕಾರ್ಡುಗಳನ್ನು ಒಸಿಐ ಕಾರ್ಡ್ ಗಳಿಗೆ ಉಚಿತವಾಗಿ ಬದಲಿಸುವ ಯೋಜನೆಯನ್ನು ಕೇಂದ್ರ ಸರ್ಕಾರ ಸ್ಥಗಿತಗೊಳಿಸಿದೆ. ಆದಾಗ್ಯೂ, ಬದಲಾವಣೆ ಮಾಡಬೇಕೆಂದರೆ ಶುಲ್ಕವನ್ನು ಪಾವತಿಸಬೇಕಾಗುತ್ತದೆ.

ಏನಿದು ಒಸಿಐ, ಪಿಐಓ, ?

- ಭಾರತದಿಂದ ಹೋಗಿ ವಿದೇಶದಲ್ಲಿ ವಾಸಿಸುವವರನ್ನು ಮೂರು ಪ್ರಮುಖ ವರ್ಗಗಳನ್ನು ವರ್ಗೀಕರಿಸಬಹುದು. ಅವುಗಳೆಂದರೆ ನಾನ್-ರೆಸಿಡೆಂಟ್ ಇಂಡಿಯನ್ಸ್ ( NRI ), ಭಾರತೀಯ ಮೂಲದ ವ್ಯಕ್ತಿ (PIO) ಮತ್ತು ಸಾಗರೋತ್ತರ ಭಾರತೀಯ ಪೌರತ್ವ (OCI).

- ಈ ಕಾರ್ಡುಗಳು ವಿಲೀನಗೊಂಡು ಭಾರತೀಯ ಮೂಲದ ವಿದೇಶೀ ಪ್ರಜೆಗಳಿಗೆ ಗರಿಷ್ಠ ಸಾಧ್ಯ ಅನುಕೂಲಗಳನ್ನು ನೀಡುವುದಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ 2014 ರಲ್ಲಿ ಘೋಷಿಸಿದ್ದರು.
- ವಿದೇಶೀ ಭಾರತೀಯ ಪ್ರಜೆಗಳಿಗೆ ನೆರವಾಗಲು 2002ರಲ್ಲಿ ಮೊದಲ ಬಾರಿಗೆ ಜಾರಿಗೆ ತರಲಾದ ಪಿಐಒ ಕಾರ್ಡ್ ಪ್ರವಾಸ, ಕೆಲಸ ಮತ್ತು 15 ವರ್ಷ ಭಾರತದಲ್ಲಿ ನೆಲೆಸಲು ಬಳಸಬಹುದಾಗಿತ್ತು. 2005ರಿಂದ ನೀಡಲಾಗುತ್ತಿರುವ ಒಸಿಐ ಕಾರ್ಡ್‌ಗೆ ಶಾಶ್ವತ ಮಾನ್ಯತೆ ಇದ್ದು, ಪಿಐಒ ಕಾರ್ಡ್‌ಗಿಂತ ಹೆಚ್ಚಿನ ಪ್ರಯೋಜನಗಳು ಲಭ್ಯ.

## 6. “ನಾರಿ” ಪೋರ್ಟಲ್

### ಪ್ರಮುಖ ಸುದ್ದಿ

- ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ “ನಾರಿ (NARI)” ಪೋರ್ಟಲ್ ಅನ್ನು ಹೊರತಂದಿದೆ. ಮಹಿಳೆಯರಿಗಾಗಿ ಜಾರಿಗೆ ತಂದಿರುವ ಕಾರ್ಯಕ್ರಮಗಳ ಮಾಹಿತಿಗಳು ಸುಲಭವಾಗಿ ಲಭ್ಯವಾಗುವ ಸಲುವಾಗಿ ನಾರಿ ವೆಬ್ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಲಾಗಿದೆ.

### ನಾರಿ ಪೋರ್ಟಲ್ ಬಗ್ಗೆ

- ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಡೆಸುತ್ತಿರುವ ಯೋಜನೆಗಳ ಬಗ್ಗೆ ಮಾಹಿತಿಯನ್ನು ಪೋರ್ಟಲ್ ಒಳಗೊಂಡಿದೆ.
- ವೆಬ್ ಪೋರ್ಟಲ್ ನಲ್ಲಿ ಯೋಜನೆಗಳನ್ನು ಒದಗಿಸುವ ಸಚಿವಾಲಯಗಳು, ಇಲಾಖೆಗಳು ಮತ್ತು ಸ್ವಾಯತ್ತ ಸಂಸ್ಥೆಗಳ ಲಿಂಕ್ಗಳು ಲಭ್ಯವಿರಲಿವೆ.
- ಅಲ್ಲದೇ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸುವ ಮತ್ತು ದೂರುಗಳ ಪರಿಹಾರಕ್ಕೆ ಅವಕಾಶ ಕಲ್ಪಿಸಲಿದೆ.

- ನಾರಿ ಪೋರ್ಟಲ್ ಮಹಿಳೆಯರ ಜನಜೀವನದ ಮೇಲೆ ಪರಿಣಾಮ ಬೀರುವ ಅಂಶಗಳ ಬಗ್ಗೆ ಸಮಗ್ರ ಮಾಹಿತಿಯನ್ನು ನೀಡಲಿದೆ. ಈ ಪೋರ್ಟಲ್ 350ಕ್ಕೂ ಅಧಿಕ ಸರ್ಕಾರಿ ಯೋಜನೆಗಳು ಮತ್ತು ಇತರ ಪ್ರಮುಖ ಮಾಹಿತಿಗಳ ಸಾರಾಂಶವನ್ನು ಹೊಂದಿರುತ್ತದ.ಎ ಈ ಯೋಜನೆಗಳನ್ನು ಏಳು ವಿಭಿನ್ನ ವರ್ಗಗಳಲ್ಲಿ ವಿಂಗಡಿಸಲಾಗಿದ್ದು, ಆರೋಗ್ಯ, ಶಿಕ್ಷಣ, ಗೃಹನಿರ್ಮಾಣ ಮತ್ತು ವಸತಿ, ಉದ್ಯೋಗ, ಹಿಂಸೆ ತಡೆಯುವುದು, ನಿರ್ಧಾರ ಕೈಗೊಳ್ಳುವುದು ಮತ್ತು ಸಮಾಜ ಬೆಂಬಲ ವಿಭಾಗಗಳನ್ನು ಹೊಂದಿದೆ. ಆರ್ಥಿಕವಾಗಿ ದುರ್ಬಲರಾದ ಮಹಿಳೆಯರನ್ನು ಸಬಲೀಕರಿಸಲು ಕೇಂದ್ರ ಸರ್ಕಾರ ಹೇಗೆ ಗಮನ ಹರಿಸಿದೆ ಮತ್ತು ಇದಕ್ಕಾಗಿ ನೇರ ಪ್ರಯೋಜನ ವರ್ಗಾವಣೆ ಯೋಜನೆಯನ್ನು ಜಾರಿಗೆ ತಂದಿದೆ ಎಂಬ ಬಗ್ಗೆ ವಿವರಗಳನ್ನು ಇದು ಒಳಗೊಂಡಿರುತ್ತದೆ.

- ಇದು ಮಹಿಳೆಯರಿಗೆ ಉತ್ತಮ ಪೌಷ್ಟಿಕತೆ, ಆರೋಗ್ಯ ತಪಾಸಣೆಗೆ ಸಲಹೆಗಳು, ಪ್ರಮುಖ ರೋಗಗಳ ಬಗ್ಗೆ ಮಾಹಿತಿ, ಹೂಡಿಕೆ ಮತ್ತು ಉಳಿತಾಯಕ್ಕೆ ಸಲಹೆಗಳು, ಉದ್ಯೋಗ ಶೋಧನೆ ಮತ್ತು ಸಂದರ್ಶನಕ್ಕೆ ಅಗತ್ಯ ನೆರವು, ಮಹಿಳೆಯರ ವಿರುದ್ಧದ ಅಪರಾಧ ಕೃತ್ಯಗಳ ಬಗ್ಗೆ ಮಾಹಿತಿ ಮತ್ತು ಅದನ್ನು ವರದಿ ಮಾಡುವ ವಿಧಾನ, ಕಾನೂನು ನೆರವು ಕೋಶಗಳ ಸಂಪರ್ಕ, ಸರಳ ದತ್ತು ಸವೀಕರಾ ಮತ್ತಿತರ ವಿಷಯಗಳ ಬಗ್ಗೆ ಮಾಹಿತಿಗಳನ್ನು ಇದು ಒಳಗೊಂಡಿದೆ.

- ಇದು ಮಾಹಿತಿಯ ಮೂಲಕ ಮಹಿಳೆಯರ ಸಬಲೀಕರಣಕ್ಕೆ ಪೂರಕ ವಾತಾವರಣವನ್ನು ನಿರ್ಮಿಸಿಕೊಡುವುದು ಮಾತ್ರವಲ್ಲದೇ, ಮಹಿಳೆಯರು ತಮ್ಮ ಜೀವನಕೌಶಲವನ್ನು ವೃದ್ಧಿಸಿಕೊಳ್ಳಲು ಮತ್ತು ಸರ್ಕಾರ ಅವರಿಗಾಗಿ ನೀಡುವ ಸೌಲಭ್ಯಗಳ ಪ್ರಯೋಜನವನ್ನು ಸದುಪಯೋಗಪಡಿಸಿಕೊಳ್ಳುವಂತೆ ಮಾಡುವುದು ಇದರ ಮುಖ್ಯ ಉದ್ದೇಶವಾಗಿದೆ. ಇದು ಹಲವು ಸಚಿವಾಲಯಗಳು, ಇಲಾಖೆಗಳು ಮತ್ತು ಸ್ವಾಯತ್ತ ಸಂಸ್ಥೆಗಲ ಲಿಂಕ್‌ಗಳನ್ನು ಒದಗಿಸುತ್ತದೆ. ಆನ್‌ಲೈಲ್ ಅಪ್ಲಿಕೇಶನ್‌ಗಳು ಮತ್ತು ವ್ಯಾಜ್ಯ ಪರಿಹಾರಕ್ಕೆ ಸೂಕ್ತ ಆನ್‌ಲೈನ್ ಅರ್ಜಿಗಳ ನಮೂನೆಗಳನ್ನು ಇದು ಒಳಗೊಂಡಿದೆ.

## 7. ಇ-ಸಂವಾದ

### ಪ್ರಮುಖ ಸುದ್ದಿ

- ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಇ-ಸಂವಾದ ಪೋರ್ಟಲ್‌ಗೆ ಚಾಲನೆ ನೀಡಿದೆ.

### ಮುಖ್ಯ ಅಂಶಗಳು

- ಇದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದೊಂದಿಗೆ NGO ಗಳು ಮತ್ತು ನಾಗರಿಕ ಸಂಘ ಸಂಸ್ಥೆಗಳು ಸಂವಹನ ನಡೆಸಲು ಆರಂಭಿಸಲಾಗಿರುವ ಆನ್ಲೈನ್ ವೇದಿಕೆಯಾಗಿದೆ.

- ಇ-ಸಂವಾದ ಪೋರ್ಟಲ್ ಮೂಲಕ ಎನ್ಜಿಒಗಳು ಮತ್ತು ಸಿವಿಲ್ ಸೊಸೈಟಿ ತಮ್ಮ ಪ್ರತಿಕ್ರಿಯೆ, ಸಲಹೆಗಳನ್ನು, ಕುಂದುಕೊರತೆಗಳನ್ನು ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಬಹುದಾಗಿದೆ.

- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದೊಳಗಿನ ಹಿರಿಯ ಅಧಿಕಾರಿಗಳು ತಮ್ಮ ಸಂಬಂಧಪಟ್ಟ ವಿಷಯ ವ್ಯಾಪ್ತಿಯೊಳಗೆ ಸ್ವೀಕರಿಸಿದ ಪ್ರತಿಕ್ರಿಯೆ/ಸಲಹೆಗಳನ್ನು ವೀಕ್ಷಿಸಬಹುದಾಗಿದೆ. ಇದು ಮಹಿಳೆಯರು ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಪರಿಣಾಮಕಾರಿಯಾದ ನೀತಿಗಳನ್ನು ಮತ್ತು ಕ್ರಮಗಳನ್ನು ರೂಪಿಸುವಲ್ಲಿ ಸಹಾಯ ಮಾಡುತ್ತದೆ.

## 8. ಭಾರತ-ಪಾಕ್ ನಡುವೆ ಪರಮಾಣು ಪಟ್ಟಿ ವಿನಿಮಯ(India, Pakistan exchange list of nuclear installations)

### ಪ್ರಮುಖ ಸುದ್ದಿ

- ನವದೆಹಲಿ ಮತ್ತು ಇಸ್ಲಾಮಾಬಾದ್ ನ ವಿನಿಮಯ ಕೇಂದ್ರದಲ್ಲಿ ಏಕಕಾಲಕ್ಕೆ ಭಾರತ ಮತ್ತು ಪಾಕಿಸ್ತಾನ ರಾಜತಾಂತ್ರಿಕ ಮಾರ್ಗಗಳ ಮೂಲಕ ಎರಡು ರಾಷ್ಟ್ರಗಳ ನಡುವಿನ ಪರಮಾಣು ಘಟಕಗಳ ಪಟ್ಟಿಯನ್ನು ವಿನಿಮಯ ಮಾಡಿಕೊಂಡಿದೆ ಎಂದು ವಿದೇಶಾಂಗ ಸಚಿವಾಲಯ(ಎಂಇಎ) ಹೇಳಿದೆ .

## ಹಿನ್ನಲೆ

- ಪರಮಾಣು ಸ್ಥಾವರಗಳ ಮೇಲೆ ದಾಳಿ ನಿಷೇಧದ ಬಗ್ಗೆ ಒಪ್ಪಂದಕ್ಕೆ 1988ರ ಡಿಸೆಂಬರ್ 31ರಂದು ಎರಡು ದೇಶಗಳು ಸಹಿಹಾಕಿದ್ದು, ಜನವರಿ 27, 1991ರಂದು ಈ ಒಪ್ಪಂದವು ಜಾರಿಗೆ ಬಂದಿತ್ತು ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

- ಈ ಒಪ್ಪಂದದ ಪ್ರಕಾರ ಭಾರತ ಮತ್ತು ಪಾಕಿಸ್ತಾನವು ಪ್ರತಿ ವರ್ಷ ಜನವರಿ ಒಂದರಂದು ಪರಸ್ಪರರ ಪರಮಾಣು ಸ್ಥಾಪನೆಗಳು ಮತ್ತು ಸ್ಥಾವರಗಳ ಪಟ್ಟಿಯನ್ನು ವಿನಿಮಯ ಮಾಡಬೇಕಾಗಿದೆ. ಸೋಮವಾರ 27ನೇ ಬಾರಿಗೆ ಎರಡು ದೇಶಗಳು ಈ ಪಟ್ಟಿಯನ್ನು ವಿನಿಮಯ ಮಾಡಿಕೊಳ್ಳುತ್ತಿವೆ. ಮೊದಲ ವಿನಿಮಯವು ಜನವರಿ 1, 1992ರಂದು ನಡೆದಿತ್ತು ಎಂದು ಸಚಿವಾಲಯ ತಿಳಿಸಿದೆ.

## ಮಹತ್ವ

- 2017ರ ಸೆಪ್ಟೆಂಬರ್‌ನಲ್ಲಿ ಭಾರತದ ಅಣು ಮುಖ್ಯಸ್ಥರು ಭಾರತ ಇನ್ನು ಮುಂದೆ ಯುರೇನಿಯಂ ಸಮೃದ್ಧ ದೇಶವೆಂದು ಕರೆಸಿಕೊಳ್ಳಬಹುದು. ಈ ಕ್ಷೇತ್ರದಲ್ಲಿ ಆಗಿರುವ ನೂತನ ಶೋಧಗಳೇ ಇದಕ್ಕೆ ಕಾರಣ. ನಾನು ಅಣುಶಕ್ತಿ ಕಾರ್ಯಕ್ರಮವನ್ನು ಸೇರಿದಾಗ ಭಾರತದಲ್ಲಿ ಕೇವಲ 60,000 ಟನ್ ಹೊರತೆಗೆಯಬಹುದಾದ ಯುರೇನಿಯಂ ಇದೆ ಎಂದು ಹೇಳಲಾಗಿತ್ತು. ಆದರೆ ಇಂದು ಈ ಪ್ರಮಾಣ ನಾಲ್ಕರಿಂದ ಐದು ಪಟ್ಟು ಹೆಚ್ಚಾಗಿದೆ. ಭಾರತವನ್ನು ಯುರೇನಿಯಂ ಸ್ವಾವಲಂಬಿಯನ್ನಾಗಿ ಮಾಡುವಲ್ಲಿ ಸರಕಾರ ಕೂಡಾ ಸಂಪೂರ್ಣ ಬೆಂಬಲವನ್ನು ನೀಡುತ್ತಿದೆ ಎಂದು ತಿಳಿಸಿದ್ದರು.

- ಸ್ಥಳೀಯವಾಗಿ ತೆಗೆಯಲಾದ ಯುರೇನಿಯಂಅನ್ನು ವಿದ್ಯುತ್ ಉತ್ಪಾದಿಸಲು ಮತ್ತು ಪರಮಾಣು ಅಸ್ತ್ರಗಳ ಸಾಮರ್ಥ್ಯವನ್ನು ಹೆಚ್ಚಿಸಲು ಬಳಸಲಾಗುತ್ತದೆ. ಭಾರತದಲ್ಲಿ ಪ್ರಸಕ್ತ 22 ಪರಮಾಣು ವಿದ್ಯುತ್ ಸ್ಥಾವರಗಳಿದ್ದು ಇವುಗಳಿಗೆ 6,780 ಮೆಗಾ ವ್ಯಾಟ್ ವಿದ್ಯುತ್ ತಯಾರಿಸುವ

ಸಾಮರ್ಥ್ಯವಿದೆ. ಇವುಗಳ ಪೈಕಿ ತಮಿಳುನಾಡಿನ ಕುಡಂಕುಳಂನಲ್ಲಿರುವ 2 ಸ್ಥಾವರಗಳು ರಷ್ಯಾದಿಂದ ಆಮದು ಮಾಡಲಾಗುವ ಯುರೇನಿಯಂನಿಂದ ಕಾರ್ಯನಿರ್ವಹಿಸುತ್ತವೆ.

- ಅಣುಸ್ಥಾವರದ ಜೀವಮಾನದ ಸಂಪೂರ್ಣ 60 ವರ್ಷಗಳವರೆಗೂ ರಷ್ಯಾ ಯುರೇನಿಯಂ ಪೂರೈಕೆಯನ್ನು ಮುಂದುವರಿಸಲಿದೆ. ಕುಡಂಕುಳಂನ ಪ್ರತಿ 1000 ಮೆಗಾವ್ಯಾಟ್ ರಿಯಾಕ್ಟರ್ ದಿನವಿಡೀ ಕಾರ್ಯನಿರ್ವಹಿಸಲು ಹಲವಾರು ಟನ್ ಯುರೇನಿಯಂನ ಅಗತ್ಯವಿದೆ.

## 9. ಪಾರ್ಕರ್ ಸೌರ ಪ್ರೋಬ್

### ಪ್ರಮುಖ ಸುದ್ದಿ

- ಸೂರ್ಯನ ರಹಸ್ಯ ಭೇದಿಸಲು ನಾಸಾ ಸಜ್ಜಾಗಿದ್ದು, ಐತಿಹಾಸಿಕ ಪಾರ್ಕರ್ ಸೌರ ಪ್ರೋಬ್ ಮಿಷನ್ ಅನ್ನು 2018ರಲ್ಲಿ ಆರಂಭಿಸುವುದಾಗಿ ಹೇಳಿದೆ. ಸೂರ್ಯನಲ್ಲಾಗುವ ಬದಲಾವಣೆಯನ್ನು ಬಗ್ಗೆ ಗ್ರಹಿಸುವಲ್ಲಿ ಇದು ಪ್ರಮುಖ ಪಾತ್ರವಹಿಸಲಿದೆ.

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಪಾರ್ಕರ್ ಸೌರ ಪ್ರೋಬ್ ಬಗ್ಗೆ

- ಸೂರ್ಯನಲ್ಲಿ ಬದಲಾಗುವ ಪರಿಸ್ಥಿತಿಗಳು ಸೌರಮಂಡಲದೊಳಗೆ ಹರಡಿ ಭೂಮಿಯ ಮೇಲೆ ಮತ್ತು ಇತರ ಗ್ರಹಗಳ ಮೇಲೆ ಪರಿಣಾಮ ಬೀರುವುದರಿಂದ ಈ ಬಗ್ಗೆ ಅಧ್ಯಯನ ನಡೆಸುವುದು ಮಹತ್ವವೆನಿಸಿದೆ.
- ಪಾರ್ಕರ್ ನೌಕೆ ಈ ಮುಂಚಿನ ಯಾವುದೇ ಬಾಹ್ಯಾಕಾಶ ನೌಕೆಗಿಂತ ಸೂರ್ಯನ ಹತ್ತಿರಕ್ಕೆ ಚಲಿಸಲಿದ್ದು, ಅತಿಯಾದ ಶಾಖ ಮತ್ತು ವಿಕಿರಣ ಪರಿಸ್ಥಿತಿಗಳನ್ನು ಎದುರಿಸಿ ಅಧ್ಯಯನ ನಡೆಸಲಿದೆ.

- 60 ವರ್ಷಗಳ ಹಿಂದೆಯೇ ಸೌರ ಮಾರುತದ ಇರುವಿಕೆಯನ್ನು ಸೂಚಿಸಿದ್ದ ಖಗೋಳಶಾಸ್ತ್ರಜ್ಞ ಯುಗೀನ್ ಪಾರ್ಕರ್ ಅವರ ಗೌರವಾರ್ಥ 'ಪಾರ್ಕರ್ ಸೌರ ಶೋಧನಾನೌಕೆ' ಎಂದು ಹೆಸರಿಸಿರುವುದಾಗಿ ನಾಸಾ ತಿಳಿಸಿದೆ.

- ಈ ನೌಕೆಯು 2500 ಡಿಗ್ರಿ ಫ್ಯಾರಾನಿಟ್ ಉಷ್ಣತೆಯನ್ನು ತಡೆದುಕೊಳ್ಳುವ ಸಾಮರ್ಥ್ಯ ಹೊಂದಿದೆ. ಇದರಿಂದ ಸೂರ್ಯನ ಪ್ರಭಾವಲಯದಲ್ಲಿ ಹೆಚ್ಚು ಉಷ್ಣತೆ, ಶಾಖ ಹೊಂದಿರುವ ಹಿಂದಿನ ರಹಸ್ಯವನ್ನು ತಿಳಿಯಲೂ ಸಾಧ್ಯವಾಗಲಿದೆ. 4.5 ಇಂಚು ಕಾರ್ಬನ್ ಸಂಯೋಜಿತ ರಕ್ಷಣಾ ಕವಚವನ್ನು ಪಾರ್ಕರ್ ನೌಕೆ ಹೊಂದಿರಲಿದ್ದು ಅತಿ ತಾಪವನ್ನು ತಡೆದು ಶೋಧನಾಕಾರ್ಯ ನಡೆಸಲಿದೆ.

### ಸೂರ್ಯ ಮತ್ತು ಸೌರ ಮಾರುತದ (solar wind) ಅಧ್ಯಯನವೇಕೆ?

- ನಾವು ಹತ್ತಿರದಿಂದ ಅಧ್ಯಯನ ಮಾಡಬಹುದಾದ ಏಕೈಕ ನಕ್ಷತ್ರ ಸೂರ್ಯ. ಈ ನಕ್ಷತ್ರವನ್ನು ಅಧ್ಯಯನ ಮಾಡುವುದರ ಮೂಲಕ ನಾವು ವಿಶ್ವದ ನಕ್ಷತ್ರಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಬಹುದು.
- ಸೂರ್ಯ ಭೂಮಿಯ ಮೇಲೆ ಬೆಳಕು ಮತ್ತು ಉಷ್ಣತೆಯ ಮೂಲವಾಗಿದೆ. ಸೂರ್ಯನ ಬಗ್ಗೆ ಹೆಚ್ಚು ತಿಳಿಯುವ ಮೂಲಕ ಭೂಮಿಯಲ್ಲಿ ಹೇಗೆ ಜೀವಿಗಳ ಅಭಿವೃದ್ಧಿಯಾಯಿತು ಎಂಬುದನ್ನು ನಾವು ಹೆಚ್ಚು ಅರ್ಥಮಾಡಿಕೊಳ್ಳಬಹುದು.
- ಸೂರ್ಯನಲ್ಲಿನ ಚಟುವಟಿಕೆ ಭೂಮಿಯ ಮೇಲೆ ಪರಿಣಾಮ ಬೀರುತ್ತದೆ. ಇದು ಸೌರ ಮಾರುತದ ಮೂಲವಾಗಿದೆ. ಸೌರ ಮಾರುತವು ಸೂರ್ಯನಿಂದ ಅಯಾನೀಕರಿಸಿದ ಅನಿಲಗಳ ಹರಿವಾಗಿದ್ದು, ಭೂಮಿಯ ಮೇಲೆ ಪ್ರತಿ ಸೆಕೆಂಡಿಗೆ 500 ಕಿ.ಮೀ ವೇಗದಲ್ಲಿ (ಪ್ರತಿ ಗಂಟೆಗೆ ಒಂದು ಮಿಲಿಯನ್ ಮೈಲುಗಳು) ವೇಗದಲ್ಲಿ ಹರಿಯುತ್ತದೆ.
- ಸೌರ ಮಾರುತದಲ್ಲಾಗುವ ಬದಲಾವಣೆಗಳು ಭೂಮಿಯ ಕಾಂತೀಯ ಕ್ಷೇತ್ರದ ಮೇಲೆ ಪರಿಣಾಮ ಬೀರುತ್ತದೆ ಮತ್ತು ವಿಕಿರಣ ಪಟ್ಟಿ (Radiation Belt)ಯೊಳಗೆ ಶಕ್ತಿಯನ್ನು ತುಂಬುತ್ತದೆ.

- ಸೌರ ಮಾರುತವು ಸೌರ ವ್ಯವಸ್ಥೆಯನ್ನು ಹೆಚ್ಚು ಆವರಿಸಿಕೊಂಡಿದೆ. ನಾವು ಬಾಹ್ಯಾಕಾಶ ನೌಕೆ ಮತ್ತು ಗಗನಯಾತ್ರಿಗಳನ್ನು ನಭಕ್ಕೆ ಕಳುಹಿಸುವ ಮೊದಲು ಸೌರ ವ್ಯವಸ್ಥೆಯನ್ನು ಮೊದಲು ಅರ್ಥಮಾಡಿಕೊಳ್ಳಬೇಕಿದೆ.

**10. ಭಾರತದ ಎರಡನೇ ಅತಿದೊಡ್ಡ ಮೇಲ್ಛಾವಣಿ ಸೌರ ವಿದ್ಯುತ್ ಘಟಕವನ್ನು ಉತ್ತರ ಪ್ರದೇಶದಲ್ಲಿ**

**ಪ್ರಮುಖ ಸುದ್ದಿ**

- ಕೇಂದ್ರ ಸರ್ಕಾರಿ ಸ್ವಾಮ್ಯದ ಅನಿಲ ಉತ್ಪಾದಕ ಸಂಸ್ಥೆಯಾದ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್ (ಜಿಎಐಎಲ್) ಭಾರತದ ಎರಡನೇ ಅತಿದೊಡ್ಡ ಮೇಲ್ಛಾವಣಿ ಸೌರ ವಿದ್ಯುತ್ ಘಟಕವನ್ನು ಉತ್ತರ ಪ್ರದೇಶದಲ್ಲಿ ಆರಂಬಿಸಿದೆ.
- 5.76 ಮೆಗಾವ್ಯಾಟ್ ಸಾಮರ್ಥ್ಯದ ಸಶೌರ ವಿದ್ಯುತ್ ಘಟಕ ಇದಾಗಿದ್ದು, ಉತ್ತರ ಪ್ರದೇಶದ ಪಾಟಾದಲ್ಲಿರುವ ಗೇಲ್‌ನ ಪೆಟ್ರೋಕೆಮಿಕಲ್ ಸಂಕೀರ್ಣದಲ್ಲಿ ಇದನ್ನು ಅಳವಡಿಸಲಾಗಿದೆ. ಈ ಘಟಕವು ಉಗ್ರಾಣದ ಛಾವಣಿಯಲ್ಲಿದ್ದು, 65 ಸಾವಿರ ಚದರ ಮೀಟರ್ ಒಟ್ಟು ಪ್ರದೇಶವನ್ನು ಹೊಂದಿದೆ.

- ಇದು ಗೇಲ್‌ನ ವಾರ್ಷಿಕ ವಿದ್ಯುತ್ ಬೇಡಿಕೆಯಾದ 79 ಲಕ್ಷ ಕಿಲೋವ್ಯಾಟ್‌ನ ಪೈಕಿ ಶೇಕಡ 15ರಷ್ಟು ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿರುತ್ತದೆ.

**ದೇಶದ ಅತಿದೊಡ್ಡ ಸೌರ ಘಟಕ ಬಗ್ಗೆ**

- ದೇಶದ ಅತಿದೊಡ್ಡ ಸೌರ ವಿದ್ಯುತ್ ಘಟಕವನ್ನು 2015ರ ಡಿಸೆಂಬರ್ನಲ್ಲಿ ಟಾಟಾ ಪವರ್ ಸೋಲಾರ್, ಪಂಜಾಬ್‌ನ ಅಮೃತಸರದಲ್ಲಿ ಆರಂಭಿಸಿದೆ. ಇದರ ಉತ್ಪಾದನಾ ಸಾಮರ್ಥ್ಯ 12

ಮೆಗಾವ್ಯಾಟ್ ಆಗಿದೆ. ಇದು ವಾರ್ಷಿಕವಾಗಿ 150 ಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸುತ್ತದೆ. ಇದು ಪ್ರತಿ ವರ್ಷ 18 ಸಾವಿರ ಟನ್ ಇಂಗಾಲ ಪರಿಸರಕ್ಕೆ ಬಿಡುಗಡೆಯಾಗುವುದನ್ನು ತಡೆಯುತ್ತದೆ.

- ಭಾರತ 2022ರ ಒಳಗಾಗಿ 40 ಗಿಗಾವ್ಯಾಟ್ ಮೇಲ್ಛಾವಣಿ ಸೌರವಿದ್ಯುತ್ ಉತ್ಪಾದಿಸುವ ಗುರಿ ಹಾಕಿಕೊಂಡಿದೆ. ಗೇಲ್‌ನ ಸಕ್ರಿಯ ಸೌರ ವಿದ್ಯುತ್ ಯೋಜನೆಯು ವಾರ್ಷಿಕವಾಗಿ 6300 ಟನ್ ಇಂಗಾಲ ಹವಾಮಾನಕ್ಕೆ ಬಿಡುಗಡೆಯಾಗುವುದನ್ನು ಕಡಿಮೆ ಮಾಡಲಿದೆ.

### ಗ್ಯಾಸ್ ಇಂಡಿಯಾ ಲಿಮಿಟೆಡ್ (GAIL) ಬಗ್ಗೆ

- ಜಿಎಐಎಲ್ ಭಾರತ ಸರ್ಕಾರಿ ಸ್ವಾಮ್ಯದ ನೈಸರ್ಗಿಕ ಅನಿಲ ಸಂಸ್ಕರಣೆ ಮತ್ತು ವಿತರಣಾ ಕಂಪನಿಯಾಗಿದೆ. ಇದರ ಕೇಂದ್ರ ಕಚೇರಿ ನವದೆಹಲಿಯಲ್ಲಿದೆ.
- ಇದು ಈ ಕೆಳಗಿನ ವ್ಯಾಪಾರ ವಲಯಗಳನ್ನು ಒಳಗೊಂಡಿದೆ. ಅವುಗಳೆಂದರೆ, ನೈಸರ್ಗಿಕ ಅನಿಲ, ದ್ರವೀಕೃತ ಪೆಟ್ರೋಲಿಯಂ ಅನಿಲ ವರ್ಗಾವಣೆ, ದ್ರವರೂಪದ ಜಲಜನಕ, ಸಿಟಿ ಗ್ಯಾಸ್ ವಿತರಣೆ, ಪೆಟ್ರೋಕೆಮಿಕಲ್ ಶೋಧನೆ ಮತ್ತು ಉತ್ಪಾದನೆ. ಗೈಲ್‌ಟೆಲ್ ಮತ್ತು ವಿದ್ಯುತ್ ಉತ್ಪಾದನೆ.
- ಇದಕ್ಕೆ 2013ರ ಫೆಬ್ರವರಿಯಲ್ಲಿ ಭಾರತ ಸರ್ಕಾರದಿಂದ ಮಹಾರತ್ನ ಸ್ಥಾನಮಾನ ನೀಡಲಾಗಿದೆ. ಕೇವಲ ಇತರ ಆರು ಕೇಂದ್ರ ಸರ್ಕಾರಿ ಸ್ವಾಮ್ಯದ ಸಂಘಗಳು ಮಾತ್ರ ಈ ಮಹಾರತ್ನ ಗೌರವಕ್ಕೆ ಪಾತ್ರವಾಗಿವೆ.

## 11. ಸೌದಿ ಅರೇಬಿಯಾ ಮತ್ತು ಯುಎಇ ಯಲ್ಲಿ ಮೊದಲ ಬಾರಿಗೆ ವ್ಯಾಟ್ ಜಾರಿ

### ಪ್ರಮುಖ ಸುದ್ದಿ

- ಸೌದಿ ಅರೇಬಿಯಾ ಮತ್ತು ಸಂಯುಕ್ತ ಅರಬ್ ಒಕ್ಕೂಟವು (ಯುಎಇ) ಮೌಲ್ಯವರ್ಧಿತ ತೆರಿಗೆಯನ್ನು(ವ್ಯಾಟ್) ಜಾರಿಗೆ ತಂದಿವೆ. ಆ ಮೂಲಕ ಗಲ್ಫ್ ಸಹಕಾರ ಮಂಡಳಿ (GCC)ಯಲ್ಲಿ ಮೌಲ್ಯವರ್ಧಿತ ತೆರಿಗೆಯನ್ನು ಪರಿಚಯಿಸಿದೆ ಮೊದಲ ರಾಷ್ಟ್ರಗಳು ಎನಿಸಿವೆ.
- ಆರು ಸದಸ್ಯ ರಾಷ್ಟ್ರಗಳನ್ನು ಹೊಂದಿರುವ GCC ಯಲ್ಲಿ ಬಹ್ರೇನ್, ಕುವೈತ್, ಒಮಾನ್ ಮತ್ತು ಕತಾರ್ ಕೂಡ ವ್ಯಾಟ್ ಅನ್ನು ಪರಿಚಯಿಸಲು ಮುಂದಾಗಿವೆ. ಆದರೆ ಸದ್ಯದ ಮಟ್ಟಿಗೆ 2019ರ ವೇಳೆಗೆ ವ್ಯಾಟ್ ಜಾರಿಗೆ ತರುವುದನ್ನು ಮುಂದೂಡಿವೆ.

**ಹಿನ್ನಲೆ:**

- ಪೆಟ್ರೋಲ್ ಮತ್ತು ಡೀಸೆಲ್, ಆಹಾರ, ಬಟ್ಟೆ, ಯುಟಿಲಿಟಿ ಬಿಲ್ಲಳು ಮತ್ತು ಹೋಟೆಲ್ ಕೊಠಡಿಗಳು ಸೇರಿದಂತೆ ಬಹುತೇಕ ಸರಕು ಮತ್ತು ಸೇವೆಗಳ ಮೇಲೆ 5% ರಷ್ಟು ವ್ಯಾಟ್ ದರವನ್ನು ನಿಗದಿಪಡಿಸಲಾಗಿದೆ. ವೈದ್ಯಕೀಯ ಚಿಕಿತ್ಸೆ, ಹಣಕಾಸು ಸೇವೆಗಳು ಮತ್ತು ಸಾರ್ವಜನಿಕ ಸಾರಿಗೆ ಸೇರಿದಂತೆ ಇತರೆ ಸೇವೆಗಳ ಮೇಲೆ ಶೂನ್ಯ ವ್ಯಾಟ್ ದರ ಅಥವಾ ವಿನಾಯಿತಿ ನೀಡಲಾಗಿದೆ.

- ಸೌದಿ ಅರೇಬಿಯಾದಲ್ಲಿ, ಬಜೆಟ್ ಆದಾಯ ಶೇ.90% ಕ್ಕಿಂತ ಹೆಚ್ಚು ತೈಲ ಉದ್ಯಮದಿಂದ ಬಂದರೆ, ಯುಎಇಯಲ್ಲಿ ಇದು ಸುಮಾರು 80% ಆಗಿದೆ. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ ಸೇರಿದಂತೆ ಇತರೆ ಸಂಸ್ಥೆಗಳು ಬಜೆಟ್ ಆದಾಯವನ್ನು ಕೇವಲ ತೈಲ ಉದ್ಯಮದ ಮೇಲೆ ಅವಲಂಭಿತವಾಗದೆ ಇತರೆ ಮೂಲಗಳ ಕಡೆ ಗಮನ ಹರಿಸುವಂತೆ ಕರೆ ನೀಡಿದ್ದವು.

## 12. ಜಿಇಎಸ್ -2017 ಸಹ ಆಯೋಜನೆಗಾಗಿ ಭಾರತ ಮತ್ತು ಅಮೆರಿಕಾ ನಡುವೆ ತಿಳಿವಳಿಕೆ ಒಪ್ಪಂದಕ್ಕೆ ಸಂಪುಟದ ಅನುಮೋದನೆ

**ಪ್ರಮುಖ ಸುದ್ದಿ**

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆ ಭಾರತದಲ್ಲಿ ಜಾಗತಿಕ ಉದ್ಯಮಶೀಲತೆ ಶೃಂಗಸಭೆ 2017 (ಜಿಇಎಸ್ -2017)ನ್ನು ಸಹ ಆಯೋಜನೆಗಾಗಿ ಭಾರತ ಮತ್ತು ಅಮೆರಿಕಾ ನಡುವೆ ಆಗಿರುವ ತಿಳಿವಳಿಕೆ ಒಪ್ಪಂದಕ್ಕೆ ತನ್ನ ಪೂರ್ವಾನ್ವಯ ಅನುಮೋದನೆ ನೀಡಿದೆ.

## ಮುಖ್ಯ ಅಂಶಗಳು

- ಶೃಂಗಸಭೆಯನ್ನು ಸುಗಮವಾಗಿ ನಡೆಸಲು ಪಕ್ಷಕಾರರ ನಡುವೆ ಸಾರಿಗೆ ಮತ್ತು ಕಾರ್ಯಕ್ರಮದ ಸ್ಥಳಕ್ಕೆ ಸಂಬಂಧಿಸಿದ ಅಗತ್ಯಗಳೂ ಸೇರಿದಂತೆ ಸಹಕಾರದ ಕ್ಷೇತ್ರಗಳ ಅಗತ್ಯಗಳ ಜವಾಬ್ದಾರಿಗಳನ್ನು ಈ ತಿಳಿವಳಿಕೆ ಒಪ್ಪಂದ ನಿರೂಪಿಸುತ್ತದೆ.

- ಜಿ.ಇ.ಎಸ್. 2017, ಜಾಗತಿಕ ಕೈಗಾರಿಕಾ ನಾಯಕರೊಂದಿಗೆ, ನೆಟ್ ವರ್ಕಿಂಗ್ ಅಧಿವೇಶನಗಳು, ಪಿಚಿಂಗ್ ಸ್ಪರ್ಧೆಗಳು, ಕಾರ್ಯತಂತ್ರದ ಕಾರ್ಯಾಗಾರಗಳು ಮತ್ತು ಹೊಸ ಸಹಭಾಗಿತ್ವಗಳನ್ನು ರೂಪಿಸಲು ಸೆಕ್ಟರ್-ನಿರ್ದಿಷ್ಟ ಕಾರ್ಯಕ್ರಮಗಳೊಂದಿಗೆ ಸಭೆಗಳನ್ನು ನಡೆಸಲು.ಉದ್ಯಮಶೀಲರಿಗೆ ಮತ್ತು ಹೂಡಿಕೆದಾರರಿಗೆ ಅದ್ಭುತ ಅವಕಾಶಗಳನ್ನು ಒದಗಿಸಿತ್ತು. ಈ ಶೃಂಗಸಭೆಯು ಯುವ ಉದ್ಯಮಶೀಲರಿಗೆ ಅದರಲ್ಲೂ ಮಹಿಳಾ ಉದ್ಯಮಶೀಲರಿಗೆ ಮತ್ತು ಅಂಚಿನಲ್ಲಿರುವ ಗುಂಪುಗಳಿಗೆ ಮುಂಬರುವ ದಿನಗಳಲ್ಲಿ ಹೆಚ್ಚಿನ ಆರ್ಥಿಕ ಅವಕಾಶಗಳನ್ನು ಈ ವೇದಿಕೆ ಒದಗಿಸಲಿದೆ.

## ಹಿನ್ನೆಲೆ

- ಜಿಇಎಸ್ 2017 2017ರ ನವೆಂಬರ್ 28-30ರ ಅವಧಿಯಲ್ಲಿ ಹೈದ್ರಾಬಾದ್ ನಲ್ಲಿ ನಡೆದಿತ್ತು. ಇದರಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಸಿಇಓಗಳು, ನೀತಿ ನಿರೂಪಕರು, ಸರ್ಕಾರಿ ಅಧಿಕಾರಿಗಳಲ್ಲದೆ 150 ರಾಷ್ಟ್ರಗಳ 1500 ನೋಂದಾಯಿತ ಪ್ರತಿನಿಧಿಗಳು ಪಾಲ್ಗೊಂಡಿದ್ದರು.
- ಜಿಇಎಸ್ 2017ರ 18ನೇ ಆವೃತ್ತಿಯನ್ನು ಭಾರತದಲ್ಲಿ ಆಯೋಜಿಸುವ ನಿರ್ಧಾರವನ್ನು 2016ರ ಜೂನ್ 7ರಂದು ಅಮೆರಿಕದ ಅಂದಿನ ರಾಷ್ಟ್ರಾಧ್ಯಕ್ಷ ಬರಾಕ್ ಒಬಾಮಾ ಮತ್ತು ಭಾರತದ

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ನಡುವಿನ ಜಂಟಿ ಸಭೆಯಲ್ಲಿ ಕೈಗೊಳ್ಳಲಾಗಿತ್ತು. 2017ರ ಜೂನ್ 25 ರಿಂದ 27 ರವರೆಗೆ ಪ್ರಧಾನಮಂತ್ರಿಯವರು ಅಮೆರಿಕಾಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಇದನ್ನು ಪುನರುಚ್ಚರಿಸಿದರು ಮತ್ತು ಅಮೆರಿಕದ ಅಧ್ಯಕ್ಷರ ಸಲಹೆಗಾರರಾದ ಇವಾಂಕ ಟ್ರಂಪ್ ಅವರನ್ನು ಭಾರತದ ಜಿಎಸ್ಇ ನಲ್ಲಿ ಯುಎಸ್ ನಿಯೋಗದ ನೇತೃತ್ವ ವಹಿಸುವಂತೆ ಆಹ್ವಾನಿಸಿದ್ದರು. .

- ಜಿ..ಇ.ಎಸ್. ಉದಯೋನ್ಮುಕ ಉದ್ದಿಮೆದಾರರಿಗೆ ಮುಂಚೂಣಿಯ ವೇದಿಕೆಯಾಗಿತ್ತು. ಈ ಶೃಂಗಸಭೆಯು ಜಾಗತಿಕ ಕೈಗಾರಿಕಾ ನಾಯಕರು, ಅಂತಾರಾಷ್ಟ್ರೀಯ ಉದ್ಯಮಶೀಲರ ಜಾಲ, ನಾವಿನ್ಯದಾರು, ಹೂಡಿಕೆದಾರರನ್ನು ಭೇಟಿ ಮಾಡುವ ಅವಕಾಶ ಕಲ್ಪಿಸಿತ್ತು. ಈ ಶೃಂಗಸಭೆಯು ಉದ್ಯಮಶೀಲರು ಮತ್ತು ಹೂಡಿಕೆದಾರರಿಗೆ ಹೊಸ ಸಹಯೋಗಕ್ಕೆ ನೆರವಾಗುವಂಥ ಸ್ಪರ್ಧೆ, ವ್ಯೂಹಾತ್ಮಕ ಕಾರ್ಯಾಗಾರಗಳು ಮತ್ತು ಸೆಕ್ಟರ್ – ಕಾರ್ಯಕ್ರಮಗಳಿಗೆ ವೇದಿಕೆ ಒದಗಿಸಿತ್ತು.

- ಯುವ ಉದ್ಯಮದಾರರಿಗೆ ಅದರಲ್ಲೂ ಮಹಿಳಾ ಉದ್ಯಮಶೀಲರಿಗೆ ಮತ್ತು ನವೋದ್ಯಮಗಳಿಗೆ ಗಣನೀಯವಾಗಿ ಹೆಚ್ಚಿನ ಆರ್ಥಿಕ ಅವಕಾಶಗಳನ್ನು ಈ ಶೃಂಗಸಭೆ ಒದಗಿಸಿತ್ತು.

## 13. ಐಸಿಸಿಆರ್ ಅಧ್ಯಕ್ಷರಾಗಿ ವಿನಯ್ ಸಹಸ್ರಬುದ್ಧೆ ನೇಮಕ

### ಪ್ರಮುಖ ಸುದ್ದಿ

- ರಾಜ್ಯಸಭಾ ಸದಸ್ಯ ವಿನಯ ಸಹಸ್ರಬುದ್ಧೆ ಅವರನ್ನು ಭಾರತೀಯ ಸಾಂಸ್ಕøತಿಕ ಮಂಡಳಿಯ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ. ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಈ ಹುದ್ದೆಗೆ ಸಹಸ್ರಬುದ್ಧೆ ಅವರನ್ನು ನೇಮಕ ಮಾಡಿದ್ದಾರೆ.

- ಈ ಹಿಂದೆ ಈ ಹುದ್ದೆಯಲ್ಲಿದ್ದ ಖ್ಯಾತ ಚಿಂತಕ ಮತ್ತು ವಾಗ್ಮಿ ಲೋಕೇಶ್‌ಚಂದ್ರ ಅವರ ಹುದ್ದೆಗೆ ಸಹಸ್ರಬುದ್ಧೆ ನೇಮಕಗೊಂಡಿದ್ದಾರೆ. 2014ರ ಅಕ್ಟೋಬರ್‌ನಲ್ಲಿ ಇವರನ್ನು ಕೇಂದ್ರದ ಎನ್‌ಡಿಎ

ಸರ್ಕಾರ ನೇಮಕ ಮಾಡಿತ್ತು ಹಾಗೂ ಅವರ ಮೂರು ವರ್ಷಗಳ ಅಧಿಕಾರಾವಧಿ ಕೊನೆಗೊಂಡಿರುತ್ತದೆ.

### ಐಸಿಸಿಆರ್ (ICCR) ಬಗ್ಗೆ

- ಐಸಿಸಿಆರ್ ಭಾರತದ ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿದ್ದು, ಭಾರತದ ಬಾಹ್ಯ ಸಂಸ್ಕೃತಿಯನ್ನು ಇತರ ದೇಶಗಳೊಂದಿಗೆ ಮತ್ತು ಅದರ ಜನರೊಂದಿಗೆ ವಿನಿಮಯ ಮಾಡಿಕೊಳ್ಳುವ ಮೂಲಕ ಸಂಬಂಧಗಳನ್ನು ಬಲಪಡಿಸುವ ಕಾರ್ಯವನ್ನು ಮಾಡುತ್ತಿದೆ. ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಶನ್ಸ್ (ಐಸಿಸಿಆರ್) ಅನ್ನು 1950 ರಲ್ಲಿ ಸ್ವತಂತ್ರ ಭಾರತದ ಮೊದಲ ಶಿಕ್ಷಣ ಮಂತ್ರಿ ಮೌಲಾನಾ ಅಬುಲ್ ಕಲಾಮ್ ಆಜಾದ್ ಅವರು ಸ್ಥಾಪಿಸಿದರು.

### ಐಸಿಸಿಆರ್ ಧ್ಯೇಯ:

- ಭಾರತದ ಬಾಹ್ಯ ಸಾಂಸ್ಕೃತಿಕ ಸಂಬಂಧಗಳಿಗೆ ಸಂಬಂಧಿಸಿದ ನೀತಿಗಳು ಮತ್ತು ಕಾರ್ಯಕ್ರಮಗಳ ಸೂತ್ರೀಕರಣ ಮತ್ತು ಅನುಷ್ಠಾನದಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಇದರ ಗುರಿಯಾಗಿದೆ. ಭಾರತ ಮತ್ತು ಇತರ ದೇಶಗಳ ನಡುವಿನ ಸಾಂಸ್ಕೃತಿಕ ಸಂಬಂಧಗಳು ಮತ್ತು ಪರಸ್ಪರ ಸಹಕಾರ ಬೆಳೆಸುವುದು ಮತ್ತು ಬಲಪಡಿಸುವುದು. ಇತರ ದೇಶಗಳು ಮತ್ತು ಜನರೊಂದಿಗೆ ಸಾಂಸ್ಕೃತಿಕ ವಿನಿಮಯವನ್ನು ಉತ್ತೇಜಿಸುವುದು ಮತ್ತು ರಾಷ್ಟ್ರಗಳೊಂದಿಗೆ ಸಂಬಂಧಗಳನ್ನು ಬೆಳೆಸುವುದು.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 14. ಗೋಧಿಯ ಉತ್ಪಾದನೆಯನ್ನು ಹೆಚ್ಚಿಸಲು ಪ್ರಪಂಚದ ಮೊದಲ 'ವೇಗ ತಳಿ ' (Speed Breeding) ತಂತ್ರ

### ಪ್ರಮುಖ ಸುದ್ದಿ

- ಆಸ್ಟ್ರೇಲಿಯಾದ ವಿಜ್ಞಾನಿಗಳು ವಿಶ್ವದ ಮೊದಲ 'ವೇಗ ತಳಿ' ವಿಧಾನವನ್ನು ಅಭಿವೃದ್ಧಿಪಡಿಸಿದ್ದಾರೆ, ಇದು ಬೆಳೆಯ ಉತ್ಪಾದನೆಯನ್ನು ಮೂರು ಪಟ್ಟು ಹೆಚ್ಚಿಸಲಿದೆ.

- ವಿಜ್ಞಾನಿಗಳು ವೇಗ ತಳಿ ತಂತ್ರಜ್ಞಾನವನ್ನು ಬಳಸಿಕೊಂಡು ಹೊಸ 'ಡಿಎಸ್ ಫ್ಯಾರಡೆ' ಎಂಬ ಗೋಧಿ ತಳಯನ್ನು ಅಭಿವೃದ್ಧಿಪಡಿಸಿದ್ದು, ಈ ವರ್ಷದಲ್ಲಿ ಬಿಡುಗಡೆಗೊಳಿಸಲಿದ್ದಾರೆ. ಡಿಎಸ್ ಫ್ಯಾರಡೆಯು ಹೆಚ್ಚಿನ ಪ್ರೊಟೀನ್ ಹಾಗೂ ಕೊಯ್ಲಿಗಿಂತ ಮುಂಚೆ ಮೊಳಕೆ ಬರುವುದನ್ನು ತಡೆಯುವ ಸಾಮರ್ಥ್ಯವನ್ನು ಹೊಂದಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ತಂತ್ರಜ್ಞಾನದ ಪ್ರಾಮುಖ್ಯತೆ ಬಗ್ಗೆ

- ಸ್ಪೀಡ್ ಬ್ರೀಡಿಂಗ್ ತಂತ್ರಗಳನ್ನು ಬಳಸಿ ವಿಶೇಷವಾಗಿ ಪರಿವರ್ತಿತ ಗಾಜಿನ ಮನೆಗಳಲ್ಲಿ ವಿಜ್ಞಾನಿಗಳು ಆರು ತಲೆಮಾರಿನ ಗೋಧಿ, ಕಡಲೆ ಮತ್ತು ಬಾರ್ಲಿ ಗಿಡಗಳನ್ನು ಮತ್ತು ಒಂದು ವರ್ಷದಲ್ಲಿ ನಾಲ್ಕು ತಲೆಮಾರಿನ ಕ್ಯಾನೋಲ ಸಸ್ಯಗಳನ್ನು ಬೆಳೆಸಬಹುದು.
- ಸಾಮಾನ್ಯ ಗಾಜಿನ ಮನೆಗಳಲ್ಲಿ ಎರಡು ಅಥವಾ ಮೂರು ತಲೆಮಾರುಗಳ ತಳಿಯನ್ನು ಮಾತ್ರ ಬೆಳೆಸಬಹುದು. ನಿಯಂತ್ರಿತ ಹವಾಗುಣ ಪರಿಸ್ಥಿತಿಗಳಲ್ಲಿ ಬೆಳೆದ ಸಸ್ಯಗಳ ಗುಣಮಟ್ಟ ಮತ್ತು ಇಳುವರಿಯು ನಿಯಮಿತವಾದ ಗಾಜಿನಮನೆಗಳಲ್ಲಿ ಬೆಳೆದ ಗಿಂತಲೂ ಉತ್ತಮವಾಗಿದೆ.

### ಸ್ಪೀಡ್ ಬ್ರೀಡಿಂಗ್ ತಂತ್ರಜ್ಞಾನದ ಬಗ್ಗೆ

- ಈ ತಂತ್ರಜ್ಞಾನದಲ್ಲಿ ಸಂಪೂರ್ಣವಾಗಿ ನಿಯಂತ್ರಿತ ಬೆಳವಣಿಗೆ ಪರಿಸರವನ್ನು ಬಳಸಲಾಗುತ್ತದೆ. ತೀವ್ರವಾದ ದ್ಯುತಿಸಂಶ್ಲೇಷಣೆಗೆ ಸಹಾಯ ಮಾಡಬಲ್ಲ ಎಲ್ಇಡಿ ದೀಪಗಳನ್ನು ದಿನಕ್ಕೆ 22 ಗಂಟೆಗಳವರೆಗೆ ಬಳಸಲಾಗುತ್ತದೆ.

### ಎಲ್ಇಡಿ ದೀಪಗಳು ಏಕೆ ?

- ಎಲ್ಇಡಿ ದೀಪಗಳು ಸೋಡಿಯಂ ವೇಪರ್ ದೀಪಗಳಿಗೆ ಹೋಲಿಸಿದರೆ ಖರ್ಚನ್ನು ಕಡಿಮೆಗೊಳಿಸುತ್ತವೆ. ಅಲ್ಲದೇ ಸೋಡಿಯಂ ದೀಪಗಳು ಹೆಚ್ಚು ಶಾಖವನ್ನು ಉತ್ಪಾದಿಸುತ್ತವೆ ಮತ್ತು ಕಳಪೆ ಗುಣಮಟ್ಟದ ಬೆಳಕನ್ನು ಹೊರಸೂಸುತ್ತವೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ತೂರಿಗೆ/ಮೈಸೂರಿಗೆ

## 15. ಎಚ್1ಬಿ ವೀಸಾ

### ಪ್ರಮುಖ ಸುದ್ದಿ

- ಅಮೆರಿಕದಲ್ಲಿ ಉದ್ಯೋಗ ನಿರ್ವಹಿಸುತ್ತಿರುವ ಭಾರತೀಯರಿಗೆ ಆತಂಕ ಮೂಡಿಸುವ ಸುದ್ದಿ ಹೊರಹೊಮ್ಮಿದೆ. ಎಚ್1ಬಿ ವೀಸಾ ಕುರಿತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಿಲುವು ಜಾರಿಗೆ ಬಂದರೆ, ಸುಮಾರು 5 ಲಕ್ಷದಷ್ಟು ಭಾರತೀಯ ಉದ್ಯೋಗಿಗಳು ತವರಿಗೆ ಮರಳಬೇಕಾಗಿ ಬರಲಿದೆ.

### ಮುಖ್ಯ ಅಂಶಗಳು

- ಎಚ್1ಬಿ ವೀಸಾದಿಂದ ಸಿಗುವ 6 ವರ್ಷಗಳ ಅಮೆರಿಕ ವಾಸ ಮುಗಿಸಿ, ಗ್ರೀನ್ ಕಾರ್ಡ್‌ಗಾಗಿ ಕಾಯುತ್ತಿರುವವ ಲಕ್ಷಾಂತರ ಮಂದಿ ಇಲ್ಲಿದ್ದಾರೆ. ಈಗ ಇರುವ ನಿಯಮಾವಳಿಯ ಪ್ರಕಾರ, ಗ್ರೀನ್

ಕಾರ್ಡ್ ಸಿಗುವವರೆಗೂ ಇವರು ಇಲ್ಲಿರಬಹುದು. ಗೃಹ ಇಲಾಖೆ ರೂಪಿಸುತ್ತಿರುವ ಹೊಸ ಕಠಿಣ ನಿಯಮಾವಳಿಯ ಪ್ರಕಾರ, ಎಚ್1ಬಿ ವೀಸಾದ ಅವಧಿ ಮುಗಿದಿದ್ದರೆ, ಗ್ರೀನ್ ಕಾರ್ಡ್‌ಗಾಗಿ ಕಾಯುತ್ತಿರುವವರೂ ಇಲ್ಲಿರುವಂತಿಲ್ಲ. ಅಮೆರಿಕ ತೊರೆಯಲೇಬೇಕು. ಇದು ಕಠಿಣವಾಗಿ ಜಾರಿಯಾದರೆ 5 ಲಕ್ಷ ಮಂದಿ ಭಾರತಕ್ಕೆ ಮರಳಬೇಕು.

- ಗ್ರೀನ್ ಕಾರ್ಡ್‌ಗಾಗಿ ಅಮೆರಿಕದಲ್ಲಿ ಕಾಯುತ್ತಿರುವವರಲ್ಲಿ ಭಾರತ ಹಾಗೂ ಚೀನಾದ ಉದ್ಯೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕೆಲವರು 10-12 ವರ್ಷಗಳಿಂದ ಗ್ರೀನ್ ಕಾರ್ಡ್‌ಗಾಗಿ ಕಾಯುತ್ತಿದ್ದಾರೆ. ಇದನ್ನು ಉದ್ಯೋಗಿಗಳ ನಡುವೆ ವಿನೋದಕ್ಕಾಗಿ 'ಎಚ್1ಬಿ ಹೆಲ್' ಎಂದೇ ಕರೆಯಲಾಗುತ್ತದೆ.

- ತಾಂತ್ರಿಕವಾಗಿ ಟ್ರಂಪ್ ಜಾರಿಗೆ ತರುತ್ತಿರುವ ಕ್ರಮಗಳು ಪ್ರಶ್ನಾರ್ಹವೇ ಅಲ್ಲ. ಯಾಕೆಂದರೆ ಎಚ್1ಬಿ ವೀಸಾ ಇರುವುದು ಅಮೆರಿಕದಲ್ಲಿರುವ ಕೌಶಲ್ಯಯುಕ್ತ ಉದ್ಯೋಗಿಗಳ ಕೊರತೆಯನ್ನು ನೀಗಿಕೊಳ್ಳುವುದಕ್ಕಾಗಿಯೇ ಹೊರತು, ಅಮೆರಿಕ ವಲಸೆಗೆ, ವಾಸಕ್ಕೆ ಪರವಾನಗಿಯಾಗಿ ಅಲ್ಲ. ಆದರೆ ವರ್ಷಾಂತರಗಳಿಂದ, ಕೌಶಲ್ಯಯುಕ್ತ ಉದ್ಯೋಗಿಗಳು ಗ್ರೀನ್ ಕಾರ್ಡ್ ಪಡೆದು ಅಮೆರಿಕದ ಶಾಶ್ವತ ನಿವಾಸಿಗಳಾಗಲು ಎಚ್1ಬಿ ವೀಸಾದ ದಾರಿಯನ್ನು ಅನುಸರಿಸುತ್ತಿದ್ದಾರೆ. ಸಾಫ್ಟ್‌ವೇರ್ ಜಗತ್ತಿನ ದೊಡ್ಡ ದೊಡ್ಡ ಸ್ಥಾನಗಳಲ್ಲಿರುವ ಸತ್ಯಾ ನಾದೆಳ್ಳ, ಸುಂದರ್ ಪಿಚ್ಚೈ ಅಂಥವರೂ ಕೂಡ ಎಚ್1ಬಿ ವೀಸಾದ ಮೂಲಕವೇ ಅಲ್ಲಿನ ನಿವಾಸಿಗಳಾದವರು.

- ಆದರೆ, 2016ರಲ್ಲಿ, ಅಮೆರಿಕದ ಅಧ್ಯಕ್ಷ ಚುನಾವಣೆಯ ವೇಳೆ ಡೊನಾಲ್ಡ್ ಟ್ರಂಪ್ 'ಬೈ ಅಮೆರಿಕನ್, ಹೈರ್ ಅಮೆರಿಕನ್' ಎಂದು ಘೋಷಿಸಿದ್ದರು. ಸ್ಥಳೀಯ ಅಮೆರಿಕನ್ ಟೆಕ್ ಉದ್ಯೋಗಿಗಳು, ಅಮೆರಿಕದಲ್ಲಿ ಈ ಕ್ಷೇತ್ರದಲ್ಲಿ ಪ್ರತಿಭೆಗಳ ಕೊರತೆಯಿಲ್ಲ ಎಂದು ಟ್ರಂಪ್‌ರನ್ನು ನಂಬಿಸುವಲ್ಲಿ ಯಶಸ್ವಿಯಾಗಿದ್ದರು. ಕಡಿಮೆ ಸಂಬಳಕ್ಕೆ ದುಡಿಯುವ ಭಾರತ- ಚೀನಾ ನೌಕರರನ್ನು ನೇಮಿಸಿಕೊಳ್ಳುವ ಟೆಕ್ ಕಂಪನಿಗಳ ತಂತ್ರವನ್ನು ನಿರಾಯುಧಗೊಳಿಸುವುದಾಗಿ ಟ್ರಂಪ್

ಸಾರಿದ್ದರು. ಇದನ್ನು ಪಾಲಿಸುವ ಹಾದಿಯಲ್ಲಿ ಅವರಿದ್ದಾರೆ. ಅಮೆರಿಕದಲ್ಲಿ ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆಗೂ ಪರಿಹಾರ ಕಂಡುಕೊಳ್ಳಬೇಕಾದ ಹೊಣೆ ಈಗ ಟ್ರಂಪ್ ಮೇಲಿದೆ.

- ಈ ಹಿಂದಿನ ಅಮೆರಿಕದ ಆಡಳಿತಗಳು ಈ ವಿಚಾರವನ್ನು ನಿಭಾಯಿಸುವಲ್ಲಿ ಅಷ್ಟೇನೂ ಯಶಸ್ವಿಯಾಗಿಲ್ಲ. ಯಾಕೆಂದರೆ ಅಮೆರಿಕದಲ್ಲಿ ಟೆಕ್ ಕ್ಷೇತ್ರದಲ್ಲಿ ಕೌಶಲ್ಯಯುಕ್ತ ಪ್ರತಿಭೆಗಳ ಕೊರತೆಯಿದ್ದೇ ಇದೆ. ಎಚ್1ಬಿ ವೀಸಾಗಳ ನೀಡಿಕೆಯಲ್ಲಿ ಸೀಮಿತತೆ, ಕನಿಷ್ಠ ಸಂಬಳದ ಹೆಚ್ಚಳ ಮುಂತಾದ ಕ್ರಮಗಳನ್ನು ಕೈಗೊಂಡಿವೆ. ಹೀಗಿದ್ದರೂ ಕಂಪನಿಗಳು ಭಾರತೀಯ ನೌಕರರನ್ನು ನೇಮಿಸಿಕೊಳ್ಳುವುದನ್ನು ತಡೆಯಲಾಗಿಲ್ಲ.

- ಎಚ್1ಬಿ ವೀಸಾ ನಿಯಮದ ಬದಲಾವಣೆ ಭಾರತೀಯರನ್ನು ದೊಡ್ಡ ಪ್ರಮಾಣದಲ್ಲಿ ಘಾತಿಸಲಿದೆ. ಯಾಕೆಂದರೆ ವಾರ್ಷಿಕ ನೀಡಲಾಗುವ 85,000 ವೀಸಾಗಳಲ್ಲಿ ಸೇ.50 ಭಾಗ ಭಾರತದವರಿಗೆ ಹೋಗುತ್ತದೆ. ಹೀಗೆ ಕಳೆದ 6 ವರ್ಷಗಳಲ್ಲಿ ಬಂದ ಉದ್ಯೋಗಿಗಳ ಸಂಖ್ಯೆ 2,55,000 ಆಗಬಹುದು. ಹತ್ತಾರು ವರ್ಷಗಳಿಂದ ಗ್ರೀನ್ ಕಾರ್ಡ್‌ಗಾಗಿ ಕಾಯುತ್ತಿರುವವರ ಸಂಖ್ಯೆಯನ್ನೂ ಸೇರಿಸಿದರೆ ಎಷ್ಟಾಗಬಹುದು.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ವಿದೇಶಿ ಉದ್ಯೋಗಿಗಳನ್ನು ದೂರವಿಡುವ ಟ್ರಂಪ್ ಆಡಳಿತದ ಪ್ರಯತ್ನ ಇದೇ ಮೊದಲನೆಯದಲ್ಲ. ಈ ಹಿಂದೆ, ಒಬಾಮಾ ಆಡಳಿತ ಜಾರಿಗೆ ತಂದ, ಎಚ್1ಬಿ ವೀಸಾ ಹೊಂದಿರುವ ಉದ್ಯೋಗಿಗಳ ಪತ್ನಿಯರಿಗೆ ಇಲ್ಲಿ ವಾಸಕ್ಕೆ ಅವಕಾಶ ನೀಡುವ ಎಚ್4ಇಎಡಿ ಪರವಾನಗಿಯನ್ನು ಹಿಂದೆಗೆದುಕೊಳ್ಳುವ ಪ್ರಸ್ತಾವ ಮಾಡಿತ್ತು.

- ಔದ್ಯಮಿಕ ಒಕ್ಕೂಟ ಅಸ್ಸೋಚಾಮ್, ಎಚ್1ಬಿ ವೀಸಾದ ನಿಯಂತ್ರಣದಿಂದ ಐಟಿ ವಲಯಕ್ಕೆ ಆಗಬಹುದಾದ ಹಾನಿಯ ಬಗ್ಗೆ ಮೊದಲೇ ಭವಿಷ್ಯ ನುಡಿದಿತ್ತು. ಸಿಬ್ಬಂದಿ ಕಡಿತದಂಥ ಕ್ರಮಗಳನ್ನು ಸಂಸ್ಥೆಗಳು ಕೈಗೊಳ್ಳಲಿವೆ ಎಂದು ಎಚ್ಚರಿಸಿತ್ತು. ಅಮೆರಿಕದಲ್ಲಿರುವ ಎಚ್1ಬಿ ವೀಸಾ ಉದ್ಯೋಗಿಗಳ ಸಂಖ್ಯೆ ಶೇ.86ರಿಂದ ಶೇ.60ಕ್ಕಿಳಿಯಬಹುದು ಎಂದಿತ್ತು. ಜಾಗತಿಕ ಸಾಫ್ಟ್‌ವೇರ್

ಉದ್ಯಮ ಸುಮಾರು 40 ಲಕ್ಷ ಭಾರತೀಯರಿಗೆ ಉದ್ಯೋಗ ನೀಡಿದೆ. ಈ ಕಂಪನಿಗಳ ಸಿಬ್ಬಂದಿಗಳ ರಫ್ತಿನ ವ್ಯವಹಾರವೇ ಸುಮಾರು 100 ಶತಕೋಟಿ ಡಾಲರ್‌ನಷ್ಟು. ಇದರಲ್ಲಿ ಶೇ.60ರಷ್ಟು ಆದಾಯ ಬರುವುದೇ ಉತ್ತರ ಅಮೆರಿಕದಿಂದ. ಶೇ.20ರಷ್ಟು ಯೂರೋಪ್‌ನಿಂದ ಮತ್ತು ಉಳಿದದ್ದು ಇತರ ಕಡೆಯಿಂದ ಬರುತ್ತದೆ. ಹೀಗಿರುವಾಗ, ಹೊಸ ಕಠಿಣ ನಿಯಮಾವಳಿಗಳು ಭಾರತೀಯ ಐಟಿ ಉದ್ಯಮಕ್ಕೆ ದೊಡ್ಡ ಧಕ್ಕೆ ತಂದೊಡ್ಡುವುದರಲ್ಲಿ ಸಂಶಯವಿಲ್ಲ.

## ಈಗ ಇರುವ ನಿಯಮ

- ವಿದೇಶಿ ಅತಿಥಿ ಉದ್ಯೋಗಿಗಳು 3 ವರ್ಷದ ಎಚ್1ಬಿ ವೀಸಾ ಹೊಂದಿದ್ದರೆ, ಅದನ್ನು ಒಂದು ಬಾರಿ ಮಾತ್ರ ಮತ್ತೆ 3 ವರ್ಷಕ್ಕೆ ವಿಸ್ತರಣೆ ಮಾಡಲಾಗುತ್ತದೆ. 6ನೇ ವರ್ಷದ ಕೊನೆಗೂ ಆತನ ಗ್ರೀನ್ ಕಾರ್ಡ್ ವೀಸಾ ಅರ್ಜಿ ಪೆಂಡಿಂಗ್ ಆಗಿದ್ದರೆ, ಅದು ಪ್ರೊಸೆಸ್ ಆಗುವವವರೆಗೂ ಅನಧಿಕೃತ ವಿಸ್ತರಣೆ ಆಗಿರುತ್ತದೆ.

## ಪ್ರಸ್ತಾವಿತ ನಿಯಮ

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- 6ನೇ ವರ್ಷದ ಕೊನೆಗೆ ಗ್ರೀನ್ ಕಾರ್ಡ್ ಸಿಗದೇ ಇದ್ದರೆ, ಅದು ಸಿಗುವವರೆಗೂ ಉದ್ಯೋಗಿ ಅಮೆರಿಕದಿಂದ ಹೊರಗುಳಿಯಬೇಕಾಗುತ್ತದೆ.
- ಅಮೆರಿಕದಲ್ಲಿರುವ ಹಲವಾರು ದೊಡ್ಡ ದೊಡ್ಡ ವಿದೇಶಿ ಉದ್ಯೋಗಿಗಳು, ಉದಾಹರಣೆಗೆ ಸತ್ಯಾ ನಾದೆಳ್ಳ ಮತ್ತು ಸುಂದರ್ ಪಿಚ್ಚೈ ಅಂಥವರು, ಅಮೆರಿಕದ ಶಾಶ್ವತ ನಿವಾಸಿಗಳಾಗುವ ಮುನ್ನ ಎಚ್1ಬಿ ವೀಸಾದಲ್ಲಿದ್ದವರೇ.

- ವಾರ್ಷಿಕವಾಗಿ ಇಲ್ಲಿ ನೀಡಲಾಗುತ್ತಿರುವ ಎಚ್1ಬಿ ವೀಸಾದಲ್ಲಿ 85,000ದಷ್ಟು ಭಾರತೀಯ ನೌಕರರಿಗೆ ಹೋಗುತ್ತಿವೆ.

- ಅಮೆರಿಕದಲ್ಲಿರುವ ಭಾರತೀಯ ಇಂಜಿನಿಯರ್‌ಗಳ ಸಂಖ್ಯೆ 3.5 ಲಕ್ಷ
- ಎಚ್1ಬಿ ವೀಸಾ ಪಡೆಯಬೇಕಾದರೆ ಭಾರತೀಯ ಉದ್ಯೋಗಿಗೆ ಸಿಗಬೇಕಾದ ಸಂಬಳ 1 ಲಕ್ಷ 30 ಸಾವಿರ ಡಾಲರ್

## 16. ಪಿಪಿಪಿ ಯೋಜನೆಗಳಿಗೆ ಪರಿಷ್ಕೃತ ಮಾದರಿ ರಿಯಾಯಿತಿ ಒಪ್ಪಂದಕ್ಕೆಸಂಪುಟದ ಅನುಮೋದನೆ

**ಪ್ರಮುಖ ಸುದ್ದಿ**

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆ ಬಂದರು ಯೋಜನೆಗಳನ್ನು ಹೆಚ್ಚು ಹೂಡಿಕೆ ಸ್ನೇಹಿ ಮಾಡಲು ಮತ್ತು ಬಂದರು ಕ್ಷೇತ್ರದಲ್ಲಿ ಹೂಡಿಕೆಯ ವಾತಾವರಣವನ್ನು ಮತ್ತಷ್ಟು ಆಕರ್ಷಕಗೊಳಿಸಲು ಮಾದರಿ ರಿಯಾಯಿತಿ ಒಪ್ಪಂದ (ಎಂ.ಸಿ.ಎ.)ದಲ್ಲಿ ತಿದ್ದುಪಡಿಗಳಿಗೆ ತನ್ನ ಅನುಮೋದನೆ ನೀಡಿದೆ.

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಪ್ರಮುಖ ಅಂಶಗಳು:**

- ಎಂ.ಸಿ.ಎ.ಯಲ್ಲಿನ ತಿದ್ದುಪಡಿಗಳು ಹೆದ್ದಾರಿ ವಲಯದಲ್ಲಿರುವ ರೀತಿಯಲ್ಲೇ ವಿವಾದಗಳ ಇತ್ಯರ್ಥ ವ್ಯವಸ್ಥೆಯಾಗಿ ಸೊಸೈಟಿ ಫಾರ್ ಆಫೋರ್ಡಬಲ್ ರಿಡ್ರೆಸೆಲ್ ಆಫ್ ಡಿಸ್ಪ್ಯೂಟ್ಸ್ – ಪೋರ್ಟ್ಸ್ (ಎಸ್.ಎ.ಆರ್.ಓ.ಡಿ.-ಪೋರ್ಟ್ಸ್) ಸ್ಥಾಪನೆಗೆ ಅವಕಾಶ ನೀಡುತ್ತದೆ.

**ಪರಿಷ್ಕೃತ ಎಂ.ಸಿ.ಎ.ಯ ಇತರ ಪ್ರಮುಖ ಅಂಶಗಳು ಈ ಕೆಳಗಿನವುಗಳನ್ನು ಒಳಗೊಂಡಿದೆ:-**

- ವಾಣಿಜ್ಯ ಕಾರ್ಯಾಚರಣೆ ದಿನಾಂಕ (ಸಿಒಡಿ) ನಿಂದ 2 ವರ್ಷಗಳು ಪೂರ್ಣಗೊಂಡ ನಂತರ ಶೇ.100ವರೆಗೆ ತಮ್ಮ ಷೇರುಗಳನ್ನು ವಿನಿಯೋಗಿಸುವ ಮೂಲಕ ಡೆವಲಪರ್ ಗಳಿಗೆ ನಿರ್ಗಮನ ಮಾರ್ಗವನ್ನು ಒದಗಿಸುವುದು. ಇದು ಈಗ ಹೆದ್ದಾರಿ ವಲಯದ ಎಂ.ಸಿ.ಎ. ನಿಬಂಧನೆಗಳನ್ನು ಹೋಲುತ್ತದೆ.

- ರಿಯಾಯಿತಿದಾರರಿಗೆ ಹೆಚ್ಚುವರಿ ಭೂಮಿ ಒದಗಿಸುವ ನಿಬಂಧನೆಗಳ ಅಡಿಯಲ್ಲಿ, ಪ್ರಸ್ತಾವಿತ ಹೆಚ್ಚುವರಿ ಭೂಮಿಗೆ ಅನ್ವಯವಾಗುವ ದರಗಳಲ್ಲಿ ಭೂಮಿ ಬಾಡಿಗೆಯನ್ನು ಪ್ರತಿಶತ 200ರಿಂದ ಶೇ.120ಕ್ಕೆ ಇಳಿಸಲಾಗಿದೆ.

- ರಿಯಾಯಿತಿದಾರರು "ನಿರ್ವಹಿಸಲಾದ ಪ್ರತಿ ಮೆಟ್ರಿಕ್ ಟನ್ ಸರಕು/ಟಿಇಯು" ಮೇಲೆ ರಾಯಲ್ಟಿ ನೀಡಬೇಕಾಗಿದ್ದು, ಇದರ ಆಧಾರದ ಮೇಲೆ ವಾರ್ಷಿಕವಾಗಿ ಡಬ್ಲ್ಯುಪಿಐನಲ್ಲಿ ಬದಲಾವಣೆ ಸೂಚಿಸಲಾಗುತ್ತದೆ. ಇದು ಹಾಲಿ ರಾಯಲ್ಟಿ ವಿಧಿಸುವ ಪ್ರಕ್ರಿಯೆಯನ್ನು ಬದಲಾಯಿಸಲಿದ್ದು, ಇದು ಪ್ರಮುಖ ಬಂದರುಗಳಿಗೆ ದರ ಪ್ರಾಧಿಕಾರ (ಟಿಎಎಂಪಿ) ಸೂಚಿಸಿದ ಅಪ ಫ್ರಂಟ್ ಪ್ರಮಾಣಕ ದರದ ಮಿತಿ ಆಧಾರದ ಮೇಲೆ ಲೆಕ್ಕ ಹಾಕಿ, ಬಿಡ್ಡಿಂಗ್ ಅವಧಿಯಲ್ಲಿ ನಮೂದಿಸಲಾದ, ನಿವ್ವಳ ಆದಾಯದ ಪ್ರತಿಶತಕ್ಕೆ ಸಮನಾಗಿರುತ್ತದೆ. ಇದು ಸಾರ್ವಜನಿಕ ಖಾಸಗಿ ಪಾಲುದಾರಿಕೆಯ (ಪಿಪಿಪಿ) ಆಪರೇಟರುಗಳ ದೀರ್ಘಕಾಲದಿಂದ ಬಾಕಿ ಇರುವ ವಿವಾದಗಳನ್ನು ಪರಿಹರಿಸಲು ನೆರವಾಗುತ್ತದೆ ಇದು ಆದಾಯ ಹಂಚಿಕೆ ಮಿತಿ ದರದ ಮೇಲೆ ಪಾವತಿಸಲ್ಪಡುತ್ತದೆ ಮತ್ತು ಬೆಲೆ ರಿಯಾಯಿತಿಗಳು ಉಪೇಕ್ಷಿಸಲಾಗುತ್ತದೆ. ಟಿ.ಎ.ಎಂ.ಪಿಯಿಂದ ದಾಸ್ತಾನು ಶುಲ್ಕ ನಿಗದಿಗೆ ಸಂಬಂಧಿಸಿದ ಸಮಸ್ಯೆಗಳ ಮತ್ತು ಸಂಹ್ರಹಣೆ ಶುಲ್ಕ ಆದಾಯ ಸಂಗ್ರಹದ ಹಂಚಿಕೆಯೊಂದಿಗೆ ಹೊಂದಿಕೊಂಡ ಹಲವು ಯೋಜನೆಗಳು ಸಹ ರದ್ದಾಗುತ್ತವೆ.

- ರಿಯಾಯಿತಿದಾರರು ಹೆಚ್ಚಿನ ಸಾಮರ್ಥ್ಯದ ಸಾಧನ/ಸೌಲಭ್ಯಗಳು/ತಂತ್ರಜ್ಞಾನ ನಿಯುಕ್ತಿಗೊಳಿಸಲು ಮತ್ತು ಹೆಚ್ಚಿನ ಉತ್ಪಾದನೆಗಾಗಿ ಮೌಲ್ಯಯುತ ಎಂಜಿನಿಯರಿಂಗ್

ಕೈಗೊಳ್ಳಲು ಹಾಗೂ ಬಳಕೆ ಸುಧಾರಿಸಲು ಮತ್ತು/ಅಥವಾ ಯೋಜನಾ ಆಸ್ತಿಯ ವೆಚ್ಚ ಉಳಿತಾಯ ಮಾಡಲು ಮುಕ್ತರಾಗಿರುತ್ತಾರೆ.

- "ವಾಸ್ತವ ಯೋಜನಾ ವೆಚ್ಚ"ವನ್ನು "ಒಟ್ಟಾರೆ ಯೋಜನಾ ವೆಚ್ಚ"ದೊಂದಿಗೆ ಬದಲಾಯಿಸಲಾಗುತ್ತದೆ.

- "ಕಾನೂನಿನಲ್ಲಿನ ಬದಲಾವಣೆ"ಯ ಹೊಸ ವ್ಯಾಖ್ಯೆಯನ್ನೂ ಸೇರಿಸಲಾಗಿದೆ.

- ಟಿಎಂಪಿ ಮಾರ್ಗದರ್ಶನಗಳು / ಆದೇಶಗಳು, ಪರಿಸರದ ಕಾನೂನು ಮತ್ತು ಕಾರ್ಮಿಕ ಕಾನೂನುಗಳಿಂದ ಉಂಟಾಗುವ ಮಾನದಂಡಗಳು ಮತ್ತು ಷರತ್ತುಗಳ ಹೇರಿಕೆ, ಮತ್ತ

- ರಿಯಾಯಿತಿದಾರರಿಗೆ ಪರಿಹಾರ ಒದಗಿಸಲು ಹೊಸ ತೆರಿಗೆಗಳು, ಸುಂಕ ಇತ್ಯಾದಿ ಹೆಚ್ಚಳ ಮತ್ತು ಹೇರುವುದು. ಯೋಜನೆಯ ಕಾರ್ಯಸಾಧ್ಯತೆಯು ಬಾಧಿತವಾದ ಕಾರಣ, ರಿಯಾಯಿತಿದಾರರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೇರ ತೆರಿಗೆ ಹೇರುವಿಕೆ / ಹೆಚ್ಚಳಕ್ಕೆ ಸಂಬಂಧಿಸಿದಂತೆ ಹೊಸ ತೆರಿಗೆಯ ಹೇರುವಿಕೆ / ಹೆಚ್ಚಳ, ಸುಂಕಗಳು ಇತ್ಯಾದಿಗಳ ವಿಚಾರದಲ್ಲಿ ಪರಿಹಾರವನ್ನು ಒದಗಿಸಲಾಗುತ್ತದೆ.

- ಸಿ.ಓ.ಡಿ.ಗೆ ಮೊದಲ ಕಾರ್ಯಾಚರಣೆಯ ಆರಂಭದ ನಿಬಂಧನೆಗಳು. ಇದು ಔಪಚಾರಿಕ ಪೂರ್ಣತೆಯ ಪ್ರಮಾಣ ಪತ್ರಕ್ಕೆ ಮೊದಲು ಹಲವು ಯೋಜನೆಗಳಲ್ಲಿ ಒದಗಿಸಿದ ಆಸ್ತಿಗಳ ಉತ್ತಮ ಬಳಕೆಗೆ ಇಂಬು ನೀಡುತ್ತದೆ.

- ಯೋಜನೆಯ ಆರ್ಥಿಕ ಕಾರ್ಯಸಾಧ್ಯತೆಯನ್ನು ಸುಧಾರಿಸುವ ಸಲುವಾಗಿ ರಿಯಾಯಿತಿದಾರರಿಗೆ ಅಲ್ಪ ವೆಚ್ಚದ ದೀರ್ಘಕಾಲೀನ ಹಣಕಾಸು ಲಭ್ಯತೆಯನ್ನು ಗುರಿಯಾಗಿಟ್ಟುಕೊಂಡು ಮರು ಹಣಕಾಸು ನೆರವಿಗೆ ಸಂಬಂಧಿಸಿದಂತೆ ಅವಕಾಶ ಕಲ್ಪಿಸಲಾಗಿದೆ.

- ರಿಯಾಯಿತಿದಾರ ಮತ್ತು ಅನುಷ್ಠಾನ ಪ್ರಾಧಿಕಾರದ ನಡುವೆ ಅಂಕಿತ ಹಾಕಲಾಗುವ ಪೂರಕ ಒಪ್ಪಂದ ಪರಿಚಯಿಸುವುದರಿಂದ ಹಾಲಿ ಇರುವ ರಿಯಾಯಿತಿದಾರರಿಗಾಗಿ ವಿವಾದಗಳ ಇತ್ಯರ್ಥಕ್ಕಾಗಿ ಎಸ್.ಎ.ಆರ್.ಡಿ.ಓ.-ಪೋರ್ಟ್ಸ್ ನಿಬಂಧನೆಗಳನ್ನು ವಿಸ್ತರಿಸಲಾಗುತ್ತದೆ.

- ಬಂದರು ಬಳಕೆದಾರರ ಅನುಕೂಲಕ್ಕಾಗಿ ದೂರು ಪೋರ್ಟಲ್ ಆರಂಭಿಸುವುದು.

- ಯೋಜನೆಯ ನಿಯತಕಾಲಿಕ ಸ್ಥಿತಿಯ ವರದಿ ಸಲುವಾಗಿ ನಿಗಾ ವ್ಯವಸ್ಥೆಯನ್ನು ಪರಿಚಯಿಸಲಾಗಿದೆ.

- ಕಳೆದ ಇಪ್ಪತ್ತು ವರ್ಷಗಳಲ್ಲಿ ಬಂದರು ವಲಯದಲ್ಲಿನ ಪಿಪಿಪಿ ಯೋಜನೆಗಳ ನಿರ್ವಹಣೆಯಿಂದ ಮತ್ತು ಅಸ್ತಿತ್ವದಲ್ಲಿರುವ ಎಂ.ಸಿ.ಎ.ಯ ಕೆಲವು ನಿಬಂಧನೆಗಳ ಕಾರಣದಿಂದಾಗಿ ಸಮಸ್ಯೆಗಳನ್ನು ಎದುರಿಸುವುದರಿಂದ ಲಭಿಸಿದ ಅನುಭವದ ಹಿನ್ನೆಲೆಯಲ್ಲಿ ತಿದ್ದುಪಡಿಗಳನ್ನು ಪ್ರಸ್ತಾಪಿಸಲಾಗಿದೆ. ಎಂ.ಸಿ.ಎ.ಯಲ್ಲಿನ ತಿದ್ದುಪಡಿಗಳನ್ನು ಬಾಧ್ಯಸ್ಥರೊಂದಿಗೆ ವಿಸ್ತೃತವಾಗಿ ಚರ್ಚಿಸಿದ ತರುವಾಯ ಅಖೈರುಗೊಳಿಸಲಾಗುತ್ತದೆ.

## 17. ಜಂಗಲ್ ಮಹಲ್ ಉತ್ಸಬ್

### ಪ್ರಮುಖ ಸುದ್ದಿ

- ಪಶ್ಚಿಮ ಬಂಗಾಳದ ಜಾರ್ಗಮ್ ಜಿಲ್ಲೆಯಲ್ಲಿ ಜಂಗಲ್ಮ್ಯಾಹಲ್ ಉತ್ಸಬ್ ಅನ್ನು ಇತ್ತೀಚೆಗೆ ಉದ್ಘಾಟಿಸಲಾಯಿತು.

ಈ ಹಬ್ಬದ ಬಗ್ಗೆ

- ಬುಡಕಟ್ಟು ಜನರ ಕಲೆ ಮತ್ತು ಸಂಸ್ಕೃತಿಯನ್ನು ಉತ್ತೇಜಿಸಲು ಈ ಉತ್ಸವವನ್ನು ಆಯೋಜಿಸಲಾಗಿದೆ.
- ಹಬ್ಬದ ಸಮಯದಲ್ಲಿ ಜಂಗಲ್ಮ್ಯಾಹಾಲ್ ಪ್ರದೇಶದ ಸ್ಥಳೀಯರು ತುಸು, ಭಾಡು, ಅಹಿರಾ ಮತ್ತು ಝುಮುರ್ ನಂತಹ ವಿವಿಧ ಜಾನಪದ ಹಾಡುಗಳು ಮತ್ತು ನೃತ್ಯಗಳನ್ನು ನಡೆಸುತ್ತಾರೆ.

## 18. ಎಲೆಕ್ಟೋರಲ್ ಬಾಂಡ್ ಮೂಲಕ ರಾಜಕೀಯ ಪಕ್ಷಗಳಿಗೆ ದೇಣಿಗೆ ನಿಡುವ ಯೋಜನೆಯನ್ನು ತರಲು ಕೇಂದ್ರ ಸರಕಾರ ಚಿಂತನೆ

ಪ್ರಮುಖ ಸುದ್ದಿ

- ರಾಜಕೀಯ ಪಕ್ಷಗಳಿಗೆ ಹರಿದು ಬರುವ ಚುನಾವಣಾ ದೇಣಿಗೆಯನ್ನು ಸ್ವಚ್ಛಗೊಳಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಟ್ಟಿರುವ ಕೇಂದ್ರ ಸರ್ಕಾರ, ಎಲೆಕ್ಟೋರಲ್ (ಚುನಾವಣಾ) ಬಾಂಡ್ ಬಿಡುಗಡೆ ಮಾಡುವುದಾಗಿ ಘೋಷಿಸಿದೆ. ಎಲೆಕ್ಟೋರಲ್ ಬಾಂಡ್ ಮೂಲಕ ರಾಜಕೀಯ ಪಕ್ಷಗಳಿಗೆ ದೇಣಿಗೆ ನಿಡುವ ಯೋಜನೆಯನ್ನು ಹಣಕಾಸು ಸಚಿವ ಅರುಣ್ ಜೇಟ್ಲಿ ಲೋಕಸಭೆಯಲ್ಲಿ ಪ್ರಕಟಿಸಿದ್ದಾರೆ.

ಪ್ರಕ್ರಿಯೆ ಹೇಗೆ?:

- ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಲು ಬಯಸುವವರು ಎಸ್‌ಬಿಐ ಮೂಲಕ ನಿರ್ದಿಷ್ಟ ಮೊತ್ತದ ಇಲೆಕ್ಟೋರಿಯಲ್ ಬಾಂಡ್ ಖರೀದಿಸಿ ಅದನ್ನು ರಾಜಕೀಯ ಪಕ್ಷಗಳಿಗೆ ನೀಡಬಹುದು. ಬಾಂಡ್ ಸ್ವೀಕರಿಸಿದ ರಾಜಕೀಯ ಪಕ್ಷಗಳು ನಿರ್ದಿಷ್ಟ ಬ್ಯಾಂಕ್ ಖಾತೆಗೆ ಬಾಂಡ್ ಸಲ್ಲಿಸಿ, ಹಣವನ್ನು ಖಾತೆಗೆ ವರ್ಗಾಯಿಸಿಕೊಳ್ಳಬಹುದು.

- ಸದ್ಯ ರಾಜಕೀಯ ಪಕ್ಷಗಳಿಗೆ ಅನಾಮಧೇಯರ ಹೆಸರಿನಲ್ಲಿ ನೀಡುವ ದೇಣಿಗೆಯನ್ನು 20000 ರು.ನಿಂದ 2000 ರು.ಗೆ ಮಿತಿ ಗೊಳಿಸಲಾಗಿದೆ. ಒಂದು ವೇಳೆ 2000 ರು.ಗಿಂತ ಹೆಚ್ಚಿನ ದೇಣಿಗೆ ನೀಡುವ ದಾನಿಗಳ ಹೆಸರನ್ನು ರಾಜಕೀಯ ಪಕ್ಷಗಳು ನೋಂದಾಯಿಸಿ ಕೊಳ್ಳಬೇಕು. ರಾಜಕೀಯ ಪಕ್ಷಗಳ ದೇಣಿಗೆಯನ್ನು ಇನ್ನಷ್ಟು ಪಾರದರ್ಶಕಗೊಳಿಸುವ ನಿಟ್ಟಿನಿಂದ ಸರ್ಕಾರ ಎಲೆಕ್ಟೋರಲ್ ಬಾಂಡ್ ಪರಿಚಯಿಸಿದೆ.

### ಏನಿದು ಎಲೆಕ್ಟೋರಲ್ ಬಾಂಡ್?:

- ರಾಜಕೀಯ ಪಕ್ಷಗಳಿಗೆ ಹಣದ ರೂಪದಲ್ಲಿ ದೇಣಿಗೆ ನೀಡುವುದಕ್ಕೆ ಪರ್ಯಾಯವಾಗಿ ಎಲೆಕ್ಟೋರಲ್ ಬಾಂಡ್‌ಗಳು ಬಳಕೆಯಾಗಲಿವೆ. ಎಸ್‌ಬಿಐನ ನಿರ್ದಿಷ್ಟ ಬ್ಯಾಂಕ್ ಶಾಖೆಗಳಲ್ಲಿ ಜನವರಿ, ಏಪ್ರಿಲ್, ಜುಲೈ ಮತ್ತು ಅಕ್ಟೋಬರ್ ತಿಂಗಳಲ್ಲಿ ತಲಾ 10 ದಿನ ಎಲೆಕ್ಟೋರಲ್ ಬಾಂಡ್ ವಿತರಿಸಲಾಗುತ್ತದೆ. ಈ ಬಾಂಡ್ 15 ದಿನಗಳ ಕಾಲಾವಧಿ ಹೊಂದಿರುತ್ತವೆ. ಅದರಲ್ಲಿ ದೇಣಿಗೆ ನೀಡಿದವರ ಹೆಸರು ಇರುವುದಿಲ್ಲ. ಆದರೆ, ದೇಣಿಗೆ ನೀಡುವವರು ಬ್ಯಾಂಕ್‌ನಲ್ಲಿ ಕೆವೈಸಿ (ನಿಮ್ಮ ಗ್ರಾಹಕರನ್ನು ತಿಳಿಯಿರಿ) ಮಾಹಿತಿ ನಿಡಬೇಕು.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಇದೊಂದು ಬಾಂಡ್ ಆಗಿದ್ದರೂ ಕೂಡ ಯಾವುದೇ ಬಡ್ಡಿಯನ್ನು ಬ್ಯಾಂಕ್‌ನಿಂದ ದೊರೆಯುವುದಿಲ್ಲ. ರಾಜಕೀಯ ಪಕ್ಷಗಳಿಗೆ ಪಾವತಿಸುವವರೆಗೂ ಆ ಹಣ ದೇಣಿಗೆ ನೀಡಿದ ವ್ಯಕ್ತಿಯ ಖಾತೆಯಲ್ಲೇ ಇರುತ್ತದೆ. ಬ್ಯಾಂಕುಗಳನ್ನು ಮಧ್ಯವರ್ತಿಯಾಗಿ ಬಳಸಿಕೊಂಡು ದೇಣಿಗೆದಾರರು ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಲು ಎಲೆಕ್ಟೋರಲ್ ಬಾಂಡ್‌ಗಳು ನೆರವಾಗಲಿವೆ. ಕಳೆದ ಚುನಾವಣೆಯಲ್ಲಿ ಶೇ.1ರಷ್ಟು ಮತ ಪಡೆದ ರಾಜಕೀಯ ಪಕ್ಷಗಳಿಗೆ ಎಲೆಕ್ಟೋರಲ್ ಬಾಂಡ್ ಮೂಲಕ ದೇಣಿಗೆಯನ್ನು ನೀಡಬಹು ದಾಗಿದೆ. ಈ ಬಾಂಡ್ ಅನ್ನು 15 ದಿನಗಳ ಒಳಗಾಗಿ ನಗದೀಕರಣ ಮಾಡಬೇಕು.

- ಪಕ್ಷಗಳು ಚುನಾವಣಾ ಆಯೋಗಕ್ಕೆ ಬ್ಯಾಂಕ್ ಖಾತೆಯ ವಿವರವನ್ನು ನೀಡಬೇಕು. ಈ ಬಾಂಡ್‌ನಲ್ಲಿ 1 ಸಾವಿರ, 10 ಸಾವಿರ, ಒಂದು ಲಕ್ಷ, 10 ಲಕ್ಷ ಅಥವಾ 1 ಕೋಟಿ ಹೀಗೇ

ಯಾವುದೇ ಮೊತ್ತದ ಹಣವನ್ನು ದೇಣಿಗೆ ನೀಡಬಹುದಾಗಿದೆ. ಈ ಬಾಂಡ್ ಅನ್ನು ದೇಣಿಗೆದಾರರು ರಾಜಕೀಯ ಪಕ್ಷಗಳಿಗೆ ತಲಪುಸಬುದು. ಅವರ ಹೆಸರನ್ನು ಬಹಿರಂಗ ಪಡಿಸುವುದಿಲ್ಲ. ತೀರಾ ಅಗತ್ಯ ಇದ್ದರೆ ಬ್ಯಾಂಕ್ ಮೂಲಕ ಅಂಥವರ ವಿವರಗಳನ್ನು ಪಡೆದುಕೊಳ್ಳಬಹುದಾಗಿದೆ.

## 19. ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (PMSSY)

### ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆ, ಬಿಲಾಸ್ಪುರ (ಹಿಮಾಚಲ ಪ್ರದೇಶ)ದಲ್ಲಿ ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿ.ಎಂ.ಎಸ್.ಎಸ್.ವೈ.) ಅಡಿಯಲ್ಲಿ ಹೊಸ ಎ.ಐ.ಐ.ಎಂ.ಎಸ್. ಸ್ಥಾಪನೆಗೆ ತನ್ನ ಅನುಮೋದನೆ ನೀಡಿದೆ. ಈ ಯೋಜನೆಯ ವೆಚ್ಚ 1351 ಕೋಟಿ ರೂಪಾಯಿ ಆಗಿದೆ.

### ಪ್ರಮುಖ ಅಂಶಗಳು:

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಹೊಸ ಎಐಐಎಂಗಳು 12 ತಿಂಗಳುಗಳ ನಿರ್ಮಾಣಪೂರ್ವ ಹಂತ, 30 ತಿಂಗಳ ನಿರ್ಮಾಣ ಹಂತ ಮತ್ತು 6 ತಿಂಗಳುಗಳ ಸ್ಥಿರತೆ /ಅನುಷ್ಠಾನ ಹಂತದೊಂದಿಗೆ 48 ತಿಂಗಳ ಅವಧಿಯಲ್ಲಿ ಪೂರ್ಣಗೊಳ್ಳಲಿದೆ.

- ಈ ಸಂಸ್ಥೆಯು 750 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆ ಮತ್ತು ಟ್ರಾಮಾ ಕೇಂದ್ರದ ಸೌಲಭ್ಯಗಳನ್ನು ಒಳಗೊಂಡಿರುತ್ತದೆ.

- ಇದು ವಾರ್ಷಿಕ 100 ಎಂ.ಬಿ.ಬಿ.ಎಸ್. ವಿದ್ಯಾರ್ಥಿಗಳ ಪ್ರವೇಶಾವಕಾಶದ ವೈದ್ಯಕೀಯ ಕಾಲೇಜನ್ನು ಹೊಂದಿರುತ್ತದೆ.

- ವಾರ್ಷಿಕ 60 ಬಿಎಸ್ಸಿ (ನರ್ಸಿಂಗ್) ವಿದ್ಯಾರ್ಥಿಗಳ ಪ್ರವೇಶಾವಕಾಶ ಒಳಗೊಂಡ ನರ್ಸಿಂಗ್ ಕಾಲೇಜು.

- ನವದೆಹಲಿಯ ಏಮ್ಸ್ ಮಾದರಿಯಲ್ಲೇ ಪೂರಕ ಸೌಲಭ್ಯಗಳಿಗೆ/ಸೇವೆಗಳಿಗೆ ವಸತಿ ಸಮುಚ್ಚಯಗಳನ್ನು ಒಳಗೊಂಡಿರುತ್ತದೆ.

- ಆಸ್ಪತ್ರೆಯು 15 ಶಸ್ತ್ರಚಿಕಿತ್ಸಾ ಕೊಠಡಿ ಸೇರಿದಂತೆ 20 ಸ್ಪೆಷಾಲಿಟಿ/ಸೂಪರ್ ಸ್ಪೆಷಾಲಿಟಿ ವಿಭಾಗಗಳನ್ನು ಒಳಗೊಂಡಿರುತ್ತದೆ.

- ಇದು ಸಾಂಪ್ರದಾಯಿಕ ವೈದ್ಯಪದ್ಧತಿಯ ಚಿಕಿತ್ಸೆಗಾಗಿ 30 ಹಾಸಿಗೆಗಳ ಆಯುಷ್ ವಿಭಾಗವನ್ನೂ ಒಳಗೊಂಡಿರುತ್ತದೆ.

**ಪರಿಣಾಮ:**

- ಹೊಸ ಏಮ್ಸ್ ಸ್ಥಾಪನೆಯು ಎರಡು ಉದ್ದೇಶದಿಂದ ಕಾರ್ಯನಿರ್ವಹಿಸಲಿದ್ದು, ಜನರಿಗೆ ಸೂಪರ್ ಸ್ಪೆಷಾಲಿಟಿ ಆರೋಗ್ಯ ಸೇವೆಯನ್ನು ಒದಗಿಸುತ್ತದೆ ಮತ್ತು ಈ ಪ್ರದೇಶದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದ ಸೌಲಭ್ಯಗಳಡಿಯಲ್ಲಿ ಸ್ಥಾಪಿಸಲಾಗುವ ಪ್ರಾಥಮಿಕ ಮತ್ತು ಮಾಧ್ಯಮಿಕ ಮಟ್ಟದ ಸಂಸ್ಥೆಗಳಿಗೆ / ವೈದ್ಯರು ಮತ್ತು ಇತರ ಆರೋಗ್ಯ ಕಾರ್ಯಕರ್ತರ ದೊಡ್ಡ ಪಡೆಯನ್ನು ರಚಿಸಲು ಸಹಾಯ ಮಾಡುತ್ತದೆ.

**ಹಿನ್ನೆಲೆ:**

- ಈ ಯೋಜನೆಯಡಿಯಲ್ಲಿ, ಏಮ್ಸ್ ಗಳನ್ನು ಭುವನೇಶ್ವರ್, ಭೋಪಾಲ್, ರಾಯ್ಪುರ, ಜೋದ್ಪುರ, ಋಷಿಕೇಶ್ ಮತ್ತು ಪಾಟ್ನಾಗಳಲ್ಲಿ ಸ್ಥಾಪಿಸಲಾಗಿದೆ ಮತ್ತು ರಾಯ್ ಭರೇಲಿಯಲ್ಲಿ ಏಮ್ಸ್ ಕಾಮಗಾರಿ ಪ್ರಗತಿಯಲ್ಲಿದೆ. ಅಲ್ಲದೆ ನಾಗಪುರ (ಮಹಾರಾಷ್ಟ್ರ), ಕಲ್ಯಾಣಿ (ಪಶ್ಚಿಮ ಬಂಗಾಳ) ಮತ್ತು ಗುಂಟೂರಿನ ಮಂಗಳಗಿರಿ (ಆಂಧ್ರಪ್ರದೇಶ)ಯಲ್ಲಿನ ಮೂರು ಏಮ್ಸ್ ಗಳಿಗೆ 2015ರಲ್ಲಿ ಮಂಜೂರಾತಿ ನೀಡಲಾಗಿದೆ. 2016ರಲ್ಲಿ ಭಟಿಂಡಾ ಮತ್ತು ಗೋರಖ್ಪುರದ ಎರಡು ಏಮ್ಸ್ ಮತ್ತು ಕಾಮರೂಪ (ಅಸ್ಸಾಂ) ಏಮ್ಸ್ ಮಂಜೂರು ಮಾಡಲಾಗಿದೆ.

## 20. ಹಂದಿ ಜ್ವರ(Swine flu)

### ಪ್ರಮುಖ ಸುದ್ದಿ

- ಹಂದಿ ಜ್ವರ ವೈರಸ್ ಗೆ ಸುಮಾರು 400 ಕ್ಕಿಂತಲೂ ಹೆಚ್ಚಿನ ಜನರಲ್ಲಿ ಕಾಣಿಸಿಕೊಂಡಿದೆ ಎಂದು ರಾಜಸ್ಥಾನ ಸರ್ಕಾರವು ಎಚ್ಚರಿಕೆಯನ್ನು ನೀಡಿದೆ.
- ಜನವರಿ 1, 2017 ರಿಂದ ಡಿಸೆಂಬರ್ 19, 2017 ವರೆಗೆ ಸುಮಾರು 11,721 ಜನರನ್ನು ಹಂದಿ ಜ್ವರಕ್ಕೆ ಪರೀಕ್ಷಿಸಲಾಯಿತು. ಅದರಲ್ಲಿ 3,214 ಜನರು ಧನಾತ್ಮಕವಾಗಿ ದೃಢಪಟ್ಟಿದ್ದಾರೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಹಂದಿ ಜ್ವರ ಎಂದರೇನು ?

- ಹಂದಿ ಜ್ವರವು ಹಂದಿಗಳಿಗೆ ಬರುವ ಶ್ವಾಸಕೋಶದ ಖಾಯಿಲೆ. ಇದು ಒಂದು ರೀತಿಯ ಇನ್ ಫ್ಲೂಯಂಜಾದ ವೈರಸ್ ನಿಂದ ಅವುಗಳಿಗೆ ಆಗಾಗ ಬರುವುದು, ಮಾನವರಿಗೆ ಸಾಮಾನ್ಯವಾಗಿ ಹಂದಿ ಜ್ವರ ಬರುವುದಿಲ್ಲ. ಆದರೆ ಮಾನವರಿಗೆ ಸೋಂಕು ತಗುಲಬಹುದು.ಹಂದಿ ಜ್ವರದ ವೈರಾಣುಗಳು ಮೊದಲು ಒಬ್ಬರಿಂದ ಒಬ್ಬರಿಗೆ ಹರಡಿದ ವರದಿಗಳು ಇವೆ. ಅವು ಮೂರಕ್ಕಿಂತ ಹೆಚ್ಚು ಜನರಿಗೆ ಹರಡಲಾರವು.

- ಮಾರ್ಚ್ ಮತ್ತು ಎಪ್ರಿಲ್ 2009 ರಲ್ಲಿ , ಹಂದಿ ಜ್ವರದ ಇನ್ ಫ್ಲೂಯಂಜ A (H1N1) ಸೋಂಕು ತಗುಲಿದ ಮಾನವರ ಪ್ರಕರಣಗಳು ಮೊದಲು, ಅಮೇರಿಕದ ದಕ್ಷಿಣ ಕ್ಯಾಲಿಫೋರ್ನಿಯಾದಲ್ಲಿ

ಮತ್ತು ಟೆಕ್ಸಾಸಿನ ಸ್ಯಾನ್ ಆಂಟೋನಿಯೊ ದಲ್ಲಿ ವರದಿಯಾದವು. ನಂತರದಲ್ಲಿಅಮೇರಿಕಾದ ಇತರ ರಾಜ್ಯಗಳಲ್ಲಿ ಅಲ್ಲಂದು ಇಲ್ಲೊಂದು ಪ್ರಕರಣಗಳು ವರದಿಯಗುತ್ತಲೆ ಇವೆ

## ಹಂದಿ ಜ್ವರದ ಲಕ್ಷಣಗಳೇನು ?

- ಹಂದಿಜ್ವರ ಬಂದಾಗಿನ ಲಕ್ಷಣಗಳು ಮಾನವರಿಗೆ ಫ್ಲೂ ಬಂದಾಗಿನ ಲಕ್ಷಣಗಳನ್ನೆ ಹೋಲುತ್ತವೆ. ಜ್ವರ, ಕೆಮ್ಮು, ಗಂಟಲು ನೋವು, ಮೈಕೈ ನೋವು, ತಲೆ ನೋವು, ಚಳಿ, ಸುಸ್ತು ಇರುತ್ತವೆ, ಕೆಲವರಿಗೆ ಭೇದಿ ಮತ್ತು ವಾಂತಿ ಸಹಾ ಬರಬಹುದು. ಈ ಮುಂಚೆ ತೀವ್ರವಾದ ಅನಾರೋಗ್ಯ (ನ್ಯುಮೋನಿಯಾ ಮತ್ತು ಶ್ವಾಸ ಕೋಶದ ವಿಫಲತೆ )ದಿಂದ ಈ ಸೋಂಕಿನಿಂದ ಸಾವು ಸಂಭವಿಸಿರುವುದು ವರದಿಯಾಗಿದೆ. ಋತುಮಾನಕ್ಕೆ ಅನುಗುಣವಾಗಿ ಬರುವ ಫ್ಲೂ ನಂತೆ ಹಂದಿಜ್ವರವೂ ಸುಧೀರ್ಘವಾದ ವೈದ್ಯಕೀಯ ಸಮಸ್ಯೆ ಯಾಗಲಿದೆ.

- ಸೊಂಕಿತರಿಗೆ ಕೆಮ್ಮಿದ್ದಾಗ ಮತ್ತು ಸೀನಿದಾಗ ಫ್ಲೂ ವೈರಾಣುಗಳು ಒಬ್ಬರಿಂದ ಒಬ್ಬರಿಗೆ ಹರಡುತ್ತವೆ. ಕೆಲವು ಸಲ ಫ್ಲೂ ವೈರಾಣುವಿರುವ ವಸ್ತುವನ್ನು ಮುಟ್ಟಿ ಅದೆ ಕೈ ಅನ್ನು ಬಾಯಿ ಅಥವ ಮೂಗಿನ ಹತ್ತಿರ ಇಟ್ಟು ಕೊಂಡರೂ ಸೋಂಕು ತಗುಲಬಹುದು.

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## ಫ್ಲೂ ಇದ್ದ ಒಬ್ಬನು ಇನ್ನೊಬ್ಬರಿಗೆ ಹೇಗೆ ಸೋಂಕು ಹರಡಬಹುದು ?

- ಸೋಂಕು ತಗುಲಿದವರು ಇನ್ನೊಬ್ಬರಿಗೆ ತಮಗೆ ಲಕ್ಷಣ ಕಾಣಿಸಿ ಕೊಳ್ಳುವ ಒಂದು ದಿನ ಮೊದಲಿನಿಂದ ನಂತರ ಬಂದ ಏಳು ದಿನಕ್ಕೂ ಮೀರಿ ಸೋಂಕು ಹರಡುವರು. ಅಂದರೆ ನೀವು ಅನಾರೋಗ್ಯ ಪೀಡಿತರು ಎಂದು ತಿಳಿಯುವ ಮೊದಲು ಮತ್ತು ಬಂದ ನಂತರವೂ ಸೊಂಕು ಹರಡಬಹುದು.

## ಫ್ಲೂ ಬಾರದಂತೆ ನಾನು ಏನು ಮಾಡ ಬೇಕು ?

- ಕೈತೊಳೆಯುವುದು ಪ್ರಥಮ ಮತ್ತು ಅತಿ ಮುಖ್ಯ ಕೆಲಸ. ಆರೋಗ್ಯವನ್ನು ಕಾಪಾಡಿಕೊಳ್ಳುವುದು ಬಹು ಉತ್ತಮ. ಚೆನ್ನಾಗಿ ನಿದ್ರೆ ಮಾಡಿ, ದೈಹಿಕ ಚಟುವಟಿಕೆ ಇರಲಿ, ಒತ್ತಡವನ್ನು ಯಶಸ್ವಿಯಾಗಿ ನಿಭಾಯಿಸಿ, ಹೆಚ್ಚು ನೀರು ಕುಡಿಯಿರಿ . ಪೌಷ್ಟಿಕ ಆಹಾರ ಸೇವಿಸಿರಿ. ವೈರಾಣು ಇರಬಹುದಾದ ಮಲಿನವಾದುದ್ದನ್ನು ಮುಟ್ಟಬೇಡಿ, ರೋಗ ಪೀಡಿತರೊಡನೆ ಹತ್ತಿರದ ಸಂಪರ್ಕ ಬೇಡ.

### ರೋಗ ಬಾರದಂತೆ ನಾನು ಹೇಗೆ ರಕ್ಷಣೆ ಪಡೆಯಬೇಕು?

- ಹಂದಿ ಜ್ವರದಿಂದ ರಕ್ಷಣೆ ಪಡೆಯಲು ಸದ್ಯಕ್ಕೆ ಯಾವ ಔಷಧಿ (ವ್ಯಾಕ್ಸಿನ್) ಯೂ ಇಲ್ಲ. ನೀವುತೆಗೆದುಕೊಳ್ಳುವ ದೈನಂದಿನ ಚಟುವಟಿಕೆಗಳಿಂದ ರೋಗಾಣ ಹರಡುವುದನ್ನು ತಡೆಯಬಹುದು.ಈ ಕೆಳಗಿನ ಕ್ರಮಗಳಿಂದ ಆರೋಗ್ಯ ರಕ್ಷಣೆ ಸಾಧ್ಯ :

## 21. ವಿಶ್ವಸಂಸ್ಥೆಯಲ್ಲಿ ಅಧಿಕೃತ ಭಾಷೆ

### ಪ್ರಮುಖ ಸುದ್ದಿ

- ಭಾರತವು ವಿಶ್ವಸಂಸ್ಥೆಯಲ್ಲಿ ಹಿಂದಿಯನ್ನು ಅಧಿಕೃತ ಭಾಷೆಗಳಲ್ಲಿ ಸೇರಿಸುವ ಪ್ರಸ್ತಾಪವನ್ನು ಮುಂದೂಡುತ್ತಿದೆ. ಹಿಂದಿಗೆ ವಿಶ್ವಸಂಸ್ಥೆಯ ಅಧಿಕೃತ ಭಾಷೆಗಳಲ್ಲಿ ಒಂದು ಎಂಬ ಮಾನ್ಯತೆ ಪಡೆದುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ .

### ವಿಶ್ವಸಂಸ್ಥೆಯಲ್ಲಿ ಅಧಿಕೃತ ಭಾಷೆ ಎಂದು ಹೇಗೆ ಗುರುತಿಸಲಾಗುತ್ತದೆ ?

- ವಿಶ್ವಸಂಸ್ಥೆಯ 193 ಸದಸ್ಯ ರಾಷ್ಟ್ರಗಳ ಪೈಕಿ 129 ಸದಸ್ಯರು (ಮೂರನೇ ಎರಡು) ಅಧಿಕೃತ ಭಾಷೆಯ ಮಾನ್ಯತೆಗೆ ಬೆಂಬಲ ನೀಡಬೇಕು.
- ಹಿಂದಿಯನ್ನು ಅಧಿಕೃತ ಭಾಷೆಯಾಗಿಸಲು ತಗಲುವ ಖರ್ಚನ್ನು ಈ ದೇಶಗಳೇ ಭರಿಸಬೇಕು ಎಂಬುದು ವಿಶ್ವಸಂಸ್ಥೆಯ ನಿಯಮ .

### ಏಕೆ ಸಾಧ್ಯ ವಾಗುತ್ತಿಲ್ಲ ?

- ಒಟ್ಟು ಸದಸ್ಯ ರಾಷ್ಟ್ರಗಳ ಪೈಕಿ ಮೂರನೇ ಎರಡರಷ್ಟು ದೇಶಗಳ ಬೆಂಬಲ ಪಡೆದುಕೊಳ್ಳುವುದು ಕಷ್ಟದ ಕೆಲಸವಲ್ಲ. ಆದರೆ, ವೆಚ್ಚವನ್ನು ಭರಿಸುವ ವಿಚಾರಕ್ಕೆ ಬಂದಾಗ ಸಣ್ಣ ಸಣ್ಣ ದೇಶಗಳು ಹಿಂದೇಟು ಹಾಕುತ್ತವೆ. ವೆಚ್ಚ ಭರಿಸುವ ಶಕ್ತಿ ಭಾರತಕ್ಕೆ ಇದ್ದರೂ ವಿಶ್ವಸಂಸ್ಥೆಯ ನಿಯಮದಿಂದಾಗಿ ಅದು ಸಾಧ್ಯವಾಗುತ್ತಿಲ್ಲ. ಹಾಗಿದ್ದರೂ ಪ್ರಯತ್ನ ಮುಂದುವರಿಸಲಾಗಿದೆ.

### ವಿಶ್ವಸಂಸ್ಥೆಯಲ್ಲಿ ಅಧಿಕೃತ ಭಾಷೆಗಳು

- ವಿಶ್ವಸಂಸ್ಥೆಯಲ್ಲಿ ಆರು ಅಧಿಕೃತ ಭಾಷೆಗಳಿವೆ. ಅವುಗಳೆಂದರೆ ಅರೇಬಿಕ್, ಚೀನೀ, ಇಂಗ್ಲಿಷ್, ಫ್ರೆಂಚ್, ರಷ್ಯನ್ ಮತ್ತು ಸ್ಪ್ಯಾನಿಷ್ ಭಾಷೆಗಳು.
- ಈ ಭಾಷೆಗಳನ್ನು ವಿವಿಧ ಯುಎನ್ ಅಂಗ ಸಂಸ್ಥೆ ಸಭೆಗಳಲ್ಲಿ, ವಿಶೇಷವಾಗಿ ಜನರಲ್ ಅಸೆಂಬ್ಲಿ, ಎಕನಾಮಿಕ್ ಮತ್ತು ಸೋಶಿಯಲ್ ಕೌನ್ಸಿಲ್, ಮತ್ತು ಸೆಕ್ಯುರಿಟಿ ಕೌನ್ಸಿಲ್ಗಳಲ್ಲಿ ಬಳಸಲಾಗುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 22. ನಬಾರ್ಡ್ ಮಸೂದೆ

### ಪ್ರಮುಖ ಸುದ್ದಿ

- ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್ (ತಿದ್ದುಪಡಿ) ಮಸೂದೆಗೆ ರಾಜ್ಯಸಭೆಯಲ್ಲಿ ಅನುಮೋದನೆ ದೊರೆಯುವ ಮೂಲಕ ಸಂಸತ್ತಿನಲ್ಲಿ ಅಂಗೀಕಾರಗೊಂಡಿದೆ.
- ಲೋಕಸಭೆಯಲ್ಲಿ ಆಗಸ್ಟ್ 2017ರಲ್ಲಿ ಈ ಮಸೂದೆ ಅಂಗೀಕಾರಗೊಂಡಿತ್ತು. ಈ ಮಸೂದೆಯು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್ (ನಬಾರ್ಡ್) ಕಾಯಿದೆ-1981ಕ್ಕೆ ತಿದ್ದುಪಡಿ ತರಲಿದೆ. ಗ್ರಾಮೀಣ ಪ್ರದೇಶಗಳಲ್ಲಿನ ಕೃಷಿ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಸಾಲ ನೀಡುವಂತಹ ಸೌಲಭ್ಯಗಳನ್ನು ಒದಗಿಸಲು ಮತ್ತು ನಿಯಂತ್ರಿಸಲು ನಬಾರ್ಡ್ ಗೆ ಅಧಿಕಾರ ನೀಡಲಿದೆ.

## ಮುಖ್ಯ ಅಂಶಗಳು

- ನಬಾರ್ಡ್ ತಿದ್ದುಪಡಿ ಮಸೂದೆಯಿಂದಾಗಿ ಅದಕ್ಕೆ ತನ್ನ ಅಧಿಕೃತ ಬಂಡವಾಳವನ್ನು 5000 ಕೋಟಿಯಿಂದ ಆರು ಪಟ್ಟು ಹೆಚ್ಚಿಸಿ 30,000 ಕೋಟಿ ರೂ.ಗೆ ಏರಿಸಲು ಸಾಧ್ಯವಾಗಲಿದೆ. ಅಲ್ಲದೇ ಅವಶ್ಯವೆನಿಸಿದಾಗ ಕೇಂದ್ರ ಸರ್ಕಾರ ಭಾರತೀಯ ರಿಸರ್ವ್ ಬ್ಯಾಂಕ್ ನೊಂದಿಗೆ ಸಮಾಲೋಚಿಸಿ ಅಧಿಕೃತ ಬಂಡವಾಳವನ್ನು ರೂ 30000 ಕೋಟಿಗಿಂತ ಹೆಚ್ಚಿಸಲು ಅನುವು ಮಾಡಿಕೊಡಲಿದೆ.
- ಕೇಂದ್ರ ಸರ್ಕಾರ ನಬಾರ್ಡ್ ನಲ್ಲಿ ಶೇ. 51% ಬಂಡವಾಳ ಪಾಲನ್ನು ಹೊಂದುವ ಅವಕಾಶವನ್ನು ಕಲ್ಪಿಸಿದೆ. ಅಂತೆಯೇ ಆರ್‌ಬಿಐ ಹೊಂದಿರುವ ರೂ 20ಕೋಟಿ ಮೌಲ್ಯದ ಶೇರುಗಳನ್ನು ಕೇಂದ್ರ ಸರಕಾರಕ್ಕೆ ವರ್ಗಾಯಿಸಲು ಅನುಕೂಲವಾಗಿದೆ.
- ಮಸೂದೆಯು “ಸಣ್ಣ ಉದ್ಯಮ”, “ಸಣ್ಣ ಉದ್ಯಮ ಮತ್ತು ವಿಕೇಂದ್ರಿಕೃತ ವಲಯ” ಬದಲಿಗೆ “ಸೂಕ್ಷ್ಮ ಉದ್ಯಮ”, “ಸಣ್ಣ ಉದ್ಯಮ” ಮತ್ತು ಮದ್ಯಮ ಉದ್ಯಮ” ಎಂದು ಬದಲಾಯಿಸಲಿದೆ. ಅಲ್ಲದೇ ಸೂಕ್ಷ್ಮ, ಸಣ್ಣ ಮತ್ತು ಮದ್ಯಮ ಉದ್ದಿಮೆಗಳಿಗೆ ಸಾಲ ಕೊಡಲು ಬ್ಯಾಂಕುಗಳಿಗೆ ಆರ್ಥಿಕ ನೆರವು ನೀಡಲಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## ನಬಾರ್ಡ್ ಬಗ್ಗೆ

- ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್ (ನಬಾರ್ಡ್) ಮುಂಬಯಿ (ಮಹಾರಾಷ್ಟ್ರ) ಯಲ್ಲಿ ಪ್ರಧಾನ ಕಾರ್ಯಾಲಯ ಹೊಂದಿರುವ ಭಾರತದ ಒಂದು ಅಭಿವೃದ್ಧಿ ಬ್ಯಾಂಕ್ ಮತ್ತು ಇತರ ಶಾಖೆಗಳನ್ನು ದೇಶಾದ್ಯಂತ ಹೊಂದಿದೆ. ಸಮಿತಿಯು ಶ್ರೀ ಬಿ ಶಿವರಾಮನ್ ಅಧ್ಯಕ್ಷತೆಯಲ್ಲಿ ಭಾರತ (ಆರ್ಬಿಐ) ರಿಸರ್ವ್ ಬ್ಯಾಂಕ್ ಸ್ಥಾಪಿಸಲು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಗಳು ಕ್ರೆಡಿಟ್, ವ್ಯವಸ್ಥೆ ಪರಿಶೀಲನೆಯ ಕಲ್ಪಿಸಲಾಯಿತು ಮತ್ತು ಕೃಷಿ ಮತ್ತು ಗ್ರಾಮೀಣ ರಾಷ್ಟ್ರೀಯ ಬ್ಯಾಂಕ್ ಸ್ಥಾಪನೆ ಶಿಫಾರಸು ಅಭಿವೃದ್ಧಿ (ನಬಾರ್ಡ್).

- ಇದು ಸಂಸತ್ತು ವಿಶೇಷ ಕಾಯಿದೆ ಪ್ರಕಾರ 12 ಜುಲೈ 1982 ರಂದು ಸ್ಥಾಪಿಸಲಾಯಿತು ಮತ್ತು ಅದರ ಮುಖ್ಯ ಗುರಿಯು ಕೃಷಿ & ಗ್ರಾಮೀಣ ಅಲ್ಲದ ಕೃಷಿ ಕ್ಷೇತ್ರದ ಎತ್ತರಕ್ಕೆ ಸಾಲ ವಿತರಣೆಯ ಹೆಚ್ಚಿಸಿ ಗ್ರಾಮೀಣ ಉದ್ಧಾರ ಮತ್ತು ಜುಲೈ 2007 12 ರಂದು ತನ್ನ 25 ವರ್ಷಗಳನ್ನು ಪೂರೈಸಿದೆ

- ಇದು "ಭಾರತದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಮತ್ತು ಇತರ ಆರ್ಥಿಕ ಚಟುವಟಿಕೆಗಳ ಕ್ರೆಡಿಟ್ ಕ್ಷೇತ್ರದಲ್ಲಿ ನೀತಿ, ಯೋಜನೆ ಮತ್ತು ಕಾರ್ಯಾಚರಣೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ" ಜೊತೆ ಮಾನ್ಯತೆ ಮಾಡಲಾಗಿದೆ. ಆರ್ಬಿಐ ಈಗ 99% ನಷ್ಟು ಪಾಲನ್ನು ಹೊಂದಿದೆ ಭಾರತದ ಸರ್ಕಾರಕ್ಕೆ ನಬಾರ್ಡ್ ನಲ್ಲಿದ್ದ ತನ್ನ ಪಾಲನ್ನು ಮಾರಿತು.ನಬಾರ್ಡ್ ಆರ್ಥಿಕ ಸೇರ್ಪಡೆ ನೀತಿಯನ್ನು ಅಭಿವೃದ್ಧಿಪಡಿಸುವಲ್ಲಿ ಸಕ್ರಿಯವಾಗಿದೆ ಮತ್ತು ಹಣಕಾಸು ಸೇರ್ಪಡೆ ಅಲೈಯನ್ಸ್ ನ ಸದಸ್ಯನಾಗಿದೆ.

## 23. ಝೋಜಿಲಾ ಸುರಂಗ ನಿರ್ಮಾಣಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ

### ಪ್ರಮುಖ ಸುದ್ದಿ

- ಜಮ್ಮು ಮತ್ತು ಕಾಶ್ಮೀರದ ರಾಷ್ಟ್ರೀಯ ಹೆದ್ದಾರಿ 1ಎನಲ್ಲಿ ಶ್ರೀನಗರ ಹಾಗೂ ಲೆಹ್ ಪ್ರಧೇಶವನ್ನು ಸಂಪರ್ಕಿಸುವ ದ್ವಿಮುಖ ಝೋಜಿಲಾ ಸುರಂಗ ಮಾರ್ಗ ನಿರ್ಮಾಣ ಕಾರ್ಯಕ್ಕೆ ಕೇಂದ್ರ ಸರ್ಕಾರದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಒಪ್ಪಿಗೆ ನೀಡಿದೆ. ಇದು ಈ ಮಹತ್ವಾಕಾಂಕ್ಷಿ ಯೋಜನೆಯ ನಿರ್ಮಾಣ, ನಿರ್ವಹಣೆ ಮತ್ತು ಕಾರ್ಯಾಚರಣೆ ಜವಾಬ್ದಾರಿಯನ್ನು ಹೊಂದಿರುತ್ತದೆ.

- ಈ ಅತ್ಯಂತ ಪ್ರಮುಖ ಸುರಂಗಮಾರ್ಗವು ಆಯಕಟ್ಟಿನ ಮತ್ತು ಪ್ರಮುಖ ಪ್ರದೇಶವಾದ ಲೆಹ್ ಪ್ರದೇಶಕ್ಕೆ ಸರ್ವಋತು ಸಂಪರ್ಕವನ್ನು ಕಲ್ಪಿಸಲು ಅನುಕೂಲವಾಗಲಿದೆ. ಈ ಕಾಮಗಾರಿ ಪೂರ್ಣಗೊಂಡ ಬಳಿಕ, ಇದು ಏಷ್ಯಾದ ಎರಡನೇ ಅತಿದೊಡ್ಡ ದ್ವಿಮುಖ ಸುರಂಗಮಾರ್ಗ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ.

## ಪ್ರಮುಖ ಅಂಶಗಳು

- ಝೋಜಿಲ್ಲಾ ಸುರಂಗಮಾರ್ಗವು ಶ್ರೀನಗರ- ಕಾರ್ಗಿಲ್- ಲೆಹ್ ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್-1ಎ)ಯಲ್ಲಿ 11578 ಅಡಿ ಎತ್ತರದಲ್ಲಿ ಇರುತ್ತದೆ. ಈ ಯೋಜನೆಯ ಮುಖ್ಯ ಉದ್ದೇಶವೆಂದರೆ 14.150 ಮೀಟರ್ ಉದ್ದದ ಎರಡು ಲೇನ್‌ಗಳ ದ್ವಿಮುಖ ಸಿಂಗಲ್ ಟ್ಯೂಬ್ ಸುರಂಗವನ್ನು ನಿರ್ಮಿಸುವುದು. ಇದು 14.200 ಕಿಲೋಮೀಟರ್ ಉದ್ದದ ಎಸ್ಕೇಪ್ ಸುರಂಗವನ್ನು ಹೊಂದಿರುತ್ತದೆ. ಇದು ಬಲ್ತಾಲ್ ಮತ್ತು ಮೀನಾಮಾರ್ಗ ನಡುವೆ ನಿರ್ಮಾಣವಾಗಲಿದ್ದು, 6089 ಕೋಟಿ ರೂಪಾಯಿ ವೆಚ್ಚದಲ್ಲಿ ಇದನ್ನು ನಿರ್ಮಿಸಲಾಗುತ್ತದೆ.

- ಇದರ ಮುಖ್ಯ ಉದ್ದೇಶವೆಂದರೆ, ಪ್ರಮುಖ ಹಾಗೂ ಆಯಕಟ್ಟಿನ ಲೆಹ್ ಪ್ರದೇಶಕ್ಕೆ ಸರ್ವಋತು ಸಂಪರ್ಕವನ್ನು ಕಲ್ಪಿಸುವುದು. ಗುಡ್ಡಗಾಡು ಹಾಗೂ ಪರ್ವತ ಪ್ರದೇಶದ ಈ ಭಾಗಕ್ಕೆ ಇದೀಗ ಭೀಕರ ಹಿಮಪಾತ ಹಾಗೂ ಹಿಮನದಿಗಳ ಭೀತಿಯ ಕಾರಣದಿಂದಾಗಿ ಕೇವಲ ಆರು ತಿಂಗಳು ಮಾತ್ರ ಸಂಪರ್ಕ ಸಾಧ್ಯವಾಗುತ್ತಿದೆ. ಲಡಾಖ್ ಪ್ರದೇಶವು ಚಳಿಗಾಲದಲ್ಲಿ ದೊಡ್ಡ ಪ್ರಮಾಣದ ಹಿಮಪಾತದಿಂದಾಗಿ ದೇಶದ ಇತರ ಭಾಗಗಳ ಜತೆಗೆ ಸಂಪರ್ಕ ಕಡಿದುಕೊಂಡಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಈ ಯೋಜನೆಯನ್ನು ಕೇಂದ್ರ ಹೆದ್ದಾರಿ ಮತ್ತು ರಸ್ತೆಸಾರಿಗೆ ಸಚಿವಾಲಯ ಅನುಷ್ಠಾನಗೊಳಿಸುತ್ತದೆ. ರಾಷ್ಟ್ರಿಯ ಹೆದ್ದಾರಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮದ ಮೂಲಕ ಇದು ಅನುಷ್ಠಾನಗೊಳ್ಳಲಿದೆ. ಎಂಜಿನಿಯರಿಂಗ್, ಖರೀದಿ ಮತ್ತು ನಿರ್ಮಾಣ ಮಾದರಿಯಲ್ಲಿ ಇದನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

## ಮಹತ್ವ

- ಈ ಸುರಂಗಮಾರ್ಗದ ನಿರ್ಮಾಣದಿಂದಾಗಿ ಸರ್ವಋತು ಸಂಪರ್ಕ ರಸ್ತೆ ನಿರ್ಮಾಣವಾಗಲಿದ್ದು, ಸುರಕ್ಷಿತ, ಕ್ಷಿಪ್ರ ಹಾಗೂ ಅಗ್ಗದ ಸಂಪರ್ಕವನ್ನು ಶ್ರೀನಗರ, ಕಾರ್ಗಿಲ್ ಮತ್ತು ಲೇಹ್ ಪ್ರದೇಶಗಳ ನಡುವೆ ಕಲ್ಪಿಸಲು ಅನುಕೂಲವಾಗಲಿದೆ.
- ಇದು ಈ ಭಾಗದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಮತ್ತು ಸಾಮಾಜಿಕ- ಸಾಂಸ್ಕೃತಿಕ ಏಕೀಕರಣಕ್ಕೂ ಸಹಕಾರಿಯಾಗಲಿದೆ. ಇದಕ್ಕೆ ಆಯಕಟ್ಟಿನ ಮತ್ತು ಸಾಮಾಜಿಕ- ಸಾಂಸ್ಕೃತಿಕ ಮಹತ್ವವಿದ್ದು, ಜಮ್ಮು ಮತ್ತು ಕಾಶ್ಮೀರದ ಆರ್ಥಿಕವಾಗಿ ಹಿಂದುಳಿದ ಈ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಗೆ ನೆರವಾಗಲಿದೆ.
- ಈ ಯೋಜನೆ ಪೂರ್ಣಗೊಂಡ ಬಳಿಕ ಸ್ಥಳೀಯ ವಹಿವಾಟನ್ನು ರಾಷ್ಟ್ರಮಟ್ಟದ ಮಾರುಕಟ್ಟೆಗೆ ಸಂಪರ್ಕಿಸಲು ಸಾಧ್ಯವಾಗಲಿದ್ದು, ಇದರಿಂದ ಉದ್ಯೋಗ ಮತ್ತು ವಾಣಿಜ್ಯ ವಹಿವಾಟಿಗೆ ದೊಡ್ಡ ಪ್ರಮಾಣದ ಉತ್ತೇಜನ ಸಿಗಲಿದೆ. ಜತೆಗೆ ವರ್ಷವಿಡೀ ಪ್ರವಾಸಿಗಳನ್ನು ಆಕರ್ಷಿಸಲು ಕೂಡಾ ಇದು ಮಹತ್ವದ ಯೋಜನೆಯಾಗಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 24. ಭಾರತ-ಮಯನ್ಮಾರ್ ಭೂ ಗಡಿ ದಾಟುವ ಒಪ್ಪಂದಕ್ಕೆ ಸಚಿವ ಸಂಪುಟ ಒಪ್ಪಿಗೆ

### ಪ್ರಮುಖ ಸುದ್ದಿ

- ಭಾರತ-ಮಯನ್ಮಾರ್ ನಡುವಿನ ಭೂ ಗಡಿ ದಾಟುವ ಒಪ್ಪಂದಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ. ಉಭಯ ದೇಶಗಳ ನಡುವೆ ಗಡಿ ಭಾಗದ ಮೂಲಕ ಸಾರ್ವಜನಿಕರು ಮುಕ್ತವಾಗಿ ಸಂಚರಿಸಲು ಅನುಕೂಲ ಮಾಡುವ ಒಪ್ಪಂದ ಇದಾಗಿದೆ. ಈ ಒಪ್ಪಂದವು ಭಾರತದ ಈಶಾನ್ಯ ರಾಜ್ಯಗಳ ಹಾಗೂ ಮಯನ್ಮಾರ್ ಜನರೊಂದಿಗೆ ಸಂಪರ್ಕ ಸಾಧಿಸಲು ಹಾಗೂ ಪರಸ್ಪರ ವರ್ಧಿಸಲು ಅನುವು ಮಾಡಲಿದೆ ಎಂದು ನಿರೀಕ್ಷಿಸಲಾಗಿದೆ.

### ಮಹತ್ವ:

- ಒಪ್ಪಂದವು ಮಾನ್ಯತೆ ಹೊಂದಿರುವ ಪಾಸ್ ಪೋರ್ಟ್ ಮತ್ತು ವೀಸಾಗಳ ಆಧಾರದ ಮೇಲೆ ಜನರ ಚಲನೆಯನ್ನು ಸುಲಭಗೊಳಿಸಲಿದೆ. ಇದರಿಂದ ಉಭಯ ದೇಶಗಳ ನಡುವೆ ಆರ್ಥಿಕ ಮತ್ತು ಸಾಮಾಜಿಕ ಪರಸ್ಪರ ವರ್ಧನೆಗಳನ್ನು ಹೆಚ್ಚಲಿದೆ.
- ಒಪ್ಪಂದವು ಉಭಯ ದೇಶಗಳ ಗಡಿ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಈಗಾಗಲೇ ಅಸ್ತಿತ್ವದಲ್ಲಿರುವ ಮುಕ್ತ ಸಂಚಾರ ಹಕ್ಕುಗಳ ನಿಯಂತ್ರಣ ಮತ್ತು ಸುಸಂಗತತೆಯನ್ನು ಸುಲಭಗೊಳಿಸಲಿದೆ.
- ಈಶಾನ್ಯ ರಾಜ್ಯಗಳಲ್ಲಿ ಆರ್ಥಿಕತೆಯನ್ನು ಸುಧಾರಿಸಲು ಹಾಗೂ ಮಯನ್ಮಾರ್ ನೊಂದಿಗೆ ಭೌಗೋಳಿಕ ಸಂಪರ್ಕವನ್ನು ಸಾಧಿಸಿ ವ್ಯಾಪಾರ-ವಹಿವಾಟು ಹೆಚ್ಚಿಸಲು ಸಾಧ್ಯವಾಗಲಿದೆ.

**ಹಿನ್ನಲೆ:**

- ಭಾರತವು ಮಯನ್ಮಾರ್ ನೊಂದಿಗೆ 1643 ಕಿ.ಮೀ ಉದ್ದದ ಗಡಿಯನ್ನು ಹೊಂದಿದೆ. ಭಾರತದ ಈಶಾನ್ಯ ರಾಜ್ಯಗಳಾದ ಅರುಣಾಚಲ ಪ್ರದೇಶ, ನಾಗಲ್ಯಾಂಡ್, ಮಣಿಪುರ ಮತ್ತು ಮಿಜೋರಾಂ ಮಯನ್ಮಾರ್ ನೊಂದಿಗೆ ಗಡಿ ಭಾಗವನ್ನು ಹಂಚಿಕೊಂಡಿವೆ.
- ಪ್ರಸ್ತುತ ಎರಡೂ ದೇಶಗಳು ಗಡಿಯ ಎರಡೂ ಕಡೆಗಳಲ್ಲಿ 16 ಕಿಮೀ ವ್ಯಾಪ್ತಿಯಲ್ಲಿ ವಾಸಿಸುವ ಜನರಿಗೆ ವಿಶಿಷ್ಟವಾದ ವೀಸಾ-ಮುಕ್ತ ಸಂಚಾರ ವ್ಯವಸ್ಥೆಯನ್ನು ಹೊಂದಿವೆ.

## 25. ವಿಶ್ವ ಪುಸ್ತಕ ಮೇಳ

### ಪ್ರಮುಖ ಸುದ್ದಿ

- 26ನೇ ವಾರ್ಷಿಕ ವಿಶ್ವ ಪುಸ್ತಕ ಮೇಳ ನವದೆಹಲಿಯಲ್ಲಿ ಇತ್ತೀಚೆಗೆ ನಡೆಯಿತು. ಇದನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದಡಿ ಕಾರ್ಯ ನಿರ್ವಹಿಸುವ ನ್ಯಾಷನಲ್ ಬುಕ್ ಟ್ರಸ್ಟ್ (ಎನ್‌ಬಿಟಿ) ಆಯೋಜಿಸಿತ್ತು. ಇಂಡಿಯಾ ಟ್ರೇಡ್ ಪ್ರಮೋಷನ್ ಆರ್ಗನೈಸೇಷನ್‌ನ ಸಹಯೋದಲ್ಲಿ ಇದನ್ನು ಆಯೋಜಿಸಲಾಗಿತ್ತು.

- ಈ ವರ್ಷದ ಪುಸ್ತಕ ಮೇಳದ ಮುಖ್ಯ ತಿರುಳು (Theme) ಪರಿಸರ ಮತ್ತು ಹವಾಮಾನ ಬದಲಾವಣೆ ಎಂದಾಗಿದೆ. ಇದು ಪರಿಸರ ವಿಷಯಗಳಾದ ಹವಾಮಾನ ಬದಲಾವಣೆ, ಜಾಗತಿಕ ತಾಪಮಾನ ಮತ್ತು ಜಲಮಾಲಿನ್ಯದ ಬಗೆಗಿನ ಅಂಶಗಳ ಬಗ್ಗೆ ಗಮನ ಹರಿಸಿದೆ. ಮುಂದಿನ ವರ್ಷದ ಪುಸ್ತಕ ಮೇಳಕ್ಕೆ ಯೂರೋಪಿಯನ್ ಒಕ್ಕೂಟ ಅತಿಥೇಯ ದೇಶವಾಗಿದೆ.

### ಹಿನ್ನಲೆ

- ವಾರ್ಷಿಕ ನವದೆಹಲಿ ವಿಶ್ವ ಪುಸ್ತಕ ಮೇಳ 1972ರಲ್ಲಿ ಆರಂಭವಾಗಿದೆ. ನವದೆಹಲಿಯಲ್ಲಿ ನಡೆದ ಆರಂಭಿಕ ಮೇಳದಲ್ಲಿ 200ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು. ವರ್ಷಗಳು ಕಳೆದಂತೆ ಇದು ಬೃಹತ್ ಮೇಳವಾಗಿ ಬೆಳೆದಿದ್ದು, 2016 ಹಾಗೂ 2017ರಲ್ಲಿ ಕ್ರಮವಾಗಿ 886 ಮತ್ತು 800 ಮಂದಿ ಪ್ರಕಾಶಕರು ಭಾಗವಹಿಸಿದ್ದರು.
- 2016ನೇ ವರ್ಷದ ಪುಸ್ತಕ ಮೇಳದ ತಿರುಳು(Theme) ಮಾನುಷಿ ಎಂದಾಗಿತ್ತು. ಇದು ಪ್ರಾಚೀನ ಕಾಲದಿಂದ ಆಧುನಿಕ ಯುಗದವರೆಗಿನ ಮಹಿಳೆಯರ ಬಗೆಗಿನ ಕೃತಿಗಳನ್ನು ಕೇಂದ್ರೀಕರಿಸಿ ನಡೆದ ಪುಸ್ತಕ ಮೇಳವಾಗಿ ಪುಸ್ತಕಪ್ರೇಮಿಗಳ ಗಮನ ಸೆಳೆದಿತ್ತು.

## 26. ಪುರುಷ-ಮಹಿಳೆಯರಿಗೆ ಐಸ್ ಲ್ಯಾಂಡ್ ನಲ್ಲಿ ಸಮಾನ ವೇತನ (Iceland becomes first country to legalise equal pay)

### ಪ್ರಮುಖ ಸುದ್ದಿ

- ಐಸ್ ಲ್ಯಾಂಡ್ ನಲ್ಲಿ ಪುರುಷರಿಗೆ ಮಹಿಳೆಯರಿಗಿಂತ ಹೆಚ್ಚು ವೇತನ ಪಾವತಿಸುವ ನಿಯಮವನ್ನು ಕಾನೂನುಬಾಹಿರಗೊಳಿಸಿದೆ. ಎಲ್ಲರಿಗೂ ಸಮಾನವೇತನ ನಿಯಮ ಜಾರಿಗೆ ತಂದ ಮೊದಲ ರಾಷ್ಟ್ರ ಐಸ್ ಲ್ಯಾಂಡ್.

ಮುಖ್ಯ ಅಂಶಗಳು

- ಕಳೆದ ವರ್ಷ ಪ್ರಸ್ತಾಪಿಸಿದ್ದ ಈ ಕಾನೂನು ಜನವರಿ 1ರಿಂದ ಜಾರಿಗೆ ಬಂದಿದೆ. ಪುರುಷರು ಮತ್ತು ಮಹಿಳೆಯರು ಇಬ್ಬರಿಗೂ ಸಮಾನ ವೇತನ ದೊರೆಯಲಿದೆ. ಇನ್ನು ಮುಂದೆ ಕನಿಷ್ಠ 25 ನೌಕರರನ್ನು ನೇಮಕ ಮಾಡಿಕೊಳ್ಳುವ ಕಂಪನಿಗಳು ಮತ್ತು ಸರ್ಕಾರಿ ಏಜೆನ್ಸಿಗಳು, ಸರ್ಕಾರದ ಸಮಾನ ವೇತನ ನೀತಿಯ ಪ್ರಮಾಣಪತ್ರ ಪಡೆಯಬೇಕು.

- ಪ್ರಮಾಣಪತ್ರ ಪಡೆಯದೇ ಇದ್ದಲ್ಲಿ ದಂಡ ವಿಧಿಸಲಾಗುತ್ತದೆ. ಕಳೆದ 9 ವರ್ಷಗಳಿಂದ ಆರ್ಥಿಕತೆ, ಶಿಕ್ಷಣ, ಆರೋಗ್ಯ ಮತ್ತು ರಾಜಕೀಯದಲ್ಲಿ ಲಿಂಗ ಸಮಾನತೆ ಕಾಯ್ದುಕೊಂಡ ರಾಷ್ಟ್ರಗಳಲ್ಲಿ ಐಸ್ ಲ್ಯಾಂಡ್ ಅಗ್ರಸ್ಥಾನದಲ್ಲಿದೆ. ಮೀಸಲಾತಿ ಇಲ್ಲದೇ ಶೇ.48ರಷ್ಟು ಮಹಿಳೆಯರು ಸಂಸತ್ ಪ್ರವೇಶಿಸುತ್ತಿದ್ದಾರೆ.

ಹಿನ್ನಲೆ

- ಐಸ್ ಲ್ಯಾಂಡ್.ಸುಮಾರು 323,000 ಜನರಿರುವ ಉತ್ತರ ಅಟ್ಲಾಂಟಿಕ್ ಸಾಗರದಲ್ಲಿರುವ ಒಂದು ದ್ವೀಪ ರಾಷ್ಟ್ರವಾಗಿದ್ದು, ಪ್ರವಾಸೋದ್ಯಮ ಮತ್ತು ಮೀನುಗಾರಿಕೆಗಳ ಆಧಾರದ ಮೇಲೆ ಬಲವಾದ ಆರ್ಥಿಕತೆಯನ್ನು ಹೊಂದಿದೆ.
- ಕಳೆದ ಒಂಬತ್ತು ವರ್ಷಗಳಿಂದ, ವಿಶ್ವ ಆರ್ಥಿಕ ವೇದಿಕೆಯು (WEF) ವಿಶ್ವದಲ್ಲೇ ಹೆಚ್ಚು ಲಿಂಗ-ಸಮಾನ ದೇಶವೆಂದು ಪರಿಗಣಿಸಿದೆ.

## 27. ಪಾಕಿಸ್ತಾನವನ್ನು ವಿಶೇಷ ಕಣ್ಗಾವಲು ಪಟ್ಟಿಯಲ್ಲಿ ಸೇರಿಸಿದ ಅಮೇರಿಕ

ಪ್ರಮುಖ ಸುದ್ದಿ

- ಭಯೋತ್ಪಾದಕ ಸಂಘಟನೆಗಳ ವಿರುದ್ಧ ಕ್ರಮ ಕೈಗೊಳ್ಳುವವರೆಗೂ ಪಾಕಿಸ್ತಾನದ ಭದ್ರತಾ ನೆರವನ್ನು ನಿಲ್ಲಿಸಿ ತನ್ನ ಎಲ್ಲಾ ಮಿಲಿಟರಿ ನೆರವನ್ನು ಹಿಂಪಡೆಯುವ ಮೂಲಕ ಪಾಕಿಸ್ತಾನಕ್ಕೆ ಮತ್ತೊಂದು ಪ್ರಮುಖ ಹೊಡೆತವನ್ನು ಅಮೇರಿಕ ನೀಡಿದೆ. ಅಷ್ಟೇ ಅಲ್ಲದೆ ಧಾರ್ಮಿಕ ಸ್ವಾತಂತ್ರ್ಯದ ಉಲ್ಲಂಘನೆಯ ಮೇಲೆ ಪಾಕಿಸ್ತಾನವನ್ನು ವಿಶೇಷ ಕಣ್ಗಾವಲು ಪಟ್ಟಿಯಲ್ಲಿ ಇರಿಸಿದೆ. ಪಾಕಿಸ್ತಾನದ ಭೂಮಿಗಳಿಂದ ಭಯೋತ್ಪಾದನೆಯನ್ನು ಅಂತ್ಯಗೊಳಿಸಲು ವಿಫಲವಾದ ಕಾರಣದಿಂದಾಗಿ ಹೀಗೆ ಮಾಡಲಾಗುತ್ತಿದೆ ಎಂದು ಯುಎಸ್ ಸ್ಟೇಟ್ ಡಿಪಾರ್ಟ್ಮೆಂಟ್ ಹೇಳಿದೆ.

### ವಿಶೇಷ ಕಣ್ಗಾವಲು ಪಟ್ಟಿಯಲ್ಲಿ ಏಕೆ ಸೇರಿಸಿದೆ ?

- ಪಾಕಿಸ್ತಾನ ಎಲ್ಲಿಯವರೆಗೂ ತನ್ನ ಉಗ್ರರ ಪರ ನಿಲುವನ್ನು ಮುಂದುವರೆಸುತ್ತದೆಯೋ, ಎಲ್ಲಿಯವರೆಗೂ ಉಗ್ರರ ವಿರುದ್ಧ ನಿರ್ಣಾಯಕ ಹೋರಾಟಕ್ಕೆ ಮುಂದಾಗುವುದಿಲ್ಲವೋ ಅಲ್ಲಿಯವರೆಗೂ ಪಾಕಿಸ್ತಾನಕ್ಕೆ ಸಂಬಂಧಿಸಿದಂತೆ ಅಮೆರಿಕ ತನ್ನ ಕಠಿಣ ನಿಲುವನ್ನು ಮುಂದುವರೆಸಲಿದೆ.
- ಪಾಕಿಸ್ತಾನದಲ್ಲಿ ಬಲವಾಗಿ ಬೇರು ಬಿಟ್ಟಿರುವ ಆಫ್ಘಾನಿಸ್ತಾನ ಮೂಲದ ತಾಲಿಬಾನ್ ಉಗ್ರ ಸಂಘಟನೆ ಮತ್ತು ಹಖ್ಖಾನಿ ನೆಟ್ ವರ್ಕ್ ವಿರುದ್ಧ ಪಾಕಿಸ್ತಾನ ಸರ್ಕಾರ ಕಠಿಣ ಕ್ರಮ ಕೈಗೊಳ್ಳಲೇಬೇಕು. ಹೀಗಾಗಿ ಪ್ರಸ್ತುತ ಪಾಕಿಸ್ತಾನಕ್ಕೆ ಅಮೆರಿಕ ನೀಡುತ್ತಿದ್ದ ವಿಶೇಷ ಭದ್ರತಾ ನೆರವನ್ನು ಅಮಾನತು ಮಾಡಲಾಗಿದೆ .

- ಇನ್ನು ಪಾಕಿಸ್ತಾನಕ್ಕೆ ನೀಡಿದ್ದ ವಿಶೇಷ ಭದ್ರತಾ ನೆರವು ಅಮಾನತು ಮಾತ್ರವಲ್ಲ, ಅಂತೆಯೆ ಪಾಕಿಸ್ತಾನವನ್ನು ಅಮೆರಿಕದ ಉಗ್ರ ಪೀಡಿತ ರಾಷ್ಟ್ರಗಳಿರುವ ವಿಶೇಷ ಕಣ್ಗಾವಲು ರಾಷ್ಟ್ರಗಳ ಪಟ್ಟಿಗೂ ಸೇರಿಸಲಾಗಿದೆ.

- ಆ ಮೂಲಕ ಪಾಕಿಸ್ತಾನ ಪ್ರತಿಯೊಂದು ನಡೆಯನ್ನೂ ಅಮೆರಿಕದ ವಿಶೇಷ ಪಡೆಗಳು ವೀಕ್ಷಣೆ ಮಾಡಲಿವೆ. ಪಾಕಿಸ್ತಾನದಲ್ಲಿ ನಡೆಯುವ ಧಾರ್ಮಿಕ ಹಿಂಸಾಚಾರ, ಧಾರ್ಮಿಕ ಸ್ವಾತಂತ್ರ್ಯ ಹರಣದಂತಹ ಪ್ರಕರಣಗಳ ವರದಿಯನ್ನು ಈ ತಂಡ ಮಾಡಲಿದೆ.

## 28. ರಾಷ್ಟ್ರೀಯ ಜಲಮಾರ್ಗ -1

### ಪ್ರಮುಖ ಸುದ್ದಿ

- ಆರ್ಥಿಕ ವ್ಯವಹಾರಗಳ ಕ್ಯಾಬಿನೆಟ್ ಸಮಿತಿಯು ಮತ್ತೊಂದು ಪ್ರಮುಖ ನಿರ್ಧಾರವನ್ನು ತೆಗೆದುಕೊಂಡಿತು.ಜಲ ಮಾರ್ಗ ವಿಕಾಸ್ ಯೋಜನೆ ಅಡಿಯಲ್ಲಿ ರಾಷ್ಟ್ರೀಯ ಜಲಮಾರ್ಗ -1 ರ ಸಂಚರಣೆ ಸಾಮರ್ಥ್ಯ ಹೆಚ್ಚಿಸಲು ತೀರ್ಮಾನಿಸಲಾಗಿದೆ.
- ವಿಶ್ವ ಬ್ಯಾಂಕ್ ನ ತಾಂತ್ರಿಕ ನೆರವು ಮತ್ತು ಹೂಡಿಕೆ ಬೆಂಬಲದೊಂದಿಗೆ 5,369 ಕೋಟಿ ರೂಪಾಯಿ ವೆಚ್ಚದಲ್ಲಿ ಈ ಯೋಜನೆಯು ಮಾರ್ಚ್ 2023 ರೊಳಗೆ ಪೂರ್ಣಗೊಳ್ಳಲಿದೆ ಎಂದು ನಿರೀಕ್ಷಿಸಲಾಗಿದೆ.

### ಜಲ ಮಾರ್ಗ ವಿಕಾಸ ಯೋಜನೆ ಬಗ್ಗೆ

- ಗಂಗಾ ನದಿಯ ಮೇಲೆ ಕನಿಷ್ಠ 1500 ಟನ್ ಹಡಗುಗಳ ವಾಣಿಜ್ಯ ಸಂಚರಣೆ ಸಕ್ರಿಯಗೊಳಿಸಲು 2014-15ರ ಬಜೆಟ್ನಲ್ಲಿ ಜಲ ಮಾರ್ಗ ವಿಕಾಸ ಯೋಜನೆಯನ್ನು ಕೇಂದ್ರ ಸರ್ಕಾರ ಘೋಷಿಸಿತು. ಯೋಜನೆಯಡಿ ಗಂಗಾ ನದಿಯ ಮೇಲೆ ಅಲಹಾಬಾದ್ ಮತ್ತು ಹಲ್ದಿಯಾ ನಡುವೆ 1620 ಕಿ.ಮೀ ಜಲಮಾರ್ಗವನ್ನು ಅಭಿವೃದ್ಧಿಪಡಿಸಲಾಗುವುದು.
- ಈ ಯೋಜನೆಯು ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳವನ್ನು ಒಳಗೊಂಡಿದೆ. ವಾರಾಣಸಿ, ಬಲಿಯಾ, ಘಜಿಪುರ್, ಚಪ್ರಾ, ಬಕ್ಸಾರ್, ಪಾಟ್ನಾ, ವೈಶಾಲಿ, ಖಗೇರಿಯಾ, ಬೇಗುಸಾರೈ, ಮುಂಗರ್, ಭಾಗಲ್ಪುರ್, ಸಾಹಿಬ್ ಗಂಜ್ ಯೋಜನೆಯಡಿ ಬರುವ ಪ್ರಮುಖ ಜಿಲ್ಲೆಗಳು.
- ಗಂಗಾ ನದಿಯಲ್ಲಿ 1500 ಟನ್ ಹಡಗುಗಳ ವಾಣಿಜ್ಯ ಸಂಚರಣೆ ಸಕ್ರಿಯಗೊಳಿಸಲು ಮೂರು ಮೀಟರ್ಗಳಷ್ಟು ಆಳವನ್ನು ಹೊಂದಿರುವ ಫೇರ್ ವೇ ಅಭಿವೃದ್ಧಿಪಡಿಸುವುದು ಯೋಜನೆಯ ಉದ್ದೇಶ.

## 29. ನಾಸಾದಿಂದ ಎರಡು ಹೊಸ ಯೋಜನೆ

### ಪ್ರಮುಖ ಸುದ್ದಿ

- ನ್ಯಾಷನಲ್ ಏರೋನಾಟಿಕ್ಸ್ ಅಂಡ್ ಸ್ಪೇಸ್ ಅಡ್ಮಿನಿಸ್ಟ್ರೇಷನ್ (ನಾಸಾ), ಗೋಲ್ಡ್ ಮತ್ತು ಐಕಾನ್ ಎಂಬ ಎರಡು ಹೊಸ ಯೋಜನೆಗಳನ್ನು ಹಮ್ಮಿಕೊಂಡಿದ್ದು, ಈ ವರ್ಷದ ಕೊನೆಯ ವೇಳೆಗೆ ಇದನ್ನು ಉಡಾಯಿಸುವ ನಿರೀಕ್ಷೆ ಇದೆ. ಇದು ಭೂಮಿಯ ಮೇಲ್ಮೈನಿಂದ 96 ಕಿಲೋಮೀಟರ್ ಎತ್ತರದಲ್ಲಿರುವ ಆಂತರಿಕ ಪದರವನ್ನು ಸಂಶೋಧಿಸುವ ಗುರಿ ಹೊಂದಿದೆ.

- ಲಿಂಬ್ ಮತ್ತು ಡಿಸ್ಕ್‌ನ ಜಾಗತಿಕ ಪ್ರಮಾಣದ ವೀಕ್ಷಣೆ (ಜಿಓಎಲ್‌ಡಿ)ಯನ್ನು 2018ರ ಜನವರಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿದ್ದು, ಅಯೊನೊಸ್ಪಿಯರಿಕ್ ಎಕ್ಸ್‌ಪ್ಲೋರರ್ ಅನ್ನು ಈ ವರ್ಷದ ಕೊನೆಯಲ್ಲಿ ಕೈಗೊಳ್ಳಲಾಗುತ್ತದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಪ್ರಮುಖ ಅಂಶಗಳು

- ಈ ಎರಡು ಮಿಷನ್‌ಗಳು ಒಂದಕ್ಕೊಂದು ಪೂರಕವಾಗಿರುತ್ತವೆ. ಐಸಿಓಎನ್ ಯೋಜನೆಯನ್ನು ಭೂಮಿಯ ಕೆಳ ಕಕ್ಷೆಯಲ್ಲಿ ಕೈಗೊಳ್ಳಲಾಗುತ್ತದೆ. ಇದು ಭೂಮಿಯ ಮೇಲ್ಮೈನಿಂದ 560 ಕಿಲೋಮೀಟರ್ ಎತ್ತರದಲ್ಲಿದೆ. ಇದು ಕ್ಲೋಸ್ ಅಪ್ ಕ್ಯಾಮೆರಾದಂತೆ ಕೆಲಸ ಮಾಡಲಿದೆ.
- ಗೋಲ್ಡ್ ಯೋಜನೆಯನ್ನು ಭೂಸ್ಥಾಯಿ ಕಕ್ಷೆಯಲ್ಲಿ ಕೈಗೊಳ್ಳಲಾಗುತ್ತಿದ್ದು, ಪಶ್ಚಿಮ ವಲಯದಲ್ಲಿ ಭೂಮಿಯಿಂದ 35398 ಕಿಲೋಮೀಟರ್ ಎತ್ತರದಲ್ಲಿ ಇದನ್ನು ಕೈಗೊಳ್ಳಲಾಗುತ್ತದೆ. ಇದು ಅಯೋನೋಸ್ಪೇರ್ನ ಫುಲ್ ಡಿಸ್ಕ್ ದೃಶ್ಯಾವಳಿಯನ್ನು ಮತ್ತು ಮೇಲ್ಮಟ್ಟದ ವಾತಾವರಣದ ಮಾಹಿತಿಯನ್ನು ಪ್ರತಿ ಅರ್ಧಗಂಟೆಗೊಂದರಂತೆ ನೀಡಲಿದೆ.

- ಈ ಮಿಷನ್‌ನ ಮುಖ್ಯವಾದ ಗುರಿಯೆಂದರೆ, ಹೇಗೆ ಮೇಲ್ಮಟ್ಟದ ವಾತಾವರಣವು ಬಿರುಗಾಳಿ ಹಾಗೂ ಭೂಕಂಪದ ಸಂದರ್ಭದಲ್ಲಿ ಸ್ಪಂದಿಸುತ್ತದೆ ಎನ್ನುವುದನ್ನು ನಿರ್ಧರಿಸುವುದಾಗಿದೆ. ಪ್ರತಿ ಮಿಷನ್ ಕೂಡಾ ಇದರ ವಿನ್ಯಾಸವನ್ನು ಕೂಡಾ ನೀಡಲಿದೆ.

- ಈ ಮೂಲಕ ಸಮಗ್ರಹಿಸಿದ ಮಾಹಿತಿತು ಮೇಲ್ಮಟ್ಟದ ವಾತಾವರಣವು ನಿಗದಿತ ಅವಧಿಯಲ್ಲಿ ಬದಲಾಗುವ ಕಾರಣಗಳನ್ನು ವಿಶ್ಲೇಷಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ.

- ರಾತ್ರಿಯ ವೇಳೆಯಲ್ಲಿ ಗೋಲ್ಡ್ ಮಿಷನ್‌ನಡಿ ಅಯೋನೋಸ್ಫೇರ್‌ನಲ್ಲಿ ಆಗುವ ವ್ಯತ್ಯಯಗಳನ್ನು ಪರಿಶೀಲನೆ ಮಾಡಲಿದೆ. ಅದರಲ್ಲೂ ಮುಖ್ಯವಾಗಿ ದಟ್ಟತೆ, ಸಮಭಾಜಕ ವೃತ್ತದಲ್ಲಿ ಕಾಣಿಸಿಕೊಳ್ಳುವ ಅನಿರೀಕ್ಷಿತ ಅನಿಲದ ಗುಳ್ಳೆಗಳು ಮತ್ತು ಹವಾಗುಣ ಮತ್ತು ರೇಡಿಯೊ ಸಂವಹನದ ಸಂವಾದದ ಬಗ್ಗೆ ಕೂಡಾ ಅಗತ್ಯವಾದ ಮಾಹಿತಿಗಳನ್ನು ಒದಗಿಸಲಿದೆ.

### ಅಯೋನೋಸ್ಫೇರ್

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಅಯೋನೋಸ್ಫೇರ್ ಎನ್ನುವುದು ಭೂಮಿಯ ಮಟ್ಟದಿಂದ 60 ಕಿಲೋಮೀಟರ್ನಿಮದ 400 ಕಿಲೋಮಿಟರ್ವರೆಗೆ ಇರುತ್ತದೆ. ಇದು ಮುಖ್ಯವಾಗಿ ವಿದ್ಯುತ್‌ಕಾಂತೀಯ ಕಣಗಳನ್ನು ಹೊಂದಿದ್ದು, ಇವುಗಳನ್ನು ಅಯಾನ್‌ಗಳು ಎಂದು ಕರೆಯಲಾಗುತ್ತದೆ. ಆದ್ದರಿಂದ ಇದನ್ನು ಅಯಾನ್‌ಗಳ ಪರಿದಿ ಎಮದು ಕರೆಯಲಾಗುತ್ತದೆ.
- ಭೂಮಿಯಿಂದ ವರ್ಗಾವಣೆಯಾಗುವ ರೇಡಿಯೊ ತರಂಗಗಳು, ಈ ಪದರದಲ್ಲಿ ಪ್ರತಿಫಲನಗೊಂಡು ಭೂಮಿಗೆ ಮರಳುತ್ತವೆ. ಇದು ರೇಡಿಯೊ ತರಂಗಗಳ ಪ್ರಫಲನಕ್ಕೆ ಅನುಕೂಲವಾಗಲಿದೆ. ಈ ವಾತಾವರಣದಿಂದಾಚೆಗೆ ಎತ್ತರಕ್ಕೆ ಹೋದಷ್ಟೂ ಉಷ್ಣತೆ ಹೆಚ್ಚುತ್ತಾ ಹೋಗುತ್ತದೆ.

## 30. 'ಟ್ರಾನ್ಸ್ ಪೋರ್ಟ್ ಫಾರ್ ಲಂಡನ್'

ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು ಭಾರತದಲ್ಲಿ ಸಾರ್ವಜನಿಕ ಸಾರಿಗೆಯ ಸುಧಾರಣೆಗಾಗಿ ಬೃಹತ್ ಲಂಡನ್ ಪ್ರಾಧಿಕಾರ ಕಾಯಿದೆ 1999 (ಯುಕೆ) ಅಡಿಯಲ್ಲಿ ಸ್ಥಾಪಿಸಲಾಗಿರುವ ಶಾಸನಾತ್ಮಕ ಕಾಯ "ಟ್ರಾನ್ಸ್ ಪೋರ್ಟ್ ಫಾರ್ ಲಂಡನ್' ಹಾಗೂ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯಗಳ ನಡುವೆ ತಿಳಿವಳಿಕೆ ಒಪ್ಪಂದ (ಎಂ.ಓ.ಯು.)ಕ್ಕೆ ಸಹಿ ಹಾಕಲು ಮತ್ತು ಅದನ್ನು ಅನುಷ್ಠಾನಗೊಳಿಸಲು ತನ್ನ ಅನುಮೋದನೆ ನೀಡಿದೆ.

ಮುಖ್ಯ ಅಂಶಗಳು

- ಈ ತಿಳಿವಳಿಕೆ ಒಪ್ಪಂದವು ದೇಶದಲ್ಲಿ ಒಟ್ಟಾರೆಯಾಗಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಸುಧಾರಣೆ ಮಾಡಲು, ಪ್ರಯಾಣಿಕರ ಸೇವೆಗಳನ್ನು ಉತ್ತಮ ಪಡಿಸಲು ಮತ್ತು ಹೆಚ್ಚಿನ ಸಾಮರ್ಥ್ಯದ ಬಸ್ ಗಳನ್ನು ಭಾರತದಲ್ಲಿ ಬಳಕೆ ಮಾಡಲು ನೆರವಾಗುತ್ತದೆ. ಇದು ಭಾರತ ಮತ್ತು ಯುನೈಟೆಡ್ ಕಿಂಗ್ಡಮ್ ನಡುವೆ ದ್ವಿಪಕ್ಷೀಯ ಸಹಕಾರ ಉತ್ತೇಜಿಸಲು ಮತ್ತು ಬಾಂಧವ್ಯವನ್ನು ದೀರ್ಘಕಾಲದವರೆಗೆ ಬಲಪಡಿಸಲಿದೆ.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಈ ತಿಳಿವಳಿಕೆ ಒಪ್ಪಂದವು ಸರ್ವರಿಗಾಗಿ ಸಮಗ್ರ ಸಾರ್ವಜನಿಕ ಸಾರಿಗೆಯನ್ನು ಬಲಪಡಿಸಲು ನೆರವಾಗುತ್ತದೆ. ಇದು ಸಮಾಜದ ಬಡ ಸಮುದಾಯದ ಜನರಿಗೆ ಗುಣಮಟ್ಟದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಸೌಕರ್ಯ ಪಡೆಸಲು ನೆರವಾಗುತ್ತದೆ.

## 31. H5 ಏವಿಯನ್ ಇನ್‌ಫ್ಲುಯೆಂಝಾ

ಪ್ರಮುಖ ಸುದ್ದಿ

- ಬೆಂಗಳೂರಿನ ದಾಸರಹಳ್ಳಿಯಲ್ಲಿ ಹಕ್ಕಿ ಸೋಂಕು ಅಥವಾ ಬರ್ಡ್ ಫ್ಲೂ ಕಾಣಿಸಿಕೊಂಡಿರುವುದನ್ನು ಕೇಂದ್ರ ಸರಕಾರ ಖಚಿತಪಡಿಸಿದೆ. ರೋಗ ತಡೆಯುವ ಹಾದಿಯಲ್ಲಿ ಕರ್ನಾಟಕಕ್ಕೆ ನೆರವಾಗಲು ಈಗಾಗಲೇ ಕೇಂದ್ರದಿಂದ ಒಂದು ತಂಡ ಕಳುಹಿಸಲಾಗಿದೆ.
- ಪರಿಸ್ಥಿತಿ ಈಗ ಸಂಪೂರ್ಣ ಹತೋಟಿಯಲ್ಲಿದ್ದು, ಹಕ್ಕಿ ಜ್ವರ ಕಾಣಿಸಿಕೊಂಡಿರುವ ಬಗ್ಗೆ ಮತ್ತೆ ಕರ್ನಾಟಕ ಅಥವಾ ದೇಶದ ಇತರ ಯಾವುದೇ ಭಾಗದಿಂದ ವರದಿಯಾಗಿಲ್ಲ ಎಂದು ಅದು ತಿಳಿಸಿದೆ.

- ರೋಗ ಪರೀಕ್ಷೆಗೆ ಕಳುಹಿಸಿದ ಮಾದರಿಗಳು ಪಾಸಿಟಿವ್ ಫಲಿತಾಂಶ ನೀಡಿವೆ ಎಂದು ಭೋಪಾಲ್ ಮೂಲದ ರಾಷ್ಟ್ರೀಯ ಇನ್‌ಸ್ಟಿಟ್ಯೂಟ್ ಆಫ್ ಹೈ ಸೆಕ್ಯೂರಿಟಿ ಅನಿಮಲ್ ಡಿಸೀಸಸ್ (ಎನ್‌ಐಎಚ್‌ಎಸ್‌ಎಡಿ ಖಚಿತಪಡಿಸಿದೆ ಎಂಬುದಾಗಿ ಕೇಂದ್ರ ಕೃಷಿ ಸಚಿವಾಲಯದ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### 'ಇನ್‌ಫ್ಲುಯೆಂಝಾ ಬಗ್ಗೆ

- ಇತ್ತೀಚಿನ ದಿನಗಳಲ್ಲಿ ನಮ್ಮ ದೇಶದಲ್ಲಿ ಹೆಚ್ಚು ಸದ್ದು ಮಾಡುತ್ತಿರುವ ರೋಗವೆಂದರೆ ಹಕ್ಕಿಜ್ವರ. 'ಇನ್‌ಫ್ಲುಯೆಂಝಾ' ಎಂಬ ವೈರಾಣುವಿನ ಸೋಂಕಿನಿಂದ ಹರಡುವ ಈ ಜ್ವರ ಸಾಮಾನ್ಯವಾಗಿ ಕೋಳಿ ಮತ್ತು ಹಕ್ಕಿಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.
- ಕೋಳಿ, ಬಾತುಕೋಳಿ, ಎಮು, ವಲಸೆ ಹಕ್ಕಿಗಳು ಮತ್ತು ಹಂದಿಯನ್ನು ಹೊರತು ಪಡಿಸಿ ಇತರ ಪ್ರಾಣಿಗಳಲ್ಲಿ ಈ ಖಾಯಿಲೆ ಕಂಡು ಬಂದ ನಿದರ್ಶನಗಳಿಲ್ಲ. ಹಕ್ಕಿಜ್ವರವನ್ನು ವೈಜ್ಞಾನಿಕವಾಗಿ ಆಂಗ್ಲಭಾಷೆಯಲ್ಲಿ 'ಏವಿಯನ್ ಇನ್‌ಫ್ಲುಯೆಂಝಾ' ಅಥವಾ 'ಬರ್ಡ್ಸ್ ಫ್ಲೂ' ಎಂದು ಕರೆಯುತ್ತಾರೆ.

- ಇನ್‌ಫ್ಲುಯೆಂಝಾ ವೈರಸ್‌ಗಳಲ್ಲಿ ಇನ್‌ಫ್ಲುಯೆಂಝಾ ಎ. ಬಿ. ಸಿ. ಎಂದು ಮೂರು ನಮೂನೆಗಳನ್ನು ಗುರುತಿಸಲಾಗಿದ್ದು, ಇವುಗಳಲ್ಲಿ ಮನುಷ್ಯರಲ್ಲಿ ಉಂಟಾಗುವ ಹೆಚ್ಚಿನ ಫ್ಲೂ ಪ್ರಕರಣಗಳಿಗೆ ಇನ್‌ಫ್ಲುಯೆಂಝಾ 'ಎ' ಕಾರಣವಾಗಿದೆ. ಇನ್‌ಫ್ಲುಯೆಂಝಾ 'ಎ' ಮತ್ತು 'ಬಿ' ವೈರಸ್‌ಗಳು ಮನುಷ್ಯರಲ್ಲಿ ಹೆಚ್ಚು ತೀವ್ರವಾದ ಮತ್ತು ವ್ಯಾಪಕವಾದ ಫ್ಲೂ ಸೋಂಕನ್ನು ಉಂಟುಮಾಡುತ್ತದೆ. ಇನ್‌ಫ್ಲುಯೆಂಝಾ 'ಸಿ' ವೈರಾಣುವಿನಿಂದ ಉಂಟಾಗುವ ಸೋಂಕು ಸೀಮಿತವಾದ ಪ್ರದೇಶಗಳಲ್ಲಷ್ಟೇ ಉಂಟಾಗುತ್ತವೆ ಮತ್ತು ಹೆಚ್ಚೇನು ತೊಂದರೆಯನ್ನು ಉಂಟು ಮಾಡುವುದಿಲ್ಲ.

### ರೋಗ ಲಕ್ಷಣಗಳು:

- ಹಕ್ಕಿಜ್ವರ ಅಥವಾ ಕೋಳಿಜ್ವರ ಬಹಳ ಬೇಗನೆ ಹರಡುತ್ತದೆ. ಒಂದು ಕೋಳಿಯಲ್ಲಿ ವೈರಾಣು ಕಾಣಿಸಿಕೊಂಡರೆ 48 ಗಂಟೆಗಳ ಒಳಗೆ, ಗುಂಪಿನ ಎಲ್ಲಾ ಕೋಳಿಗಳೂ ಸೋಂಕಿಗೆ ಬಲಿಯಾಗುತ್ತದೆ. ಸೋಂಕಿಗೆ ಒಳಗಾದ ಹಕ್ಕಿಗಳ ಮಲ, ಮೂತ್ರ, , ನೀರು, ಸಣ್ಣ ರೋಗಾಣುವಿನಿಂದ (H5N1) ಕೂಡಿರುತ್ತದೆ. ಹಕ್ಕಿಗಳು ವಾಸಿಸುವ ಸ್ಥಳ, ಅಲ್ಲಿನ ಗಾಳಿ ಸೇರಿದಂತೆ ಎಲ್ಲದರಲ್ಲೂ ವೈರಾಣು ಕೂಡಿರುತ್ತದೆ. ಈ ವೈರಾಣು ಮಾನವ ದೇಹಕ್ಕೆ ಗಾಳಿಯ ಮೂಲಕ ಸೇರಿದರೆ ಅಪಾಯ ತಪ್ಪಿದಲ್ಲ.

- ಆದರೆ ಈ ರೋಗ ಮನುಷ್ಯನಿಂದ ಮನುಷ್ಯನಿಗೆ ಹರಡುವುದಿಲ್ಲ. ಆದಾಗ್ಯೂ ಹಕ್ಕಿಗಳ ಸಂಪರ್ಕಕ್ಕೆ ಹೋದಾಗ ಅತೀ ಎಚ್ಚರಿಕೆ ಅಗತ್ಯ. ಹಕ್ಕಿಜ್ವರದ ಸೋಂಕಿಗೆ ಒಳಗಾದ ವ್ಯಕ್ತಿಗಳಲ್ಲಿ 2-3 ದಿನಗಳಲ್ಲಿ ರೋಗ ಉಲ್ಬಣಗೊಳ್ಳುವ ಸಾಧ್ಯತೆ ಇದೆ. ಅತಿಯಾದ ಜ್ವರ, ನೆಗಡಿ, ಕೆಮ್ಮು, ಶೀತ, ತಲೆನೋವು, ಗಂಟಲು ಕೆರೆತ, ಸ್ನಾಯು ಸೆಳೆತ, ಉಸಿರಾಟದ ತೊಂದರೆ ರೋಗದ ಲಕ್ಷಣಗಳಾಗಿರುತ್ತದೆ. ಕೆಲವೊಮ್ಮೆ ಸತತ ವಾಂತಿ, ಭೇದಿ ಮತ್ತು ವಿಪರೀತ ಸುಸ್ತು ಇರಬಹುದು, ವಿಪರೀತ ತಲೆನೋವು, ಯಾವುದರಲ್ಲೂ ನಿರಾಸಕ್ತಿ ಮತ್ತು ಸ್ನಾಯು ಸೆಳೆತವೂ ಇರಬಹುದು.

## 32. ಪ್ರವಾಸಿ ಭಾರತೀಯ ದಿವಸ್

### ಪ್ರಮುಖ ಸುದ್ದಿ

- ಪ್ರಾಚೀನ ಮಾರ್ಗ, ಹೊಸ ಜರ್ನಿ: ಡೈನಮಿಕ್ ಏಷಿಯನ್ ಇಂಡಿಯಾ ಪಾಲುದಾರಿಕೆಯಲ್ಲಿ ವಲಸಿಗರು(Ancient Route, New Journey: Diaspora in the Dynamic Asean-India Partnership) ಎಂಬ ಧ್ಯೇಯದೊಂದಿಗೆ 2018ರ ಪ್ರಾದೇಶಿಕ ಪ್ರವಾಸಿ ಭಾರತದ ದಿವಸವನ್ನು ಸಿಂಗಾಪೂರದ ಮರಿನಾ ಬೇ ಸ್ಯಾಂಡ್ಸ್‌ನಲ್ಲಿ ಆಚರಿಸಲಾಗಿದೆ.

### ಪ್ರವಾಸಿ ಭಾರತೀಯ ದಿವಸ್ ಬಗ್ಗೆ

- ಭಾರತದ ಅಭಿವೃದ್ಧಿಯಲ್ಲಿ ಸಾಗರೋತ್ತರ ಭಾರತೀಯ ಸಮುದಾಯದ (ಎನ್‌ಐಆರ್)ಕೊಡುಗೆಗಳನ್ನು ಗುರುತಿಸಲು ಹಾಗೂ ಗೌರವ ಸಲ್ಲಿಸುವ ಉದ್ದೇಶದಿಂದ ಪ್ರತಿ ವರ್ಷ ಜನವರಿ 9 ರಂದು ಪ್ರವಾಸಿ ಭಾರತೀಯ ದಿವಸ್ ಆಚರಿಸಲಾಗುತ್ತಿದೆ.
- ಈ ಆಚರಣೆ ವಿದೇಶಿ ಭಾರತೀಯ ಸಮುದಾಯಕ್ಕೆ ಭಾರತದಲ್ಲಿ ಸರ್ಕಾರಿ ಮತ್ತು ಭಾರತೀಯ ಸಮುದಾಯಗಳೊಂದಿಗೆ ಪರಸ್ಪರ ಲಾಭದಾಯಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ವೇದಿಕೆಯನ್ನು ಒದಗಿಸುತ್ತವೆ.
- 1915ರ ಜನವರಿ 9 ರಂದು ಮಹಾತ್ಮಾ ಗಾಂಧಿಯವರು ದಕ್ಷಿಣಾ ಆಫ್ರಿಕಾದಿಂದ ಮುಂಬೈಗೆ ಹಿಂದಿರುಗಿದ್ದರು. ಇದರ ಸವಿ ನೆನಪಿಗಾಗಿಯೂ ಈ ದಿನವನ್ನು ಸೆಲಬ್ರೇಟ್ ಮಾಡಲಾಗುತ್ತದೆ. ಈ ದಿನವನ್ನು ಎನ್‌ಐಆರ್ ದಿನವೆಂತಲೂ ಕರೆಯುತ್ತಾರೆ.
- 2003ರಲ್ಲಿ ಸ್ಥಾಪನೆಯಾದ ಈ ದಿನಾಚರಣೆ ಭಾರತ ಸರ್ಕಾರದ ವಿದೇಶ ವ್ಯವಹಾರಗಳ ಸಚಿವಾಲಯ ಮತ್ತು ಭಾರತೀಯ ವಾಣಿಜ್ಯ ಮಂಡಳಿಯ ಒಕ್ಕೂಟ, ಇಂಡಿಯನ್ ಇಂಡಸ್ಟ್ರೀಸ್ ಒಕ್ಕೂಟ ಮತ್ತು ಈಶಾನ್ಯ ಪ್ರದೇಶದ ಅಭಿವೃದ್ಧಿ ಸಚಿವಾಲಯದಿಂದ ಪ್ರಾಯೋಜಿಸಲ್ಪಟ್ಟಿದೆ. ಪ್ರತಿ ವರ್ಷ ಒಂದು ಧ್ಯೇಯದೊಂದಿಗೆ ಪಿಬಿಡಿ ಆಚರಿಸಲಾಗುತ್ತದೆ. ಭಾರತದ ರಾಷ್ಟ್ರಪತಿಯವರು

ವಿದೇಶದಲ್ಲಿ ಸಾಧನೆ ಮಾಡಿದ ಎನ್‌ಆರ್‌ಐಗಳಿಗೆ ಪ್ರತಿಷ್ಠಿತ ಪ್ರವಾಸಿ ಭಾರತೀಯ ಸಮ್ಮಾನ್ ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಾರೆ.

- ಈ ವರ್ಷದ ಆಚರಣೆ ಶತಮಾನಗಳ-ಹಳೆಯ ಸಾಂಸ್ಕೃತಿಕ, ಧಾರ್ಮಿಕ ಮತ್ತು ಮಾನವ ಸಂಬಂಧಗಳ ಆಧಾರದ ಮೇಲೆ 25 ವರ್ಷಗಳ - ಭಾರತೀಯ ಸಹಭಾಗಿತ್ವವನ್ನು ಗುರುತಿಸುವುದಾಗಿದೆ.

- ಆಗ್ನೇಯ ಏಷ್ಯಾದ ವೈವಿಧ್ಯತೆ ಮತ್ತು ಭಾರತ ಮತ್ತು ಏಷಿಯಾನ್ ನಡುವಿನ ಬಲವಾದ ಸೇತುವೆಗೆ ಭಾರತೀಯ ವಲಸೆಗಾರರು ಒಂದು ಪ್ರಮುಖ ಭಾಗವಾಗಿದ್ದಾರೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 33. ಭಾರತ ಮತ್ತು ಬೆಲ್ಜಿಯಂ ನಡುವಿನ ತಿಳಿವಳಿಕೆ ಒಪ್ಪಂದಕ್ಕೆ ಸಂಪುಟದ ಸಮ್ಮತಿ

### ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಗೆ, ಭಾರತ ಮತ್ತು ಬೆಲ್ಜಿಯಂ ನಡುವೆ ಮಾಹಿತಿ ಸಂವಹನ ತಂತ್ರಜ್ಞಾನ ಮತ್ತು ಎಲೆಕ್ಟ್ರಾನಿಕ್ಸ್ (ಐಸಿಟಿ ಮತ್ತು ಇ) ಕ್ಷೇತ್ರದ ಸಹಕಾರ ಕುರಿತ ತಿಳಿವಳಿಕೆ ಒಪ್ಪಂದ (ಎಂ.ಓ.ಯು.)ದ ಬಗ್ಗೆ ವಿವರ ನೀಡಲಾಯಿತು. ಈ ತಿಳಿವಳಿಕೆ ಒಪ್ಪಂದಕ್ಕೆ ಬೆಲ್ಜಿಯಂನ ದೊರೆ ಫಿಲಿಪ್ಪೆ ಅವರ ಭಾರತದ ಅಧಿಕೃತ ಭೇಟಿಯ ವೇಳೆ 2017ರ ನವೆಂಬರ್ 7ರಂದು ಅಂಕಿತ ಹಾಕಲಾಗಿತ್ತು.

### ಮುಖ್ಯ ಅಂಶಗಳು

- ಈ ತಿಳಿವಳಿಕೆ ಒಪ್ಪಂದವು ಐಸಿಟಿ ಮತ್ತು ಇ ನೀತಿ; ಡಿಜಿಟಲ್ ಕಾರ್ಯಕ್ರಮ ತಂತ್ರಜ್ಞಾನ ಮತ್ತು ಐಸಿಟಿ ಮತ್ತು ಇ ಉತ್ಪಾದನೆ ಹಾಗೂ ಸೇವೆಯ ಅಭಿವೃದ್ಧಿಯ ಮೇಲೆ ವಿಶೇಷ ಒತ್ತು ನೀಡಿದ ಸಂಶೋಧನೆ; ಇ ಆಡಳಿತ ಮತ್ತು ಇ ಸಾರ್ವಜನಿಕ ಸೇವೆ ಒದಗಿಸುವುದು, ಸಮಾವೇಶಗಳಲ್ಲಿ

ಪಾಲ್ಗೊಳ್ಳುವುದು, ಅಧ್ಯಯನ ಪ್ರವಾಸ, ತಜ್ಞರ ವಿನಿಮಯ, ಸೈಬರ್ ಭದ್ರತೆ ಕ್ಷೇತ್ರದ ಉತ್ತಮ ಪದ್ಧತಿಗಳ ವಿನಿಮಯ ಮತ್ತು ದತ್ತಾಂಶ ಸಮರ್ಪಣೆ, ಮಾರುಕಟ್ಟೆ ಪ್ರವೇಶ, ವ್ಯಾಪಾರ ಮತ್ತು ಸೇವೆಗಳ ಸಮಸ್ಯೆಗಳನ್ನು ಬಗೆಹರಿಸುವುದೂ ಸೇರಿದಂತೆ ಭಾರತ ಮತ್ತು ಬೆಲ್ಜಿಯಂ ನಡುವೆ ಸಹಕಾರವನ್ನು ಬಯಸುತ್ತದೆ.

ಹಿನ್ನೆಲೆ:

- ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಐಸಿಟಿ ಸಹಕಾರ ಉತ್ತೇಜಿಸಲು ಹಲವು ರಾಷ್ಟ್ರಗಳೊಂದಿಗೆ ಒಗ್ಗೂಡಿ ಕೆಲಸ ಮಾಡುತ್ತಿದೆ. ಪ್ರಸಕ್ತ ಜ್ಞಾನ ಯುಗದಲ್ಲಿ ಐಸಿಟಿ ದೇಶದ ಆರ್ಥಿಕ ಪ್ರಗತಿಯಲ್ಲಿ ಮತ್ತು ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಆಯಾಮಗಳಲ್ಲಿ ಮಹತ್ವದ ಪಾತ್ರ ವಹಿಸುವ ಸಾಮರ್ಥ್ಯ ಹೊಂದಿದೆ. ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಐಸಿಟಿ ಕ್ಷೇತ್ರದಲ್ಲಿ ಮಾಹಿತಿಯ ವಿನಿಮಯ ಮತ್ತು ಆಪ್ತ ಸಹಕಾರದ ಉತ್ತೇಜನಕ್ಕಾಗಿ ವಿವಿಧ ದೇಶಗಳ ತನ್ನ ಸಹವರ್ತಿ ಸಂಘಟನೆಗಳು/ಸಂಸ್ಥೆಗಳೊಂದಿಗೆ ತಿಳಿವಳಿಕೆ ಒಪ್ಪಂದ/ಒಪ್ಪಂದಗಳನ್ನು ಮಾಡಿಕೊಂಡಿದೆ. ವಿವಿಧ ರಾಷ್ಟ್ರಗಳೊಂದಿಗೆ ಸಹಕಾರವನ್ನು ಮತ್ತಷ್ಟು ಹೆಚ್ಚಿಸಲು ಅದರಲ್ಲೂ ಭಾರತ ಸರ್ಕಾರದ ಹೊಸ ಉಪಕ್ರಮಗಳಾದ ಮೇಕ್ ಇನ್ ಇಂಡಿಯಾ, ಡಿಜಿಟಲ್ ಇಂಡಿಯಾ ಇತ್ಯಾದಿಗಳ ಹಿನ್ನೆಲೆಯಲ್ಲಿ ತಂತ್ರಜ್ಞಾನ ವಲಯದಲ್ಲಿ ವಾಣಿಜ್ಯಾವಕಾಶಗಳನ್ನು ಬಳಸಿಕೊಳ್ಳುವ ಮತ್ತು ಹೂಡಿಕೆ ಆಕರ್ಷಿಸುವ ಅಗತ್ಯ ಹೆಚ್ಚಾಗಿದೆ.

- ಭಾರತ ಮತ್ತು ಬೆಲ್ಜಿಯಂ ಎರಡೂ ಆಪ್ತ ಮತ್ತು ಸ್ನೇಹಪರ ಬಾಂಧವ್ಯ ಹೊಂದಿವೆ. ಬೆಲ್ಜಿಯಂ ಐರೋಪ್ಯ ಒಕ್ಕೂಟದೊಂದಿಗೆ ಭಾರತದ ಎರಡನೇ ಅತಿ ದೊಡ್ಡ ವಾಣಿಜ್ಯಪಾಲುದಾರ ರಾಷ್ಟ್ರವಾಗಿದೆ. ಬೆಲ್ಜಿಯಂ ಸಂಪರ್ಕ ತಂತ್ರಜ್ಞಾನ ವಲಯದಲ್ಲಿ ಅದರಲ್ಲೂ ಇ ಆಡಳಿತ ಮತ್ತು ವಿದ್ಯುನ್ಮಾನ ಐಡಿ ಕಾರ್ಡ್ ಮತ್ತು ತೆರಿಗೆಯ ಅಂತರ್ಜಾಲ ಇತ್ಯಾದಿಯಲ್ಲಿ ತಜ್ಞತೆಯನ್ನು ಹೊಂದಿದೆ.

- 2016ರ ಮಾರ್ಚ್ ನಲ್ಲಿ ಪ್ರಧಾನಿಯವರು ಇಯು ಶೃಂಗದಲ್ಲಿ ಪಾಲ್ಗೊಳ್ಳಲು ಮತ್ತು ಬೆಲ್ಜಿಯಂನೊಂದಿಗೆ ದ್ವಿಪಕ್ಷೀಯ ಮಾತುಕತೆಗಾಗಿ ಬ್ರುಸೆಲ್ಸ್ ಗೆ ಭೇಟಿ ನೀಡಿದ ಸಂದರ್ಭದಲ್ಲಿ ಐಟಿ ಮತ್ತು ವಿದ್ಯುನ್ಮಾನ ವಲಯದಲ್ಲಿ ಭಾರತ ಮತ್ತು ಬೆಲ್ಜಿಯಂ ನಡುವೆ ತಿಳಿವಳಿಕೆ ಒಪ್ಪಂದಕ್ಕೆ ಅಂಕಿತ ಹಾಕಲು ಉದ್ದೇಶಿಸಲಾಗಿತ್ತು. ತರುವಾಯ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು (ದೆಹಲಿಯಲ್ಲಿ 2017ರ ಫೆಬ್ರವರಿ 7ರಂದು) ಬೆಲ್ಜಿಯಂನ ಉಪ ಪ್ರಧಾನಿ ಮತ್ತು ಅಭಿವೃದ್ಧಿ ಸಹಕಾರ, ಡಿಜಿಟಲ್ ಕಾರ್ಯಕ್ರಮ, ಟೆಲಿಕಾಂ ಮತ್ತು ಅಂಚೆ ಸೇವೆಗಳ ಸಚಿವ ಘನತೆವೆತ್ತ ಶ್ರೀ ಅಲೆಕ್ಸಾಂಡರ್ ಡಿ ಕ್ರೂ, ನೇತೃತ್ವದ ನಿಯೋಗದೊಂದಿಗೆ ಪರಸ್ಪರ ಹಿತಾಸಕ್ತಿಯ ಕ್ಷೇತ್ರಗಳ ಬಗ್ಗೆ ಮಾತುಕತೆ ನಡೆಸಿದ್ದರು. ಈ ಸಭೆಯ ವೇಳೆ, ಎರಡೂ ಕಡೆಯವರು ಡಿಜಿಟಲ್ ಇಂಡಿಯಾ ಮತ್ತು ಡಿಜಿಟಲ್ ಬೆಲ್ಜಿಯಂ ಮೇಲೆ ಜನರ ಡಿಜಿಟಲ್ ಸಬಲೀಕರಣಕ್ಕೆ ಒಗ್ಗೂಡಿ ಶ್ರಮಿಸುವ ಬದ್ಧತೆಯನ್ನು ಪುನರುಚ್ಚರಿಸಿದ್ದರು.

IAS/KAS

## 34. ಅರ್ಜೆಂಟೀನಾದ ಬ್ಯೂನಸ್ ಐರಿಸ್ ನಲ್ಲಿ ನಡೆದ ಡಬ್ಲ್ಯು.ಟಿ.ಓ.ದ ಹನ್ನೊಂದನೆಯ ಸಚಿವ ಮಟ್ಟದ ಸಮಾವೇಶದಲ್ಲಿ ಭಾರತವು ಅಳವಡಿಸಿಕೊಳ್ಳಬೇಕಾದ ನಿಲುವಿಗೆ ಸಂಪುಟದ ಅನುಮೋದನೆ

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆ ವಾಣಿಜ್ಯ ಇಲಾಖೆ ಸಲ್ಲಿಸಿದ್ದ ಟಿಪ್ಪಣಿಗೆ ಪೂರ್ವಾನ್ವಯ ಅನುಮೋದನೆ ನೀಡಿ, ಭಾರತವು 2017ರ ಡಿಸೆಂಬರ್ ನಲ್ಲಿ ಅರ್ಜೆಂಟೀನಾದ ಬ್ಯೂನಸ್ ಐರಿಸ್ ನಲ್ಲಿ ನಡೆದ ಡಬ್ಲ್ಯುಟಿಓ 11ನೇ ಸಚಿವರ ಮಟ್ಟದ ಸಮಾವೇಶದಲ್ಲಿ ಭಾರತ ಅಳವಡಿಸಿಕೊಳ್ಳಬೇಕಾದ ನಿಲುವಿಗೆ ಅನುಮೋದನೆ ನೀಡಿತು.
- ಸಚಿವರ ಸಮ್ಮೇಳನದಲ್ಲಿ ಭಾರತದ ಆಸಕ್ತಿಗಳು, ಆದ್ಯತೆಗಳು ಮತ್ತು ಕಾಳಜಿಯನ್ನು ಕಾಪಾಡುವ ಉದ್ದೇಶದಿಂದ ನಿಲುವು ಅಳವಡಿಕೆಯ ಆದೇಶದ ವಿಧಾನವನ್ನು ಅನುಸರಿಸಲಾಯಿತು.

### ಹಿನ್ನೆಲೆ

- ಈ ಸಮಾವೇಶದ ವೇಳೆ, ಬಾಲಿ/ನೈರೋಬಿ ಆದೇಶದ ರೀತ್ಯ ಆಹಾರ ಭದ್ರತೆ ಉದ್ದೇಶಕ್ಕಾಗಿ ಸಾರ್ವಜನಿಕ ಹಿಡುವಳಿ ವಿಷಯ ಮತ್ತು ಇತರ ಕೃಷಿ ವಿಷಯಗಳಿಗೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳುವ ನಿರೀಕ್ಷೆ ಇತ್ತು. ಕೆಲವು ಡಬ್ಲ್ಯುಟಿಓ ಸದಸ್ಯ ರಾಷ್ಟ್ರಗಳು ಸೇವೆಯಲ್ಲಿ ದೇಶೀಯ ನಿಯಂತ್ರಣ, ಮೀನುಗಾರಿಕೆ ಸಬ್ಸಿಡಿಗಳು, ಇ-ವಾಣಿಜ್ಯ, ಹೂಡಿಕೆ ಸೌಲಭ್ಯ ಮತ್ತು ಸೂಕ್ಷ್ಮ, ಮಧ್ಯಮ ಮತ್ತು ಸಣ್ಣ ಉದ್ಯಮಗಳು (ಎಮ್ಎಸ್ಎಮ್ಇಗಳು) ವಿಷಯಗಳ ಮೇಲಿನ ಫಲಶ್ರುತಿಯನ್ನು ಬಯಸಿದವು.

- ಆದಾಗ್ಯೂ, ಅಂತಿಮವಾಗಿ, ಒಮ್ಮತದ ಕೊರತೆಯಿಂದಾಗಿ ಆಹಾರ ಭದ್ರತೆ ಅಥವಾ ಇತರ ಕೃಷಿ ವಿಷಯಗಳ ಉದ್ದೇಶಕ್ಕಾಗಿ ಸಾರ್ವಜನಿಕ ಹಿಡುವಳಿಯಲ್ಲಿ ಯಾವುದೇ ಫಲಶ್ರುತಿ ಬರಲಿಲ್ಲ.

- ನವೆಂಬರ್ 2014 ರ ಸಾಮಾನ್ಯ ಮಂಡಳಿ ನಿರ್ಧಾರದೊಂದಿಗೆ ಬಾಲಿ ಸಚಿವ ಮಟ್ಟದ ಸಭೆಯ ನಿರ್ಧಾರವು 2015ರ ಡಬ್ಲ್ಯುಟಿಓದ 10 ನೇ ಸಚಿವ ಮಟ್ಟದ ಸಮಾವೇಶದಲ್ಲಿ ಡಬ್ಲ್ಯುಟಿಓ ಶಾಶ್ವತ ಪರಿಹಾರವನ್ನು ಒಪ್ಪಿ ಅಂಗೀಕರಿಸುವವರೆಗೆ, ಆಹಾರ ಭದ್ರತಾ ಉದ್ದೇಶಗಳಿಗಾಗಿ ಸಾರ್ವಜನಿಕ ಹಿಡುವಳಿಗಾಗಿ ಲಭ್ಯವಿರುವ ಮಧ್ಯಂತರ ಕಾರ್ಯವಿಧಾನದ ಮೂಲಕ ಭಾರತವನ್ನು ರಕ್ಷಿಸುವುದನ್ನು ಪುನಃ ದೃಢೀಕರಿಸಲ್ಪಟ್ಟಿದೆ.

- ಹೀಗಾಗಿ, ಕನಿಷ್ಠ ಬೆಂಬಲ ಬೆಲೆಯಲ್ಲಿ ಭಾರತದ ಆಹಾರಧಾನ್ಯ ದಾಸ್ತಾನು ಕಾರ್ಯಕ್ರಮ ಸಂರಕ್ಷಿತವಾಗಿದೆ. 2019ರ 12ನೇ ಡಬ್ಲ್ಯುಟಿಓ ಸಚಿವರ ಮಟ್ಟದ ಸಮಾವೇಶದಲ್ಲಿ ಒಡ ಮೂಡಬಹುದಾದ ನಿರ್ಧಾರಗಳನ್ನು ಗಮನದಲ್ಲಿಟ್ಟುಕೊಂಡು ಸಮಾವೇಶದ ವೇಳೆ ಕೈಗೊಳ್ಳಲಾದ ಸಚಿವರ ಮಟ್ಟದ ನಿರ್ಧಾರಗಳು ಮೀನುಗಾರಿಕೆ ಸಬ್ಸಿಡಿ ಮೇಲಿನ ವಿಭಾಗಗಳ ಕಾರ್ಯ ಕಾರ್ಯಕ್ರಮಗಳನ್ನು ಒಳಗೊಂಡಿದೆ.

- ಭಾರತ ಪ್ರಸ್ತಾಪಿಸುವಂತೆ ಇ – ವಾಣಿಜ್ಯ ಕುರಿತ ಹಾಲಿ ಕಾರ್ಯಕ್ರಮಗಳ ಮಾತುಕತೆ ರಹಿತ ಆದೇಶಗಳ ಮುಂದುವರಿಕೆಗೂ ನಿರ್ಧರಿಸಲಾಗಿದೆ. ಹಿಂದಿನ ಸಚಿವರ ಮಟ್ಟದ ಸಮ್ಮೇಳನಗಳಲ್ಲಿ

ಮಾಡಿದಂತೆ, ಎಲೆಕ್ಟ್ರಾನಿಕ್ ಪ್ರಸರಣದ ಮೇಲೆ ಸೀಮಾ ಸುಂಕ ವಿಧಿಸುವ ಹಾಲಿ ನಿಷೇಧವನ್ನು ಎರಡು ವರ್ಷಗಳ ಕಾಲ ವಿಸ್ತರಿಸಲು ತೀರ್ಮಾನಿಸಲಾಗಿದೆ. ಟಿ.ಆರ್.ಐ.ಪಿ.ಎಸ್. ಕುರಿತ ಮತ್ತೊಂದು ನಿಷೇಧ ಉಲ್ಲಂಘನೆ ಮಾಡದ ಕಂಪನಿಗಳನ್ನು ಉಳಿಸಿಕೊಳ್ಳಲಾಗಿದ್ದು, ಇದು ಔಷಧೀಯ ವಲಯದಲ್ಲಿ 'ಎವರ್-ಗ್ರೀನಿಂಗ್' ಪೇಟೆಂಟ್ ಗಳನ್ನು ತಡೆಯುತ್ತದೆ, ಆ ಮೂಲಕ ಜೆನೆರಿಕ್ ಔಷಧಿಗಳ ಲಭ್ಯತೆಯನ್ನು ಖಾತರಿಪಡಿಸುತ್ತದೆ.

- ಹೊಸ ವಿಷಯಗಳಾದ ಹೂಡಿಕೆ ಅವಕಾಶಗಳು, ಎಂ.ಎಸ್.ಎಂ.ಇ.ಗಳು, ಲಿಂಗ ಮತ್ತು ವಾಣಿಜ್ಯಗಳ ಕುರಿತ ನಿರ್ಧಾರಗಳನ್ನು ಒಮ್ಮತ ಅಥವಾ ಅಭಿಪ್ರಾಯದ ಕೊರತೆಯಿಂದ ಸಚಿವರುಗಳ ಮಟ್ಟದ ಸಭೆಯು ಮುಂದೂಡಿತು.

- ಸದಸ್ಯರಲ್ಲಿ ವ್ಯಾಪಕ ಭಿನ್ನಾಭಿಪ್ರಾಯಗಳು ಇದ್ದ ಹಿನ್ನೆಲೆಯಲ್ಲಿ ಹಾಗೂ ಕೆಲವು ಸದಸ್ಯರು ಡಬ್ಲ್ಯೂಟಿಒ ಮತ್ತು ವಿವಿಧ ಒಪ್ಪಿಗೆ ಆದೇಶಗಳನ್ನು ಮಾರ್ಗದರ್ಶಿಗೆ ಪ್ರಮುಖ ಆಧಾರವಾಗಿರುವ ತತ್ವಗಳ ಅಂಗೀಕಾರ ಮತ್ತು ಪುನರುಚ್ಚರಣೆಯನ್ನು ಬೆಂಬಲಿಸದ ಕಾರಣ, ಸಚಿವರುಗಳಿಗೆ ಒಮ್ಮತದ ನಿರ್ಣಯಕ್ಕೆ ಬರಲು ಸಾಧ್ಯವಾಗಲಿಲ್ಲ. ಕೈಬಿಡಲಾಗಿದೆ ಅಥವಾ ಬಹುಪಕ್ಷೀಯತೆಯ, ದೋಹಾ ಅಭಿವೃದ್ಧಿ ಕಾರ್ಯಕ್ರಮ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ವಿಶೇಷ ಮತ್ತು ವಿಭಿನ್ನವಾದ ಪ್ರಮುಖ ಸಮಸ್ಯೆಗಳನ್ನು ಸಮರ್ಪಕವಾಗಿ ಸೇರಿಸಿಕೊಳ್ಳಲು ವಿಫಲವಾಗಿದೆ ಎಂಬ ಹಿನ್ನೆಲೆಯಲ್ಲಿ ಭಾರತವು ಸಚಿವರ ಮಟ್ಟದ ಸಭೆಯ ನಿರ್ಣಯದ ಕರಡಿಗೆ ಬೆಂಬಲ ವ್ಯಕ್ತಪಡಿಸಿಲ್ಲ.

- ಆದಾಗ್ಯೂ, ಬಹುಪಕ್ಷೀಯ ವಾಣಿಜ್ಯ ವ್ಯವಸ್ಥೆಗೆ ಮತ್ತು ಡಬ್ಲ್ಯುಟಿಒದ ವಿವಿಧ ಕಾರ್ಯ ಕ್ಷೇತ್ರಗಳ ನಿಲುವನ್ನು ಮುಂದೆ ತೆಗೆದುಕೊಂಡು ಹೋಗುವ ಬದ್ಧತೆಗೆ ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ಸಚಿವರುಗಳ ಮಟ್ಟದ ಸಭೆಯ ನಿರ್ಣಯದ ಅನುಪಸ್ಥಿತಿಯಲ್ಲೂ ಉಲ್ಲೇಖಾರ್ಹವಾದುದೆಂದರೆ, ಹಾಲಿ ಇರುವ ಆದೇಶಗಳು ಮತ್ತು ನಿರ್ಣಯಗಳು ಕೆಲಸ ಮುಂದುವರಿದುಕೊಂಡು ಹೋಗುವ ಖಾತ್ರಿ ಒದಗಿಸುತ್ತವೆ ಮತ್ತು ಸದಸ್ಯರು ಕೃಷಿ ಸಬ್ಸಿಡಿ ಮತ್ತು ಇತರ ವಿಚಾರಗಳಿಗೆ ಸಂಬಂಧಿಸಿದ

ಆಹಾರ ಭದ್ರತೆಯ ಉದ್ದೇಶಕ್ಕಾಗಿ ಸಾರ್ವಜನಿಕ ಹಿಡುವಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಶ್ರಮಿಸಲು ಅವಕಾಶ ಒದಗಿಸುತ್ತದೆ.

## 35. ಭಾರತ್ ನೆಟ್

### ಪ್ರಮುಖ ಸುದ್ದಿ

- ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಭಾರತ್‌ನೆಟ್ ಯೋಜನೆಯ ಮೊದಲ ಹಂತ ಪೂರ್ಣಗೊಂಡಿದೆ ಎಂದು ಸರ್ಕಾರ ಪ್ರಕಟಿಸಿದೆ. ಇದರ ಅನ್ವಯ ಒಂದು ಲಕ್ಷ ಗ್ರಾಮಪಂಚಾಯ್ತಿಗಳ ಸಂಪರ್ಕ ಜಾಲ ರೂಪಿಸಲು ಆಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ಯಶಸ್ವಿಯಾಗಿ ಅಳವಡಿಸಲಾಗಿದೆ.

### ಮುಖ್ಯ ಅಂಶಗಳು

ನಮ್ಮ ಐಎಎಸ್ ಅಕಾಡೆಮಿ

- 2017ರ ಡಿಸೆಂಬರ್‌ಗೆ ಒಟ್ಟು 2,54,895 ಕಿಲೋಮೀಟರ್ ಉದ್ದದ ಒಎಫ್‌ಸಿ ಕೇಬಲ್‌ಗಳನ್ನು ಅಳವಡಿಸಲಾಗಿದ್ದು, ದೇಶದ 1,09,926 ಪಂಚಾಯ್ತಿಗಳನ್ನು ಇದು ಸಂಪಕಿಸುತ್ತದೆ. ಈ ಪೈಕಿ 1,01,370 ಪಂಚಾಯ್ತಿಗಳು ಈಗಾಗಲೇ ನೂತನ ಜಾಲದ ಅನ್ವಯ ಕಾರ್ಯ ನಿರ್ವಹಿಸಲು ಆರಂಭಿಸಿವೆ.

- ಎರಡನೇ ಹಂತದ ಯೋಜನೆಯನ್ನು 2017ರ ನವೆಂಬರ್ ನಲ್ಲಿ ಆರಂಭಿಸಲಾಗಿದೆ. ಇದು ಉಳಿದ 1.5 ಲಕ್ಷ ಗ್ರಾಮಪಂಚಾಯ್ತಿಗಳನ್ನು ಜೋಡಿಸಲಿದೆ. ಕೇಂದ್ರ ಸರ್ಕಾರ ಈ ಎರಡನೇ ಹಂತದ ಯೋಜನೆಯನ್ನು 2019ರ ಮಾರ್ಚ್ ತಿಂಗಳ ಒಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಿತ್ತು. ಆದರೆ ಇದೀಗ 2018ರ ಡಿಸೆಂಬರ್ ಒಳಗಾಗಿ ಯೋಜನೆ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ.

ಭಾರತ್‌ನೆಟ್ ಯೋಜನೆ ಬಗ್ಗೆ

- ಭಾರತ್‌ನೆಟ್ ಯೋಜನೆಯು ಡಿಜಿಟಲ್ ಇಂಡಿಯಾ ವಿನೂತನ ಕಾರ್ಯಕ್ರಮದ ಬೆನ್ನೆಲುಬಾಗಿದೆ. ಇದರ ಮುಖ್ಯವಾದ ಉದ್ದೇಶವೆಂದರೆ, 2.5 ಲಕ್ಷ ಗ್ರಾಮಪಂಚಾಯ್ತಿಗಳಿಗೆ ಆಪ್ಟಿಕಲ್ ಫೈಬರ್ ಮೂಲಕ ಬ್ರಾಡ್‌ಬ್ಯಾಂಡ್ ಸಂಪರ್ಕವನ್ನು ಕಲ್ಪಿಸಿಕೊಡುವುದು. ಈ ರಾಷ್ಟ್ರೀಯ ಆಪ್ಟಿಕಲ್ ಫೈಬರ್ ನೆಟ್‌ವರ್ಕ್ ಯೋಜನೆಗೆ ಕೇಂದರ್ ಸರ್ಕಾರ 2011ರಲ್ಲಿ ಅನುಮೋದನೆ ನೀಡಿತ್ತು.

- ಈ ಮಹತ್ವಾಕಾಂಕ್ಷಿ ಯೋಜನೆಯ ಮುಖ್ಯ ಉದ್ದೇಶವೆಂದರೆ ಕೈಗೆಟುಕುವ ದರದಲ್ಲಿ ಬ್ರಾಡ್‌ಬ್ಯಾಂಡ್ ಸೇವೆಯನ್ನು ಎಲ್ಲ ಗ್ರಾಮೀಣ ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ ನೀಡುವುದು. ಇದಕ್ಕಾಗಿ ಸರ್ಕಾರಿ ಹಾಗೂ ಖಾಸಗಿ ಸಹಭಾಗಿತ್ವವನ್ನು ಪಡೆಯುವುದು. ಇದನ್ನು ಭಾರತ್ ಬ್ರಾಡ್‌ಬ್ಯಾಂಡ್ ನೆಟ್‌ವರ್ಕ್ ಲಿಮಿಟೆಡ್ ಅನುಷ್ಠಾನಗೊಳಿಸುತ್ತಿದೆ. ಇದು ವಿಶ್ವದ ಅತಿದೊಡ್ಡ ಫೈಬರ್ ಬಳಸಿಕೊಂಡು ಗ್ರಾಮೀಣ ಬ್ರಾಡ್‌ಬ್ಯಾಂಡ್ ಸಂಪರ್ಕ ಒದಿಸುವ ಯೋಜನೆಯಾಗಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಈ ಯೋಜನೆ ಪೂರ್ಣಗೊಂಡ ಬಳಿಕ, ಗ್ರಾಮೀಣರಿಗೆ ಹಾಗೂ ಬಡವರಿಗೆ ಪ್ರಮುಖ ಸೇವೆಗಳಾದ ಆರೋಗ್ಯ, ಶಿಕ್ಷಣ, ಜೀವನಾಧಾರ, ಕೌಶಲ, ಇ-ಕೃಷಿ ಮತ್ತು ವಾಣಿಜ್ಯ ಕೃಷಿಯಂಥ ಸೌಲಭ್ಯಗಳನ್ನು ಡಿಜಿಟಲ್ ರೂಪದಲ್ಲಿ ಒದಗಿಸುವುದು ಸಾಧ್ಯವಾಗಲಿದೆ. ಎಲ್ಲಕ್ಕಿಂತ ಹೆಚ್ಚಾಗಿ ಇದು ದೊಡ್ಡ ಪ್ರಮಾಣದ ಉದ್ಯೋಗಾವಕಾಶವನ್ನು ನೇರ ಹಾಗೂ ಪರೋಕ್ಷ ರೂಪದಲ್ಲಿ ದೇಶದಲ್ಲಿ ಸೃಷ್ಟಿಸಲು ಕಾರಣವಾಘಲಿದೆ. ಇದು ಡಿಜಿಟಲ್ ಮೂಲಸೌಕರ್ಯವನ್ನು ಕೂಡಾ ಒದಗಿಸಿಕೊಡಲಿದೆ.

- ಭಾರತ್‌ನೆಟ್ ಯೋಜನೆಯಡಿ ದೇಶದ ಎಲ್ಲ ಕುಟುಂಬಗಳನ್ನು ಅದರಲ್ಲೂ ಪ್ರಮುಖವಾಗಿ ಗ್ರಾಮೀಣ ಕುಟುಂಬಗಳನ್ನು ಸಂಪರ್ಕಿಸಲು ಉದ್ದೇಶಿಸಲಾಗಿದೆ. ಎಲ್ಲ ಕುಟುಂಬಗಳಿಗೆ ಬೇಡಿಕೆಗೆ ಅನುಗುಣವಾಗಿ ಕೈಗೆಟುಕುವ ದರದಲ್ಲಿ ಹೈಸ್ಪೀಡ್ ಬ್ರಾಡ್‌ಬ್ಯಾಂಡ್ ಸಂಪರ್ಕವನ್ನು 2ಎಂಬಿಪಿಎಸ್‌ನಿಂದ 20 ಎಂಬಿಪಿಎಸ್ ವೇಗದವರೆಗೆ ನೀಡುವ ಮೂಲಕ ಡಿಜಿಟಲ್ ಇಂಡಿಯಾ

ಕನಸು ನನಸುಗೊಳಿಸುವುದು ಇದರ ಉದ್ದೇಶ. ಈ ಯೋಜನೆಗೆ ಸಾರ್ವತ್ರಿಕ ಸೇವಾಬದ್ಧತೆ ನಿಧಿಯಿಂದ ನೆರವು ನೀಡಲಾಗಿದೆ.

## 36. ಇ-ಸಂಸತ್ ಮತ್ತು ಇ-ವಿಧಾನ್

### ಪ್ರಮುಖ ಸುದ್ದಿ

- ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವಾಲಯ ಸಂಸತ್ತಿಗಾಗಿ ಇ- ಸಂಸತ್ ಹಾಗಾ ಎಲ್ಲ ರಾಜ್ಯಗಳ ವಿಧಾನಸಭೆಗಳಿಗಾಗಿ ಇ- ವಿಧಾನ್ ವ್ಯವಸ್ಥೆಯನ್ನು ಆರಂಭಿಸಲು ನಿರ್ಧರಿಸಿದೆ. ಇದು ಸಂಸತ್ತು ಹಾಗೂ ರಾಜ್ಯ ವಿಧಾನಸಭೆಗಳನ್ನು ಕಾಗದರಹಿತವಾಗಿ ಮಾಡುವುದು ಹಾಗೂ ಡಿಜಿಟಲೀಕರಿಸುವುದು ಈ ಮಹತ್ವಾಕಾಂಕ್ಷಿ ಯೋಜನೆ ಉದ್ದೇಶ.

- ಸಂಸದೀಯ ವ್ಯವಹಾರಗಳ ಖಾತೆ ಸಚಿವ ಅನಂತ್ ಕುಮಾರ್ ಈ ವಿಷಯವನ್ನು 18ನೇ ಅಖಿಲ ಭಾರತ ಸಚೇತಕರ ಸಮ್ಮೇಳನದಲ್ಲಿ ರಾಜಸ್ಥಾನದ ಉದಯಪುರದಲ್ಲಿ ಘೋಷಿಸಿದರು.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಇ-ಸಂಸತ್, ಇ-ವಿಧಾನ್ ಬಗ್ಗೆ

- ಇ-ಸಂಸತ್, ಇ-ವಿಧಾನ್ ಎನ್ನುವುದು ಕೇಂದ್ರ ಸರ್ಕಾರದ ಡಿಜಿಟಲ್ ಇಂಡಿಯಾ ಯೋಜನೆಯ ಭಾಗವಾಗಿದ್ದು, ರಾಜ್ಯ ವಿಧಾನಸಭೆಗಳು ಹಾಗೂ ಕೇಂದ್ರದ ಸಂಸತ್ತು ಕಾಗದರಹಿತವಾಗಿ ಕಾರ್ಯನಿರ್ವಹಿಸುವಂತೆ ಮಾಡುವುದು ಇದರ ಉದ್ದೇಶ.
- ಇದು ಇಡೀ ಪ್ರಕ್ರಿಯೆಯನ್ನು ಡಿಜಿಟಲೀಕರಿಸಲು ಉದ್ದೇಶಿಸಿದ್ದು, ಸಂಸತ್ತು ಮತ್ತು ರಾಜ್ಯಗಳ ವಿಧಾನಸಭೆಗಳ ಎಲ್ಲ ದಾಖಲೆಗಳನ್ನು ಡಿಜಿಟಲ್ ರೂಪದಲ್ಲಿ ಲಭ್ಯವಾಗುವಂತೆ ಮಾಡಲಾಗುತ್ತದೆ.
- ಕೇಂದ್ರ ಹಾಗೂ ರಾಜ್ಯಗಳ ಡಾಟಾಬೇಸ್, ಭಾಷಣಗಳು, ಸಮಿತಿ ವರದಿಗಳು ಮತ್ತು ಪ್ರಶ್ನೆಗಳ ವಿವರಗಳನ್ನು ಇಂಟರ್ನೆಟ್ ಮೂಲಕ ಲಭ್ಯವಾಗುವಂತೆ ಮಾಡುವುದು ಇದರ ಉದ್ದೇಶ.

- ಸಂಸದೀಯ ವ್ಯವಹಾರಗಳ ಸಚಿವಾಲಯವು ಈ ಎರಡೂ ಯೋಜನೆಗಳನ್ನು ಅನುಷ್ಠಾನಗೊಳಿಸುವ ಹೊಣೆ ಹೊಂದಿರುತ್ತವೆ. ಈ ಯೋಜನೆಯಡಿ ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳು ಪಾಲ್ಗೊಳ್ಳುವಿಕೆಗೆ, ಸ್ಪಂದನಾತ್ಮಕ, ಪಾರದರ್ಶಕ ಹಾಗೂ ಉತ್ಪಾದಕವಾಗಿ ಕಾರ್ಯನಿರ್ವಹಿಸುವಂತೆ ಮಾಡುವುದು ಹಾಗೂ ಸಾರ್ವಜನಿಕರ ಬಗ್ಗೆ ಹೆಚ್ಚಿನ ಹೊಣೆಗಾರಿಕೆಯಿಂದ ಇರುವಂತೆ ಮಾಡುವುದು ಇದರ ಉದ್ದೇಶ.

- ಈ ಯೋಜನೆಗಳು ಇಡೀ ಶಾಸನಾತ್ಮಕ ಪ್ರಕ್ರಿಯೆಗಳನ್ನು ಹೆಚ್ಚು ದಕ್ಷವಾಗಿ ಮಾಡುವ ಗುರಿ ಹೊಂದಿವೆ. ಇದು ಪರಿಸರ ಸ್ನೇಹಿ ಯೋಜನೆಗಳಾಗಿದ್ದು, ಸರ್ಕಾರದ ಹಸಿರೀಕರಣ ಯೋಜನೆಯ ಅಂಗವಾಗಿ ಅನುಷ್ಠಾನಗೊಳ್ಳುತ್ತಿವೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 37. ಭಾರತಕ್ಕೆ ಸಿಕ್ಕಿತು ಫಾಸ್ಟೆಸ್ಟ್ ಸೂಪರ್ ಕಂಪ್ಯೂಟರ್-ಪ್ರತ್ಯುಷ್

### ಪ್ರಮುಖ ಸುದ್ದಿ

- ಭಾರತದ ಅತ್ಯಂತ ವೇಗದ ಹಾಗೂ ಮೊಟ್ಟಮೊದಲ ಬಹು- ಪೆಟಾಫ್ಲೋಪ್ ಸೂಪರ್ ಕಂಪ್ಯೂಟರ್ ಆಗಿದ್ದು, ಇದಕ್ಕೆ ಪ್ರತ್ಯುಷ್ ಎಂದು ಹೆಸರಿಸಲಾಗಿದೆ. ಇದನ್ನು ಪುಣೆ ಮೂಲದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟ್ರೋಪಿಕಲ್ ಮೆಟ್ರೋಲಜಿ ಅಭಿವೃದ್ಧಿಪಡಿಸಿದೆ. ಈ ಸೂಪರ್ಕಂಪ್ಯೂಟರ್ಗೆ ಪ್ರತ್ಯುಷ್ ಹೆಸರಿದ್ದು, ಪ್ರತ್ಯುಷ್ ಎಂದರೆ ಸಂಸ್ಕೃತದಲ್ಲಿ ಸೂರ್ಯ ಎಂಬ ಅರ್ಥ.

- ಈ ಸೂಪರ್ ಕಂಪ್ಯೂಟರ್ ನೆರವಿನಿಂದ ಭಾರತ ಮುಂಗಾರು ಮಳೆ, ವಿಕೋಪ ಪರಿಸ್ಥಿತಿ, ಚಂಡಮಾರುತ, ಸುನಾಮಿ, ಭೂಕಂಪ, ವಾಯು ಗುಣಮಟ್ಟ, ಮಿಂಚು, ಮೀನುಗಾರಿಕೆ, ಬಿಸಿ ಮತ್ತು ಶೀತಗಾಳಿ, ಪ್ರವಾಹ ಮತ್ತು ಬರ ಪರಿಸ್ಥಿತಿಯ ಬಗ್ಗೆ ನಿಖರವಾದ ಮಾಹಿತಿಗಳನ್ನು ತಿಳಿದುಕೊಳ್ಳಲು ಸಾಧ್ಯವಾಗಲಿದೆ.

ಮುಖ್ಯ ಅಂಶಗಳು

- ಸೂಪರ್ಕಂಪ್ಯೂಟರ್ ಪ್ರತ್ಯುಷ್ ಭಾರತದ ಹವಾಮಾನ ಮತ್ತು ವಾತರವಣದ ಬಗೆಗಿನ ಮುನ್ಸೂಚನೆ ಮತ್ತು ಇತರ ಸೇವೆಗಳನ್ನು ಭೂ ವಿಜ್ಞಾನ ಸಚಿವಾಲಯದ ಪರವಾಗಿ ನೀಡಲು ಸಹಕಾರಿಯಾಗಲಿದೆ.
- ಪ್ರತ್ಯುಷ್ ಸೂಪರ್ ಕಂಪ್ಯೂಟರ್, 6.8 ಪಿಎಫ್ ಕಂಪ್ಯುಟೇಷನಲ್ ಪವರ್ ಹೊಂದಿದ್ದು, ಎರಡು ಎಂಓಇಎಸ್ ಸಂಸ್ಥೆಗಳಲ್ಲಿ ಇದನ್ನು ಅಳವಡಿಸಲಾಗಿದೆ. 4.0 ಪೆಟಾ ಫ್ಲಾಪ್ ಎಚ್‌ಪಿಸಿ ವ್ಯವಸ್ಥೆಯನ್ನು ಐಐಟಿಇಎಂ ಪುಣೆ ಹಾಗೂ 2.8 ಪೆಟಾ ಫ್ಲಾಪ್ ವ್ಯವಸ್ಥೆಯನ್ನು ಎನ್‌ಸಿಎಂಆರ್ಡಬ್ಲ್ಯುಎಫ್, ನೋಯ್ಡಾದಲ್ಲಿ ಅಳವಡಿಸಲಾಗಿದೆ. (ಪಿಎಫ್ ಅಂದರೆ ಕಂಪ್ಯೂಟರ್ನ ಪ್ರೊಸೆಸಿಂಗ್ ವೇಗವನ್ನು ಅಳೆಯುವ ಮಾಪನ).

IAS/KAS

- ಪ್ರತ್ಯುಷ್ ಇಡೀ ವಿಶ್ವದಲ್ಲೇ ನಾಲ್ಕನೇ ಅತಿವೇಗದ ಸೂಪರ್ ಕಂಪ್ಯೂಟರ್ ಆಗಿದ್ದು, ಹವಾಮಾನ ಮತ್ತು ವಾತಾವರಣ ಸಂಶೋಧನೆಗೆ ಮೀಸಲಾದ ಕಂಪ್ಯೂಟರ್ ಇದಾಗಿದೆ. ಇದು ಜಪಾನ್, ಅಮೆರಿಕ ಹಾಗೂ ಇಂಗ್ಲೆಂಡಿನ ಸೂಪರ್ ಕಂಪ್ಯೂಟಿಂಗ್ ಮಿಷನ್‌ಗಳನ್ನು ಅನುಸರಿಸಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಈ ಅತ್ಯಧಿಕ ಕ್ಷಮತೆಯ ಕಂಪ್ಯೂಟಿಂಗ್ ವ್ಯವಸ್ಥೆಯ ಮುಖ್ಯ ಕಾರ್ಯಗಳೆಂದರೆ, ಮುಂಗಾರು ಮಳೆಯ ಮುನ್ಸೂಚನೆಯನ್ನು ಸಕ್ರಿಯ ಮಾದರಿಯ ಮೂಲಕ ನೀಡುವುದು. ಇದು ಸಿಮ್ಯುಲೇಟಿಂಗ್ ಹವಾಮಾನ ವ್ಯವಸ್ಥೆಯನ್ನು ಒಂದು ತಿಂಗಳವರೆಗೆ ಮುನ್ಸೂಚನೆ ನೀಡಲು ಸಹಕಾರಿಯಾಗಲಿದೆ. ಈ ಮಾದರಿಯನ್ನು ಬಲಸಿಕೊಮಡು, ವಾಸ್ತವ ವಾತಾವರಣವನ್ನು ಮುಂದಿನ ತಿಂಗಳಿಗೆ ಅಂದಾಜಿಸುತ್ತದೆ.

## 38. ರೈಲ್ವೆ ಯೋಜನೆಗಳ ಮೇಲ್ವಿಚಾರಣೆಗೆ ಡ್ರೋನ್ ಬಳಕೆ

ಪ್ರಮುಖ ಸುದ್ದಿ

➢ ಟ್ರ್ಯಾಕ್ಗಳು ಮತ್ತು ಇತರ ರೈಲ್ವೆ ಮೂಲಸೌಕರ್ಯಗಳ ಯೋಜನೆಯ ಮೇಲ್ವಿಚಾರಣೆ ಮತ್ತು ನಿರ್ವಹಣೆಗಾಗಿ ಡ್ರೋನ್ ಕ್ಯಾಮೆರಾಗಳನ್ನು ನಿಯೋಜಿಸಲು ಭಾರತೀಯ ರೈಲ್ವೆ ನಿರ್ಧರಿಸಿದೆ.

➢ ಈಗಾಗಲೇ ಅಂತಹ ಕ್ಯಾಮೆರಾಗಳನ್ನು ಅಳವಡಿಸಲು ಎಲ್ಲ ವಿಭಾಗೀಯ ರೈಲ್ವೇಗೆ ನಿರ್ದೇಶನ ನೀಡಲಾಗಿದೆ. ರೈಲ್ವೆ ಕಾರ್ಯಾಚರಣೆಗಳಲ್ಲಿ ಸುರಕ್ಷತೆ ಮತ್ತು ದಕ್ಷತೆಯನ್ನು ಹೆಚ್ಚಿಸಲು ತಂತ್ರಜ್ಞಾನವನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಈ ಮಾರ್ಗವನ್ನು ಕಂಡುಕೊಳ್ಳಲಾಗಿದೆ.

### ಮುಖ್ಯ ಅಂಶಗಳು

➢ ಡಿಆರ್‌ಡಿಒ ಅಭಿವೃದ್ಧಿ ಪಡಿಸಿರುವ ಕ್ಯಾಮೆರಾ ಒಳಗೊಂಡ ಮಾನವರಹಿತ ಹಾರಾಟ ವಾಹನ(ನೇತ್ರ)ಗಳನ್ನು ಯೋಜನೆ ಮೇಲ್ವಿಚಾರಣೆಗೆ ಬಳಕೆ ಮಾಡುವುದಾಗಿ ರೈಲ್ವೆ ಇಲಾಖೆ ಪ್ರಕಟಣೆ ತಿಳಿಸಿದೆ.

➢ ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆ, ಯೋಜನೆಯ ಮೇಲ್ವಿಚಾರಣೆ, ಪ್ರಮುಖ ಕಾರ್ಯಗಳ ಪ್ರಗತಿ, ಟ್ರ್ಯಾಕ್ ಮತ್ತು ತಪಾಸಣೆ ಸಂಬಂಧಿತ ಚಟುವಟಿಕೆಗಳ ಮೇಲ್ವಿಚಾರಣೆ ಚಟುವಟಿಕೆಗಳನ್ನು ಕೈಗೊಳ್ಳಲು ಡ್ರೋನ್ ಕ್ಯಾಮೆರಾಗಳನ್ನು ಬಳಸಿಕೊಳ್ಳಲು ಭಾರತೀಯ ರೈಲ್ವೆ ನಿರ್ಧರಿಸಿದೆ.

➢ ಟ್ರ್ಯಾಕ್ಗಳು ಮತ್ತು ಇತರ ರೈಲ್ವೆ ಮೂಲಸೌಕರ್ಯಗಳ ಸುರಕ್ಷತೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ನೈಜ-ಸಮಯದ ಒಳಹರಿವು ಒದಗಿಸುವಲ್ಲಿ ಡ್ರೋನ್ ಗಳು ಪ್ರಮುಖ ಪಾತ್ರವಹಿಸುತ್ತವೆ.

➢ ಈ ಯೋಜನೆಯ ಅಡಿಯಲ್ಲಿ, ಮಧ್ಯಪ್ರದೇಶದ ಜಬಲ್ಪುರದ ಪ್ರಧಾನ ಕಛೇರಿಯು ಭಾರತದ ರೇಲ್ವೆ ವಿಭಾಗಗಳಲ್ಲಿ "ಡ್ರೋನ್" ಕ್ಯಾಮರಾಗಳನ್ನು ಅಳವಡಿಸಿದ ಮೊದಲ ವಿಭಾಗೀಯ ರೈಲ್ವೆಯಾಗಿದೆ. ಕಳೆದ ಮೂರು ವಾರಗಳಲ್ಲಿ ಜಬಲ್ಪುರ್ ವಿಭಾಗ, ಭೋಪಾಲ್ ವಿಭಾಗ ಮತ್ತು ಕೋಟಾ

ವಿಭಾಗದಲ್ಲಿ ವೆಸ್ಟ್ ಸೆಂಟ್ರಲ್ ರೈಲ್ವೇಸ್ ಈಗಾಗಲೇ ಡ್ರೋನ್ ಕ್ಯಾಮರಾಗಳ ಕಾರ್ಯಾಚರಣೆ ನಡೆಸಿದೆ.

## 39. ಮಧುಬಾನಿ ವರ್ಣಚಿತ್ರ

### ಪ್ರಮುಖ ಸುದ್ದಿ

- ಬಿಹಾರದ ವಿವಿಧ ಸರ್ಕಾರಿ ಕಟ್ಟಡಗಳ ಗೋಡೆಗಳನ್ನು ಮಧುಬಾನಿಯ ಜಾನಪದ ವರ್ಣಚಿತ್ರಗಳಿಂದ ಶೀಘ್ರದಲ್ಲೇ ಅಲಂಕರಿಸುಲಾಗುತ್ತದೆ. ಈ ಕಲೆಯು ಅಲ್ಲಿನ ಪೂರ್ವ ಭಾರತದ ಕಲೆ . ಮಧುಬಾನಿ ವರ್ಣಚಿತ್ರಗಳನ್ನೂ ಚಿತ್ರಿಸುವ ಹಿಂದಿನ ಕಲ್ಪನೆಯೆಂದರೆ ಪ್ರವಾಸಿಗರಿಗೆ ಅಲ್ಲಿನ ಪ್ರದೇಶದ ಸಂಸ್ಕೃತಿಯೊಂದಿಗೆ ವರ್ಣಚಿತ್ರಗಳನ್ನು ಹೇಗೆ ಸಂಯೋಜಿಸಲಾಗಿದೆ ಎಂಬುದರ ಬಗ್ಗೆ ಒಂದು ಅನುಭವವನ್ನು ನೀಡುವುದು .

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಮಧುಬಾನಿ ವರ್ಣಚಿತ್ರದ ಬಗ್ಗೆ

- ಮನುಷ್ಯನ ಮನಸ್ಸಿನಲ್ಲಿ ಮೂಡಿದ ಭಾವನೆಯನ್ನು ಹಸ್ತ ಕೌಶಲದ ಮೂಲಕ ವರ್ಣನಾತ್ಮಕವಾಗಿ ಚಿತ್ರಿಸಿರುವ ವರ್ಣಚಿತ್ರಗಳನ್ನು ನೋಡುತ್ತಿದ್ದರೆ ಎಂತವರನ್ನು ಮನಸೋರೆಗೊಳ್ಳುವಂತೆ ಮಾಡುತ್ತದೆ. ಇವರ ಮನಸ್ಸಿನಾಳದಲ್ಲಿ ಹುದುಗಿ ಹೋಗಿರುವ ನೋವು, ಮನಬಿಚ್ಚೆ ನಕ್ಕಾಗ ನಲಿವು, ಕಂಡ ಕನಸುಗಳ ಕನವರಿಕೆ, ಆಶಾಕಿರಣವಾಗಿ ಮೂಡಬೇಕಿದ್ದ ಆಶಾಭಾವನೆಗಳನ್ನು ಇವರು ಹಂಚಿಕೊಳ್ಳುವುದು ವರ್ಣಚಿತ್ರಗಳ ಮೂಲಕವೇ.. ಎಲ್ಲಾದಕ್ಕೂ ಚಿತ್ತವೇ ಕಾರಣ.

- ಕಲಾವಿದ ಈ ಚಿತ್ರದ ಸೃಷ್ಟಿಕರ್ತನಾದರೆ ಅದನ್ನು ವೀಕ್ಷಕ, ಅಥವಾ ಗ್ರಾಹಕ ಅದರ ಒಡಯನಾಗಿರುತ್ತಾನೆ.. ಇವರು ರಚಿಸಿರುವ ಚಿತ್ರಕಲೆಗಳು ಮನಮೋಹಕವಾಗಿರುತ್ತವೆ,... ಆದರೆ ನಿಜಾರ್ಥದಲ್ಲಿ ಅವರ ಜೀವನ ಚರಿತ್ರೆಯನ್ನು ಈ ವರ್ಣ ಚಿತ್ರಗಳು ತಿಳಿಸುತ್ತ ಎಲ್ಲಾರನ್ನು ಸೆಳೆಯುತ್ತದೆ.

- ಉತ್ತರ ಭಾರತದ ಬಿಹಾರದ ಮಿಥಿಲಾ ಪ್ರದೇಶದಲ್ಲಿ ಮಹಿಳೆಯರು 1500 ವರ್ಷಗಳಿಂದಲೂ ಹೆಚ್ಚು ಕಾಲ ದಬ್ಬಾಳಿಕೆಯ ಜೀವನವನ್ನು ನಡೆಸುತ್ತಾ ಬಂದವರು.. ಅವರ ನಿಗ್ರಹಿಸಿದ ಆಸೆಗಳು, ಕನಸುಗಳು, ಅವರ ಜನ್ಮ, ಮದುವೆ, ಮತ್ತು ಜೀವನದ ಚಕ್ರಗಳಂತಹ ವಿವಿಧ ಘಟನೆಗಳನ್ನು ಏಕಾಗ್ರತೆ ಮತ್ತು ತನ್ಮಯತೆಯಿಂದ ಚಿತ್ರಿಸುತ್ತಾರೆ. ಇವರ ಕಲಾ ಕುಂಚದಲ್ಲಿ ಮೂಡಿಬಂದ ಚಿತ್ರಕಲೆಗಳು ನೋಡುಗರ ಮನಸ್ಸನ್ನು ಅರಳಿಸುತ್ತದೆ.

- ಈ ವರ್ಣಚಿತ್ರಗಳನ್ನು ಮಧುಬಾನಿ ಚಿತ್ರಕಲೆ ಅಥವಾ ಮಿಥೀಲಿ ಚಿತ್ರಕಲೆ ಎಂದು ಕರೆಯುತ್ತಾರೆ.. ಭಾರತದ ಬಿಹಾರ ರಾಜ್ಯದಲ್ಲಿ ಮೈಥಿಲಿ ಎಂಬ ಪುಟ್ಟ ಗ್ರಾಮದಲ್ಲಿ ಹುಟ್ಟಿಕೊಂಡಿತ್ತು. ಶತಶತಮಾನಗಳಿಂದ ಈ ಜಾನಪದ ಕಲೆ ಇದ್ದಿತ್ತಾದರೂ ಕಳೆದ ಕೆಲವು ದಶಕಗಳಿಂದ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮನ್ನಣೆ ಪಡೆದಿದೆ.

- ಈ ಕಲೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ.. ಮಧುಬಾನಿ ಚಿತ್ರಕಲೆ.. ಉತ್ತರ ಭಾರತದ ಜನಪದ ಚಿತ್ರಕಲೆಯಾಗಿ ಹೆಚ್ಚು ಪ್ರಸಿದ್ಧಿ ಪಡೆದಿದೆ.. ಈ ಗ್ರಾಮದ ಮಹಿಳೆಯರು ತಮ್ಮ ನೋವುಗಳು, ಮನಸ್ಸಿನ ಭಾವನೆಗಳು, ಆಲೋಚನೆಗಳು, ಮತ್ತು ತಮ್ಮ ಕನಸುಗಳನ್ನು ಯಾರೊಂದಿಗೂ ವ್ಯಕ್ತಪಡಿಸಲು ಸಾಧ್ಯವಾಗುತ್ತಿರಲಿಲ್ಲ.

- ತಮ್ಮ ವೇಧನೆಯನ್ನು ಯಾರೊಂದಿಗಾದರೂ ಹೇಳಿಕೊಂಡು ಮನಸ್ಸನ್ನು ಹಗುರ ಮಾಡಿಕೊಳ್ಳಬೇಕು ಎಂದಿದ್ದರೂ ಅದಕ್ಕೆಲ್ಲಾ ಮನೆಯ ಮಂದಿಗಳು, ಪರಿಸ್ಥಿತಿಗಳು ಅವಕಾಶ

ಕೊಡುತ್ತಿರಲಿಲ್ಲ.. ಆಗಲೇ ಹುಟ್ಟಿಕೊಂಡಿದ್ದು ಹೊಸ ಮಾರ್ಗ ಮನೆಯ ಗೋಡೆಗಳ ಮೇಲೆ, ನೆಲದ ಮೇಲೆ ಚಿತ್ರಿಸುವುದು..

- ಆರಂಭದ ದಿನಗಳಲ್ಲಿ ಮಹಿಳೆಯರು ವರ್ಣಗಳ ಮೂಲಕ ತಮ್ಮ ವೈಯಕ್ತಿಕ ಬದುಕನ್ನು ಬಿಂಬಿಸುತ್ತಿತ್ತು.. ಕಾಲ ಕಳೆದಂತೆ ಹಬ್ಬ ಹರಿದಿನಗಳಲ್ಲಿ, ಶುಭ ಸಮಾರಂಭಗಳಲ್ಲಿ ಅಥವಾ ವಿಶೇಷ ಸಂಧರ್ಭಗಳಲ್ಲಿ ವರ್ಣಚಿತ್ರಗಳನ್ನು ಚಿತ್ರಿಸುವುದು ರೂಡಿಯಾಯಿತು. ಇಷ್ಟೇ ಅಲ್ಲದೇ ಪುರಾತನ ಕಾಲದ ಮದುವೆಯ ಆಚರಣೆಗಳು, ಧಾರ್ಮಿಕ ಆಚರಣೆಗಳು, ವಿವಿಧ ಸಾಂಸ್ಕøತಿಕ ಕಾರ್ಯಕ್ರಮಗಳು, ಪುರಾಣದ ಕಥೆಗಳ ದೃಶಗಳನ್ನು ಚಿತ್ರಿಸುತ್ತ, ವರ್ಣ ಚಿತ್ರಗಳಿಗೆ ಮೆರಗು ನೀಡುತ್ತಾ ಬದಲಾವಣೆ ತಂದರು.

- ಮಧುಬಾನಿ ವರ್ಣ ಚಿತ್ರಗಳು ಆ ಕಾಲದ ಮಂಗಳಕರ ಚಿತ್ರಕಲೆ, ಸಂಸ್ಕøತಿ ಮತ್ತು ಸಂಪ್ರದಾಯವನ್ನು ಹೆಚ್ಚಾಗಿ ಪ್ರತಿಬಿಂಬಿಸುತ್ತಿತ್ತು.. ಹಿಂದಿನ ಕಾಲದಲ್ಲಿ ಗೋಡೆ ಹಾಗೂ ನೆಲದ ಮೇಲೆ ಬಿಡಿಸುತ್ತಿದ್ದ ವರ್ಣ ಚಿತ್ರಗಳನ್ನು ಇಂದೂ ಬಟ್ಟೆ, ಕಾಗದದ, ಕ್ಯಾನ್ವಸ್ ಮೇಲೆ ಚಿತ್ರಿಸುವುದರಿಂದ ಹೆಚ್ಚು ಪ್ರಖ್ಯಾತಿ ಹೊಂದಿರುವುದಲ್ಲದೇ ಪುರಾತನ ಕಾಲದಿಂದ ಬಂದ ಈ ಕಲೆಯೂ ಈಗ ಆಧುನಿಕ ಕಾಲದ ಸಮಸ್ಯೆಗಳ ಪ್ರತಿಫಲವಾಗಿ ವರ್ಣಚಿತ್ರಗಳು ಪ್ರತಿಬಿಂಬಿಸುತ್ತಾ ಸಮಾಜಕ್ಕೆ ಒಂದು ಒಳ್ಳೆಯ ವಿಷಯವನ್ನು ತಿಳಿಸುವ ಉದ್ದೇಶ ಹೊಂದಿದೆ.

- ಸದ್ಯದ ಪರಿಸ್ಥಿತಿಯಲ್ಲಿ ನಡೆಯುತ್ತಿರುವ ಸಮಾಜದ ಹಳ್ಳಿಯ ಜೀವನ, ಪ್ರವಾಹ, ಭಯೋತ್ಪಾದನೆ, ಜಾಗತೀಕ ತಾಪಮಾನ, ವರದಕ್ಷಿಣೆ, ಅತ್ಯಾಚಾರ, ಹೆಣ್ಣಿನ ಶಿಶುಹತ್ಯೆ, ವೈಧ್ಯಕೀಯ ಆರೈಕೆ, ಬಾಲಕ ಬಾಲಕಿಯರ ಶಿಕ್ಷಣದಂತ ಸ್ತ್ರೀವಾದಿ ಸಮಸ್ಯೆಗಳು, ಹಾಗೂ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಘಟನೆಗಳ ವಾಸ್ತವ ಪ್ರಪಂಚವನ್ನು ವರ್ಣಚಿತ್ರಗಳ ಮೂಲಕ ತೆರೆದಿಡುತ್ತಾ ಸಮಾಜದಲ್ಲಿ ಅರಿವು ಮೂಡಿಸುತ್ತಿದೆ.

- ಈ ಕಲೆಯ ಮತ್ತೊಂದು ವಿಶೇಷತೆ ಎಂದರೆ ವರ್ಣ ಚಿತ್ರಕಲೆಯನ್ನು ಮರಗಳ ಮೇಲೆ ಚಿತ್ರಿಸುವುದು.. ಇದಕ್ಕೆ ಕಾರಣ ಮರಗಳ ಮೇಲೆ ವಿಭಿನ್ನ ರೀತಿಯ ಚಿತ್ರಗಳನ್ನು ಚಿತ್ರಿಸುವುದರಿಂದ ಮರ ಕಡೆಯುವುದನ್ನು ತಡೆಗಟ್ಟಬಹುದಾದ ಮಾರ್ಗವಾಗಿ ಬಳಸುತ್ತಿದ್ದಾರೆ. ಸರಳವಾದ ವರ್ಣಚಿತ್ರಗಳು ಜನರನ್ನು ಮರಗಳು ಕತ್ತರಿಸಿದಂತೆ ತಡೆಯುತ್ತದೆ.

- ಮೊದಲೆಲ್ಲ ಚಿತ್ರಿಸುವುದಕ್ಕೆ ನೈಸರ್ಗಿಕ ಬಣ್ಣಗಳು ಹಾಗೂ ಬಿದಿರಿನ ಕೋಲಿನಿಂದ ತಯಾರಿಸಿದ ಬ್ರಷ್‌ಗಳನ್ನು ಬಳಸುತ್ತಿದ್ದರು. ಇದೀಗ ಆಧುನಿಕ ಬ್ರಷ್‌ಗಳು,ಸಿಂಥೇಟಿಕ್ ಬಣ್ಣಗಳನ್ನು ಬಳಸುತ್ತಾರೆ. ಚಿತ್ರದ ನಂತರ ಉಳಿದ ಜಾಗವನ್ನು ಬಿಡದೆ ಪ್ರಾಣಿ ಪಕ್ಷಿಗಳು, ಹೂ ಹಣ್ಣುಗಳನ್ನು ಚಿತ್ರಿಸಿ ಮತ್ತಷ್ಟು ಕಳೆಕಟ್ಟುವಂತೆ ಮಾಡುತ್ತಾರೆ.. ಇನ್ನೂ ಮಕ್ಕಳಾಗಿಯೇ ಪ್ರಾಣಿ ಪಕ್ಷಿಗಳು, ಮೀನು, ಆಟಿಕೆಗಳ ಮಾಹಿತಿ, ಹೀಗೆ ಮತ್ತಿತ್ತರ ಚಿತ್ರಗಳಿಂದ ಮಕ್ಕಳನ್ನು ಆಕರ್ಷಿಸುತ್ತಾರೆ.

- ಹಿಂದಿನ ಬಹು ತಲೆಮಾರುಗಳಿಂದ ಈ ಕಲೆಯನ್ನು ತಮ್ಮ ಹೆಣ್ಣು ಮಕ್ಕಳಿಗೆ ಹೆಚ್ಚಾಗಿ ಅಭ್ಯಾಸಿಸುತ್ತಾ ಬಂದಿದ್ದಾರೆ. ಇದೀಗ ಬಿಹಾರ ರಾಜ್ಯದೆಲ್ಲಡೆ ವರ್ಣ ಚಿತ್ರಕಲೆಗಳ ತರಬೇತಿ ಶಾಲೆಯನ್ನು ಕೆಲವು ಸಂಘ ಸಂಘಟನೆಗಳು ಬಾಗಿಲು ತೆರೆದಿದ್ದಾರೆ. ಗೃಹಿಣಿಯರು, ವಯಸ್ಕ ಮಹಿಳೆಯರು, ನಿರುಧ್ಯೋಗ ಸಮಸ್ಯೆಯನ್ನು ಎದುರಿಸುತ್ತಿರುವ ಮಹಿಳೆಯರು ತರಬೇತಿ ಸಂಸ್ಥೆಯಲ್ಲಿ ತರಬೇತಿ ಪಡೆದುಕೊಂಡು ವರ್ಣ ಚಿತ್ರಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಇನ್ನು ಕೆಲವು ಮಹಿಳೆಯರು ತಮ್ಮ ಕುಟುಂಬಗಳಲ್ಲಿನ ಹಳೆಯ ಮಹಿಳೆಯರಿಂದ ಸಾಂಪ್ರದಾಯಿಕ ರೀತಿಯಲ್ಲಿ ಚಿತ್ರಿಸುವುದರಲ್ಲಿ ಪರಿಣಿತಿ ಹೊಂದಿದ್ದಾರೆ.

## 40. ಭಾರತ ಮತ್ತು ಕೆನಡಾ ನಡುವಿನ ತಿಳಿವಳಿಕೆ ಒಪ್ಪಂದಕ್ಕೆ ಸಂಪುಟದ ಸಮ್ಮತಿ

### ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿನ ಸಹಕಾರಕ್ಕಾಗಿ ಭಾರತ ಮತ್ತು ಕೆನಡಾ ನಡುವೆ ತಿಳಿವಳಿಕೆ ಒಪ್ಪಂದ (ಎಂ.ಓ.ಯು.)ಗೆ ತನ್ನ ಅನುಮೋದನೆ ನೀಡಿದೆ. ಈ ತಿಳಿವಳಿಕೆ ಒಪ್ಪಂದವು ಭಾರತ ಮತ್ತು ಕೆನಡಾದ ಶೈಕ್ಷಣಿಕ ಸಂಸ್ಥೆಗಳ ನಡುವೆ ಆರ್ ಮತ್ತು ಡಿ ಮತ್ತು ವೈಜ್ಞಾನಿಕ ಸಹಕಾರವನ್ನು ಬೆಳೆಸಲು ಮತ್ತು ಒಂದು ವ್ಯವಸ್ಥೆಯನ್ನು ಒದಗಿಸಲು ಸಹಕಾರಿಯಾಗಿದೆ. .

### ಪ್ರಮುಖ ಅಂಶಗಳು

- ಕೆನಡಾದ ಸ್ವಾಭಾವಿಕ ವಿಜ್ಞಾನ ಮತ್ತು ಎಂಜಿನಿಯರಿಂಗ್ ಸಂಶೋಧನಾ ಮಂಡಳಿ (ಎನ್.ಎಸ್.ಇ.ಆರ್.ಸಿ.)ಯೊಂದಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಆಖಾರುಗೊಳಿಸುರುವ ಎಂ.ಓ.ಯು. ಅಡಿಯಲ್ಲಿ ಭಾರತ ಮತ್ತು ಕೆನಡಾ ನಡುವೆ ಒಂದು ನಾವಿನ್ಯಪೂರ್ಣ ಸಂಶೋಧನೆ ಮತ್ತು ಅಭಿವೃದ್ಧಿಯ ಮಾದರಿಯನ್ನು ಜಾರಿಗೊಳಿಸಲಾಗುತ್ತದೆ.

- ಈ ಎಂ.ಓ.ಯು. ಅಡಿಯಲ್ಲಿ ಸಮುದಾಯದ ಪರಿವರ್ತನೆಯನ್ನು ವೇಗಗೊಳಿಸಲು ಮತ್ತು ಸುಸ್ಥಿರಗೊಳಿಸುವ ಕಾರ್ಯಕ್ರಮಕ್ಕಾಗಿ ನಾವಿನ್ಯಪೂರ್ಣ ಬಹು ಸಂಸ್ಕೃತಿಯ ಸಹಭಾಗಿತ್ವ ಕುರಿತ ಭಾರತ- ಕೆನಡಾ ಕೇಂದ್ರ(ಐಸಿ- ಇಂಪ್ಯಾಕ್ಟ್ಸ್)ವು ಭಾರತ-ಕೆನಡಾ ಬಹು ಸಂಸ್ಕೃತಿಯ ಸಂಶೋಧನಾ ಸಹಭಾಗಿತ್ವ ಬೆಂಬಲಿಸುತ್ತದೆ.

- ಆರ್.ಅಂಡ್ ಡಿ ಯೋಜನೆಗಳು ವಿಜ್ಞಾನ ಮತ್ತು ತಂತ್ರಜ್ಞಾನದ ಆನ್ವಯಿಕಗಳ ಮೂಲಕ ಪರಿಹಾರ ಒದಗಿಸಿ ಸಾಮಾಜಿಕ ಪರಿವರ್ತನೆಯನ್ನು ವೇಗವರ್ಧಕಗೊಳಿಸುವ ಗುರಿಯನ್ನು ಹೊಂದಿವೆ.

- ಇದರಲ್ಲಿ ಪಾಲ್ಗೊಳ್ಳುವವರು ಭಾರತ ಮತ್ತು ಕೆನಡಾದ ವೈಜ್ಞಾನಿಕ ಸಂಸ್ಥೆಗಳ, ಶಿಕ್ಷಣ ಸಂಸ್ಥೆಗಳ ಮತ್ತು ಆರ್. ಅಂಡ್ ಡಿ ಪ್ರಯೋಗಾಲಯಗಳ ಸಂಶೋಧಕರಾಗಿರುತ್ತಾರೆ.

- ಬಹುಪಕ್ಷೀಯ ಸಹಕಾರಕ್ಕಾಗಿ ಗುರಿತಿಸಲಾದ ಕ್ಷೇತ್ರಗಳಲ್ಲಿ ಸುರಕ್ಷಿತ ಮತ್ತು ಸುಸ್ಥಿರ ಮೂಲಸೌಕರ್ಯ ಮತ್ತು ಸಮಗ್ರ ಜಲ ನಿರ್ವಹಣೆಯೂ ಸೇರಿದೆ.

- ಇದು ಸಾಂಸ್ಥಿಕ ಜಾಲ ಅಭಿವೃದ್ಧಿಪಡಿಸಲು ನೆರವಾಗುತ್ತದೆ ಮತ್ತು ಭಾರತ ಮತ್ತು ಕೆನಡಾದ ವೈಜ್ಞಾನಿಕ ಸಂಸ್ಥೆಗಳು, ವಿಜ್ಞಾನಿಗಳು ಮತ್ತು ವಿಶೇಷಜ್ಞರ ನಡುವೆ ಸಂಪರ್ಕ ಸ್ಥಾಪನೆಗೆ ಬೆಂಬಲ ನೀಡುತ್ತದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

ಹಿನ್ನೆಲೆ:

- ಈ ತಿಳಿವಳಿಕೆ ಒಪ್ಪಂದವು, ಭಾರತ ಮತ್ತು ಕೆನಡಾ ನಡುವೆ 2005ರ ನವೆಂಬರ್ ನಲ್ಲಿ ಆಖಾರುಗೊಂಡ ವೈಜ್ಞಾನಿಕ ಮತ್ತು ತಾಂತ್ರಿಕ ಸಹಕಾರ ಕುರಿತ ಅಂತರ ಸರ್ಕಾರೀಯ ಒಪ್ಪಂದದ ಅನುಸರಣೆಯೊಂದಿಗೆ ಆಖೈರುಗೊಂಡಿದೆ.

## 41. ತುಂಗಭದ್ರಾ ಉಕ್ಕು ಉತ್ಪನ್ನ ನಿಯಮಿತ ಮುಚ್ಚುವ ಸಿಸಿಇಎ ನಿರ್ಧಾರದ ಜಾರಿಗೆ ಸಂಪುಟದ ಅನುಮೋದನೆ

ಪ್ರಮುಖ ಸುದ್ದಿ

➢ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆ, ತುಂಗಭದ್ರಾ ಉಕ್ಕು ಉತ್ಪನ್ನ ನಿಯಮಿತ (ಟಿ.ಎಸ್.ಪಿ.ಎಲ್.) ಮುಚ್ಚಬೇಕೆಂಬ ಹಾಗೂ ಅದರ ಸ್ಥಿರ ಆಸ್ತಿಗಳ ವಿಲೇವಾರಿಯ ಸಿಸಿಇಎ ನಿರ್ಧಾರದ ಜಾರಿಗೆ ತನ್ನ ಅನುಮೋದನೆ ನೀಡಿದೆ. ಟಿ.ಎಸ್.ಪಿ.ಎಲ್.ನ ಋಣಗಳಿಗೆ ಸಮತೋಲನ ಸ್ಥಾಪಿಸಿದ ನಂತರ ಕಂಪನಿ ಹೆಸರನ್ನು ಕಂಪನಿಗಳ ರಿಜಿಸ್ಟ್ರಾರ್ ನಿಂದ ಹೊಡೆದು ಹಾಕಲು ಇದು ಅವಕಾಶ ನೀಡುತ್ತದೆ.

ಮುಖ್ಯ ಅಂಶಗಳು

➢ ನೌಕರರ/ಕಾರ್ಮಿಕರ ಮತ್ತು ಸಾಲಗಾರರಿಗೆ ಇರುವ ಬಾಕಿ ಚುಕ್ತಾ ಮಾಡಿದ ತರುವಾಯ ಕಂಪನಿಯನ್ನು ಮುಚ್ಚಲು ಸಿಸಿಇಎ 2015ರ ಡಿಸೆಂಬರ್ ನಲ್ಲಿ ಅನುಮೋದನೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

➢ 20,000 ಚದರ ಮೀಟರ್ ಭೂಮಿಯೊಂದಿಗೆ ಎಂ.ಎಂ.ಎಚ್. ಘಟಕವನ್ನು ಕರ್ನಾಟಕ ಸರ್ಕಾರಕ್ಕೆ ವರ್ಗಾವಣೆ ಮಾಡಲು ಸಂಪುಟ ತನ್ನ ಅನುಮೋದನೆ ನೀಡಿದೆ. ಹೊಸಪೇಟೆಯಲ್ಲಿರುವ ಕಂಪನಿಯ 82.37 ಎಕರೆ ಭೂಮಿಯನ್ನು ಕರ್ನಾಟಕ ರಾಜ್ಯ ಗೃಹ ಮಂಡಳಿಯ ಬಳಕೆಗಾಗಿ ಕರ್ನಾಟಕ ಸರ್ಕಾರಕ್ಕೆ ಮಾರಾಟ ಮಾಡಲೂ ತನ್ನ ಒಪ್ಪಿಗೆ ನೀಡಿದೆ.

➢ ಕರ್ನಾಟಕ ಸರ್ಕಾರಕ್ಕೆ ಈ ಭೂಮಿಯನ್ನು ಸರ್ಕಾರ ಕೇಳಿರುವ ಎಕರೆಗೆ 66 ಲಕ್ಷ ರೂಪಾಯಿ ಬೆಲೆಯಲ್ಲಿ ಮಾರಾಟ ಮಾಡಲಾಗುವುದು.

## 42. ಎಫ್.ಡಿ.ಐ. ನೀತಿಯಲ್ಲಿ ತಿದ್ದುಪಡಿಗಳಿಗೆ ಸಂಪುಟದ ಅನುಮೋದನೆ

ಪ್ರಮುಖ ಸುದ್ದಿ

- ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ನೀತಿಗೆ ಅಗತ್ಯ ತಿದ್ದುಪಡಿ ತರುವ ಪ್ರಸ್ತಾವನೆಯನ್ನು ಕೇಂದ್ರ ಸಚಿವ ಸಂಪುಟ ಅನುಮೋದಿಸಿದೆ. ಈ ತಿದ್ದುಪಡಿಗಳ ಪ್ರಮುಖ ಉದ್ದೇಶವೆಂದರೆ, ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ನೀತಿಯನ್ನು ಸರಳಗೊಳಿಸುವುದು ಮತ್ತು ಉದಾರಗೊಳಿಸುವುದು. ಈ ಮೂಲಕ ದೇಶದಲ್ಲಿ ವಹಿವಾಟು ನಡೆಸುವ ವಾತಾವರಣವನ್ನು ಸುಲಲಿತಗೊಳಿಸುವುದು. ಈ ಉದಾರೀಕೃತ ನೀತಿಯು ಎಫ್‌ಡಿಐ ಒಳಹರಿಯುವಿಕೆಯನ್ನು ಹೆಚ್ಚಿಸುವ ಉದ್ದೇಶ ಹೊಂದಿದೆ. ಇದು ದೇಶದಲ್ಲಿ ಹೂಡಿಕೆ, ಉದ್ಯೋಗ ಮತ್ತು ಆದಾಯವನ್ನು ಹೆಚ್ಚಿಸಲು ಪೂರಕವಾಗಲಿದೆ.

### ಒಪ್ಪಿಗೆ ನೀಡಲಾದ ಪ್ರಮುಖ ತಿದ್ದುಪಡಿಗಳು

- ಶೇಕಡ 100ರಷ್ಟು ವಿದೇಶಿ ನೇರ ಹೂಡಿಕೆ (ಎಫ್‌ಡಿಐ)ಗೆ ಸ್ವಯಂಚಾಲಿತ ಮಾರ್ಗದ ಮೂಲಕ ಸಿಂಗಲ್ ಬ್ರಾಂಡ್ ರೀಟೈಲ್ ಟ್ರೇಡಿಂಗ್ ವಲಯದಲ್ಲಿ ಅವಕಾಶ ನೀಡುವುದು.
- ನಿರ್ಮಾಣ ವಲಯದ ಅಭಿವೃದ್ಧಿ ಕ್ಷೇತ್ರದಲ್ಲಿ ಶೇಕಡ 100ರಷ್ಟು ವಿದೇಶಿ ನೇರ ಹೂಡಿಕೆ (ಎಫ್‌ಡಿಐ)ಗೆ ಸ್ವಯಂಚಾಲಿತ ಮಾರ್ಗದ ಮೂಲಕ ಅವಕಾಶ ನೀಡುವುದು.
- ವಿದೇಶಿ ವಿಮಾನಯಾನ ಕಂಪನಿಗಳು ಶೇಕಡ 49ರಷ್ಟು ಹೂಡಿಕೆಯನ್ನು ಏರ್ ಇಂಡಿಯಾದಲ್ಲಿ ಮಾಡಲು ಅವಕಾಶ ನೀಡಲಾಗಿದ್ದು, ಇದಕ್ಕೆ ಸರ್ಕಾರದ ಅನುಮೋದನೆ ಇರಬೇಕಾಗುತ್ತದೆ.
- ವಿದೇಶಿ ಸಾಂಸ್ಥಿಕ ಹೂಡಿಕೆ ಮತ್ತು ಎಫ್‌ಪಿಐಗಳು ವಿದ್ಯುತ್ ವಿನಿಮಯದಲ್ಲಿ ಪ್ರಾಥಮಿಕ ಮಾರುಕಟ್ಟೆ ಮೂಲಕ ಹೂಡಿಕೆ ಮಾಡಲು ಅವಕಾಸ ಕಲ್ಪಿಸಲಾಗುವುದು.
- ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ನೀತಿಯಲ್ಲಿ ವೈದ್ಯಕೀಯ ಸಾಧನಗಳು ಎಂಬ ಪದದ ವ್ಯಾಖ್ಯೆಗೆ ತಿದ್ದುಪಡಿ ತರಲಾಗುವುದು.
- ಎಸ್‌ಬಿಆರ್ಟಿ ಬಗೆಗಿನ ಎಫ್‌ಡಿಐ ನೀತಿ

- ಪ್ರಸ್ತುತ ಜಾರಿಯಲ್ಲಿರುವ ಎಸ್‌ಸ್‌ಬಿಆರ್ಟಿ ಬಗೆಗಿನ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ನೀತಿಯಲ್ಲಿ ಶೇಕಡ 49ರಷ್ಟು ವಿದೇಶಿ ನೇರ ಹೂಡಿಕೆಯನ್ನು ಸ್ವಯಂಚಾಲಿತ ಮಾರ್ಗದಲ್ಲಿ ಮಾಡಲು ಅವಕಾಶವಿದೆ. ಶೇಕಡ 49ರಿಂದ ಶೇಕಡ 100ರ ವರೆಗೆ ಸರ್ಕಾರಿ ಅನುಮೋದನೆ ಮಾರ್ಗದಡಿ

ಅವಕಾಶ ನೀಡಲಾಗುತ್ತದೆ. ಹೊಸ ತಿದ್ದುಪಡಿಯ ಅನ್ವಯ ಎಸ್‌ಬಿಆರ್ಟಿಗೆ ಸ್ವಯಂಚಾಲಿತ ಮಾರ್ಗದ ಮೂಲಕ ಶೇಕಡ 100ರಷ್ಟು ಹೂಡಿಕೆಗೆ ಅನುಮತಿ ನೀಡಲಾಗುತ್ತಿದೆ.

- ಎಸ್‌ಬಿಆರ್ಟಿ ಸಂಸ್ಥೆಗಳು ತಮ್ಮ ವಹಿವಾಟಿನ ಮೊದಲ ಐದು ವರ್ಷಗಳ ಅವಧಿಯಲ್ಲಿ ಇನ್‌ಕ್ರಿಮೆಂಟಲ್ ಸೋರ್ಸಿಂಗ್ ವ್ಯವಸ್ಥೆಯಡಿ ಶೇಕಡ 30 ಉತ್ಪನ್ನವನ್ನು ಭಾರತದಿಂದಲೇ ಖರೀದಿ ಮಾಡುವುದು ಕಡ್ಡಾಯವಾಗಲಿದೆ.

- ಇನ್‌ಕ್ರಿಮೆಂಟಲ್ ಸೋರ್ಸಿಂಗ್ ಎಂದರೆ, ಅಂಥ ಜಾಗತಿಕ ಮೂಲದ ಉತ್ಪನ್ನಗಳ ಮೌಲ್ಯದ ವಿಚಾರದಲ್ಲಿ, ಕಳೆದ ವರ್ಷದ ಆಯಾ ಸಿಂಗಲ್ ಬ್ರಾಂಡ್‌ನ ನಿರ್ದಿಷ್ಟ ಹಣಕಾಸು ವಹಿವಾಟನ್ನು ಅವಲಂಬಿಸಿದೆ. ಐದು ವರ್ಷ ಪೂರ್ಣಗೊಂಡ ಬಳಿಕ, ಎಸ್‌ಬಿಆರ್ಟಿ ಸಂಸ್ಥೆಯು ಶೇಕಡ 30ರಷ್ಟು ಮೂಲಗಳ ರೂಢಿಯನ್ನು ನೇರವಾಗಿ ಭಾರತದ ಕಾರ್ಯಾಚರಣೆಯಲ್ಲಿ ವಾರ್ಷಿಕವಾಗಿ ತೊಡಗಿಸಿಕೊಳ್ಳಬೇಕಾಗುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## ನಿರ್ಮಾಣ ಅಭಿವೃದ್ಧಿ

- ತಿದ್ದುಪಡಿಯಲ್ಲಿ ಸ್ಪಷ್ಟಪಡಿಸಿರುವಂತೆ, ರಿಯಲ್ ಎಸ್ಟೇಟ್ ಬ್ರೋಕಿಂಗ್ ಸೇವೆಯು ರಿಯಲ್ ಎಸ್ಟೇಟ್ ಉದ್ಯಮದ ವಹಿವಾಟಿನಲ್ಲಿ ಸೇರುವುದಿಲ್ಲ. ಆದ್ದರಿಂದ ಇದರಲ್ಲಿ ಶೇಕಡ 100ರಷ್ಟು ಎಫ್‌ಡಿಐ ಹೂಡಿಕೆಗೆ ಅವಕಾಶವಿದ್ದು, ಸ್ವಯಂಚಾಲಿತ ಮಾರ್ಗದಲ್ಲಿ ಈ ಹೂಡಿಕೆ ಮಾಡಲು ಅವಕಾಶವಿದೆ.

## ವಿಮಾನಯಾನದಲ್ಲಿ ಎಫ್‌ಡಿಐ

- ವಿದೇಶಿ ವಿಮಾನಯಾನ ಸಂಸ್ಥೆಗಳು ಭಾರತೀಯ ವಿಮಾನಯಾನ ಕಂಪನಿಗಳಲ್ಲಿ ಹೂಡಿಕೆಗೆ ಅವಕಾಶ ನೀಡಲಾಗುತ್ತಿದೆ. ಶೆಡ್ಯೂಲ್ಡ್ ಹಾಗು ಅನ್ ಶೆಡ್ಯೂಲ್ಡ್ ಸಾರಿಗೆ ಸೇವೆಯಲ್ಲಿ ತೊಡಗಿಸಿಕೊಂಡಿರುವ ಭಾರತೀಯ ವಿಮಾನಯಾನ ಕಂಪನಿಗಳಲ್ಲಿ ಶೇಕಡ 49ರಷ್ಟು ಹೂಡಿಕೆ ಮಾಡಬಹುದಾಗಿದೆ. ಆದರೆ ಇದಕ್ಕೆ ಸರ್ಕಾರ ಒಪ್ಪಿಗೆ ನೀಡಬೇಕಾಗುತ್ತದೆ. ಆದರೆ ಇದು ಏರ್ ಇಂಡಿಯಾಗೆ ಅನ್ವಯಿಸುವುದಿಲ್ಲ. ಅಂದರೆ ವಿದೇಶಿ ಕಂಪನಿಗಳು ಏರ್ ಇಂಡಿಯಾದಲ್ಲಿ ಹೂಡಿಕೆ ಮಾಡುವಂತಿಲ್ಲ. ಇದೀಗ ಹೊಸ ತಿದ್ದುಪಡಿ ಅನ್ವಯ ಏರ್ ಇಂಡಿಯಾದಲ್ಲಿ ಸರ್ಕಾರಿ ಅನುಮೋದನೆ ಪಡೆದು ಶೇಕಡ 49ರಷ್ಟು ಬಂಡವಾಳವನ್ನು ಹೂಡಿಕೆ ಮಾಡಲು ಅವಕಾಶವಿದೆ.

## ವಿದ್ಯುತ್ ವಿನಿಮಯ

- ಪ್ರಸ್ತುತ ಎಫ್‌ಡಿಐ ನೀತಿಯ ಅನ್ವಯ ಶೇಕಡ 49ರಷ್ಟು ಎಫ್‌ಡಿಐಯನ್ನು ವಿದ್ಯುತ್ ವಿನಿಮಯ ಕ್ಷೇತ್ರದಲ್ಲಿ ಹೂಡಿಕೆ ಮಾಡಲು ಅವಕಾಶವಿದೆ. ಆದರೆ ಇದು ಕೇಂದ್ರೀಯ ವಿದ್ಯುತ್ ನಿಯಂತ್ರಣ ಆಯೋಗದಲ್ಲಿ ನೋಂದಣಿ ಮಾಡಿಸಿಕೊಂಡ ಕಂಪನಿಗಳಾಗಿರಬೇಕು. ಸ್ವಯಂಚಾಲಿತ ಮಾರ್ಗದ ಮೂಲಕ ಇದನ್ನು ನಿರ್ವಹಿಸಲು ಅವಕಾಶವಿದೆ. ಆದಾಗ್ಯೂ ಪೋರ್ಟ್‌ಫೋಲಿಯೊ ಹೂಡಿಕೆದಾರರು ಹಾಗೂ ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಖರೀದಿಯನ್ನು ದ್ವಿತೀಯ ಹಂತದ ಮಾರುಕಟ್ಟೆಗೆ ಸೀಮಿತಗೊಳಿಸಲಾಗುತ್ತದೆ. ಹೊಸ ತಿದ್ದುಪಡಿಯ ಅನ್ವಯ, ಎಫ್‌ಐಐಗಳು ಹಾಗೂ ಎಫ್‌ಪಿಐಗಳು ವಿದ್ಯುತ್ ವಿನಿಮಯ ಕ್ಷೇತ್ರದಲ್ಲಿ ಪ್ರಾಥಮಿಕ ಮಾರುಕಟ್ಟೆಯ ಮೂಲಕ ಹೂಡಿಕೆ ಮಾಡಲು ಅವಕಾಶವಿರುತ್ತದೆ.

## ವೈದ್ಯಕೀಯ ಸಾಧನಗಳು

- ಅನುಮೋದನೆ ಪಡೆಯಲಾದ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ನೀತಿಯು ವೈದ್ಯಕೀಯ ಸಾಧನಗಳ ವ್ಯಾಖ್ಯೆಯನ್ನು ಬದಲಿಸಲಿದೆ. ಈ ಮೊದಲು ಜಾರಿಯಲ್ಲಿದ್ದ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ನೀತಿಯಲ್ಲಿ ಔಷಧ ವಲಯದಲ್ಲಿ ಬರುವ ವೈದ್ಯಕೀಯ ಸಾಧನ ಉದ್ಯಮದಲ್ಲಿನ

ಹೂಡಿಕೆಗೆ ಡ್ರಗ್ಸ್ ಅಂಡ್ ಕಾಸ್ಮೆಟಿಕ್ಸ್ ಕಾಯ್ದೆಯಲ್ಲಿ ತರುವ ತಿದ್ದುಪಡಿಗೆ ಅನುಗುಣವಾಗಿರಬೇಕು. ಆದರೆ ಇದೀಗ ಡ್ರಗ್ಸ್ ಅಂಡ್ ಕಾಸ್ಮೆಟಿಕ್ಸ್ ಕಾಯ್ದೆಯ ಪ್ರಸ್ತಾವವನ್ನು ತೆಗೆದುಹಾಕಲಾಗಿದೆ.

## 43. ರಾಷ್ಟ್ರೀಯ ಟ್ರಸ್ಟ್ ಅಧ್ಯಕ್ಷರು ಮತ್ತು ಸದಸ್ಯರಿಗೆ ನಿರ್ದಿಷ್ಟ ಕಾಲಾವಧಿ ನಿಗದಿಗೆ ಸಂಪುಟದ ಸಮ್ಮತಿ

### ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು, ರಾಷ್ಟ್ರೀಯ ಟ್ರಸ್ಟ್ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರ ಕಾಲಾವಧಿಯನ್ನು 3 ವರ್ಷಗಳಿಗೆ ನಿಗದಿ ಪಡಿಸಲು ಆಟಿಸಂ, ಸೆರೆಬ್ರಲ್ ಪ್ಲಾಸಿ, ಮಾನಸಿಕ ಅಸ್ವಸ್ಥತೆ ಮತ್ತು ಬಹು ಅಂಗಾಂಗ ನ್ಯೂನತೆ ಇರುವ ವ್ಯಕ್ತಿಗಳ ಕಲ್ಯಾಮ ಕುರಿತ ರಾಷ್ಟ್ರೀಯ ಟ್ರಸ್ಟ್ ಕಾಯಿದೆ 1999ರ ಸೆಕ್ಷನ್ 4 (1) ಮತ್ತು ಸೆಕ್ಷನ್ 5 (1)ಕ್ಕೆ ತಿದ್ದುಪಡಿ ಮಾಡುವ ಪ್ರಸ್ತಾವನೆಗೆ ತನ್ನ ಅನುಮೋದನೆ ನೀಡಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಮುಖ್ಯ ಅಂಶಗಳು

- ರಾಷ್ಟ್ರೀಯ ಟ್ರಸ್ಟ್ ಕಾಯಿದೆ 1999ರ ಸೆಕ್ಷನ್ 4(1) ರಾಷ್ಟ್ರೀಯ ಟ್ರಸ್ಟ್ ಮಂಡಳಿಯ ಅಧ್ಯಕ್ಷರು ಅಥವಾ ಸದಸ್ಯರಿಗೆ, ಅವರ ಉತ್ತರಾಧಿಕಾರಿಯನ್ನು ಸೂಕ್ತವಾಗಿ ನೇಮಕ ಮಾಡುವ ತನಕ ನಿಗದಿತ ಮೂರು ವರ್ಷಗಳ ಅವಧಿಯ ನಂತರವೂ ಅಧಿಕಾರದಲ್ಲಿ ಮುಂದುವರಿಯಲು ಅವಕಾಶ ಕೊಡುತ್ತದೆ.
- ಒಂದೊಮ್ಮೆ ಅಧ್ಯಕ್ಷರು ರಾಜೀನಾಮೆ ಕೊಟ್ಟರೂ, ಕಾಯಿದೆಯ ಸೆಕ್ಷನ್ 5 (1) ಸರ್ಕಾರದಿಂದ ಅವರ ಉತ್ತರಾಧಿಕಾರಿ ನೇಮಕಗೊಳ್ಳುವ ತನಕ ಕಚೇರಿಯಲ್ಲಿ ಮುಂದುವರಿಯಲು ಅವಕಾಶ ನೀಡುತ್ತದೆ. ಕಾಯಿದೆಯಲ್ಲಿನ ಮೇಲಿನ ಶಬ್ದಪ್ರಯೋಗಗಳ ಅವಕಾಶಗಳು, ಸೂಕ್ತ

ಉತ್ತರಾಧಿಕಾರಿಗಳು ಸಿಗದೆ ಸೂಕ್ತವಾದ ವ್ಯಕ್ತಿಯ ನೇಮಕಾತಿಯಾಗದ ಕಾರಣ ಅಧ್ಯಕ್ಷರು ಅನಿರ್ದಿಷ್ಟಾವಧಿಗೆ ಮುಂದುವರಿಯಲು ಕಾರಣವಾಗಿತ್ತು.

- ಕಾಯಿದಿಯ ಉದ್ದೇಶಿತ ತಿದ್ದುಪಡಿಗಳು, ಇಂಥ ಪರಿಸ್ಥಿತಿ ಬಾರದಂತೆ ತಪ್ಪಿಸುತ್ತವೆ ಮತ್ತು ದೀರ್ಘಕಾಲ ಅದೇ ಹುದ್ದೆಯಲ್ಲಿ ಯಾವುದೇ ಸ್ಥಾನಮಾನದಿಂದ ಮುಂದುವರಿಯುವ ಅವಕಾಶವನ್ನು ತಪ್ಪಿಸುತ್ತದೆ.

## ರಾಷ್ಟ್ರೀಯ ಟ್ರಸ್ಟ್

- ಇದು ಶಾಸನಬದ್ಧ ಸಂಸ್ಥೆಯಾಗಿದ್ದು, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಂಗವಿಕಲ ವ್ಯಕ್ತಿಗಳ ಸಬಲೀಕೃಣ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತದೆ. ಇದರ ಮುಖ್ಯವಾದ ಕಾರ್ಯಸೂಚಿಯೆಂದರೆ, ಕಾನೂನು ಹಾಗೂ ಕಲ್ಯಾಣಸೇವೆಯನ್ನು ಒದಗಿಸುವುದು.

- ಇದರ ಮೂಲಭೂತ ಉದ್ದೇಶ, ಅಂಗವಿಕಲರ ಸಬಲೀಕರಣಕ್ಕೆ ಪೂರಕವಾದ ವಾತಾವರಣವನ್ನು ಸೃಷ್ಟಿಸುವುದು ಹಾಗೂ ಅಂಗವಿಕಲರಿಗೆ ಅವಕಾಶಗಳನ್ನು ಸೃಷ್ಟಿಸುವುದು. ಇದಕ್ಕಾಗಿ ಸಮಗ್ರ ಬೆಂಬಲ ವ್ಯವಸ್ಥೆಯನ್ನು ಒದಗಿಸುವುದು ಹಾಗೂ ಸಮಾಜದ ಎಲ್ಲರ ಪಾಲ್ಗೊಳ್ಳುವಿಕೆಯನ್ನೊಳಗೊಂಡ ಅಭಿವೃದ್ಧಿಗೆ ಸಹಕಾರ ನೀಡುವುದು.

## ರಾಷ್ಟ್ರೀಯ ಟ್ರಸ್ಟ್ ಉದ್ದೇಶಗಳು

- ಅಂಗವಿಕಲರ ಸಶಕ್ತೀಕರಣ ಮತ್ತು ಸಬಲೀಕರಣ. ಈ ಮೂಲಕ ಅವರು ಸ್ವತಂತ್ರವಾಗಿ ಮತ್ತು ತಮ್ಮದೇ ಸಮುದಾಯದಲ್ಲಿ ಜೀವನ ಸಾಗಿಸಲು ಅವಕಾಶ ಮಾಡಿಕೊಡುವುದು.
- ಅಂಗವಿಕಲರಿಗೂ ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪಾಲ್ಗೊಳ್ಳುವಿಕೆಗೆ ಅವಕಾಶವನ್ನು ಮಾಡಿಕೊಡುವುದು.

- ಅಂಗವಿಕಲರ ನೋಂದಾಯಿತ ಸಂಸ್ಥೆಗಳಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವುದು ಹಾಗೂ ಬೆಂಬಲ ನೀಡುವುದು.
- ಅಂಗವಿಕಲರ ಪೋಷಕರು ಹಾಗೂ ಟ್ರಸ್ಟಿಗಳ ನೇಮಕ ಪ್ರಕ್ರಿಯೆಯನ್ನು ರೂಪಿಸುವುದು ಹಾಗೂ ಅವರ ಸಬಲೀಕರಣಕ್ಕೆ ನೆರವಾಗುವುದು.

## 44. ಚಿತ್ರಮಂದಿರಗಳಲ್ಲಿ ರಾಷ್ಟ್ರಗೀತೆ ಕಡ್ಡಾಯವಲ್ಲ: ಸುಪ್ರೀಂಕೋರ್ಟ್

### ಪ್ರಮುಖ ಸುದ್ದಿ

- ಸಿನಿಮಾ ಆರಂಭಕ್ಕೆ ಮೊದಲು ಚಿತ್ರಮಂದಿರಗಳಲ್ಲಿ ರಾಷ್ಟ್ರಗೀತೆಯ ಧ್ವನಿಮುದ್ರಿಕೆ ಪ್ರಸಾರ ಐಚ್ಛಿಕ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಚಲನಚಿತ್ರ ಆರಂಭಕ್ಕೆ ಮೊದಲು ರಾಷ್ಟ್ರಗೀತೆ ಕಡ್ಡಾಯ ಎಂದು 2016ರ ನವೆಂಬರ್ 30ರಂದು ನೀಡಿದ್ದ ತೀರ್ಪನ್ನು ಈ ಮೂಲಕ ಮಾರ್ಪಡಿಸಿದೆ.

### ಮುಖ್ಯ ಅಂಶಗಳು

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಈ ವಿಚಾರದಲ್ಲಿ ನಿರ್ಧಾರ ಕೈಗೊಳ್ಳುವುದಕ್ಕಾಗಿ ಕೇಂದ್ರ ಸರ್ಕಾರವು 12 ಸದಸ್ಯರ ಅಂತರಸಚಿವಾಲಯ ಸಮಿತಿಯೊಂದನ್ನು ರಚಿಸಿದೆ. ಚಿತ್ರಮಂದಿರಗಳಲ್ಲಿ ರಾಷ್ಟ್ರಗೀತೆ ಧ್ವನಿಮುದ್ರಿಕೆ ಪ್ರಸಾರಕ್ಕೆ ಸಂಬಂಧಿಸಿ ಈ ಸಮಿತಿ ನಿರ್ಧಾರ ಕೈಗೊಳ್ಳಲಿದೆ ಎಂದು ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ನೇತೃತ್ವದ ಪೀಠ ಹೇಳಿದೆ.

- ‘ಜನರು ತಮ್ಮ ದೇಶಪ್ರೇಮವನ್ನು ಸದಾ ಪ್ರದರ್ಶಿಸಬೇಕಾದ ಅಗತ್ಯ ಇಲ್ಲ. ರಾಷ್ಟ್ರಗೀತೆ ಹಾಕಿದಾಗ ವ್ಯಕ್ತಿ ಎದ್ದು ನಿಲ್ಲದಿದ್ದರೆ ಆತನಿಗೆ ಅಥವಾ ಅವಳಿಗೆ ದೇಶಪ್ರೇಮ ಕಡಿಮೆ ಇದೆ ಎಂದು ಹೇಳಲಾಗದು’ ಎಂದು ಕಳೆದ ಅಕ್ಟೋಬರ್‌ನಲ್ಲಿ ಸುಪ್ರೀಂ ಕೋರ್ಟ್ ಹೇಳಿತ್ತು. ಅದಾದ ಬಳಿಕ, ಈ

ಸಮಿತಿಯನ್ನು ಕೇಂದ್ರ ಸರ್ಕಾರ ರಚಿಸಿತ್ತು.

- ‘ದೇಶದಲ್ಲಿ ಅನೈತಿಕ ಪೊಲೀಸ್‌ಗಿರಿಯ ಅಗತ್ಯ ಇಲ್ಲ’ ಎಂದು ನಂತರದ ವಿಚಾರಣೆಯಲ್ಲಿ ಸುಪ್ರೀಂ ಕೋರ್ಟ್ ಹೇಳಿತ್ತು. ಅಷ್ಟಲ್ಲದೆ, ‘ಚಿತ್ರಮಂದಿರಕ್ಕೆ ಬರುವ ಜನರು ಟಿ–ಶರ್ಟ್ ಅಥವಾ ಶಾರ್ಟ್ಸ್ (ಚಡ್ಡಿ) ಧರಿಸಬಾರದು. ಇಂತಹ ದಿರಿಸಿನಿಂದ ರಾಷ್ಟ್ರಗೀತೆಗೆ ಅವಮಾನವಾಗುತ್ತದೆ ಎಂದೂ ಸರ್ಕಾರ ಹೇಳಬಹುದು’ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿತ್ತು.

- ‘ಜನರು ಮನರಂಜನೆಗಾಗಿ ಚಿತ್ರಮಂದಿರಕ್ಕೆ ಬರುತ್ತಾರೆ. ಸಮಾಜಕ್ಕೆ ಮನರಂಜನೆ ಅಗತ್ಯವಿದೆ. ಚಿತ್ರಮಂದಿರದಲ್ಲಿ ರಾಷ್ಟ್ರಗೀತೆ ಪ್ರಸಾರವಾಗುವಾಗ ಎದ್ದು ನಿಲ್ಲುವ ಮೂಲಕ ಜನರು ತಮ್ಮ ದೇಶಭಕ್ತಿಯನ್ನು ಸಾಬೀತು ಮಾಡಬೇಕಿಲ್ಲ. ಕೇಂದ್ರ ಸರ್ಕಾರವು ತನ್ನ ಕಾರ್ಯಸೂಚಿಯನ್ನು ಜಾರಿಗೆ ತರಲು ನ್ಯಾಯಾಲಯವನ್ನು ಬಳಸಿಕೊಳ್ಳಲು ಅವಕಾಶ ಕೊಡುವುದಿಲ್ಲ’ ಎಂದು ಕಳೆದ ಅಕ್ಟೋಬರ್ 24ರಂದು ನಡೆದ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಹೇಳಿತ್ತು.

- ಸಿನಿಮಾ ಪ್ರದರ್ಶನಕ್ಕೆ ಮೊದಲು ರಾಷ್ಟ್ರಗೀತೆಯನ್ನು ಕಡ್ಡಾಯ ಮಾಡಬೇಕು ಎಂದು ಕೋರಿ ಶ್ಯಾಮ ನಾರಾಯಣ್ ಚೌಕ್ಸೆ ಎಂಬವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿತ್ತು.

- ಬಳಿಕ, ನವೆಂಬರ್ 30ರಂದು ‘ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗೆ ಗೌರವ ಸಲ್ಲಿಸುವುದು ವ್ಯಕ್ತಿಯು ತಾಯ್ನಾಡಿನ ಬಗ್ಗೆ ಹೊಂದಿರುವ ಪ್ರೇಮವನ್ನು ತೋರಿಸುತ್ತದೆ’ ಎಂದು ಹೇಳಿತ್ತು.

**ಸಮಿತಿಗೆ ಹೊಣೆ**

- ರಾಷ್ಟ್ರಗೀತೆ ಹಾಡುವುದು ಮತ್ತು ನುಡಿಸುವುದಕ್ಕೆ ಸಂಬಂಧಿಸಿದ ಎಲ್ಲ ಅಂಶಗಳನ್ನೂ ಸಮಿತಿ ಪರಿಶೀಲನೆಗೆ ಒಳಪಡಿಸಬೇಕು

- ಈ ವಿಚಾರಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದವರ ಅಭಿಪ್ರಾಯವನ್ನು ಸಮಿತಿ ಕೇಳಬೇಕು

- ಚಿತ್ರಮಂದಿರದಲ್ಲಿ ರಾಷ್ಟ್ರಗೀತೆ ಧ್ವನಿಮುದ್ರಿಕತೆ ಪ್ರಸಾರ ಮಾಡುವಾಗ ಎದ್ದು ನಿಲ್ಲುವುದರಿಂದ ಅಂಗವಿಲಕಲರಿಗೆ ನೀಡಿದ ವಿನಾಯಿತಿ ಸಮಿತಿಯ ಅಂತಿಮ ವರದಿಯವರೆಗೆ ಮುಂದುವರಿಯಲಿದೆ

- ರಾಷ್ಟ್ರಗೌರವಕ್ಕೆ ಅವಮಾನ ತಡೆ ಕಾಯ್ದೆ 1971ಕ್ಕೆ ತಿದ್ದುಪಡಿ ಸೂಚಿಸಲು 12 ಸದಸ್ಯರ ಸಮಿತಿ ರಚಿಸಲಾಗಿದೆ

- ಸಮಿತಿಯು ಆರು ತಿಂಗಳಲ್ಲಿ ವರದಿ ನೀಡಲಿದೆ ಎಂದು ಕೋರ್ಟ್‌ಗೆ ಸರ್ಕಾರ ತಿಳಿಸಿದೆ.

## 45. ತಂಬಾಕು ಉತ್ಪನ್ನಗಳ ಪ್ಯಾಕ್ ಮೇಲೆ 85% ಎಚ್ಚರಿಕೆ ಸೂಚನೆ: ರಾಜ್ಯ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ತಡೆ

### ಪ್ರಮುಖ ಸುದ್ದಿ

- ಸಿಗರೇಟ್ ಸೇರಿದಂತೆ ಎಲ್ಲಾ ತಂಬಾಕು ಉತ್ಪನ್ನಗಳ ಪ್ಯಾಕ್‌ಗಳ ಮೇಲೆ 85% ಚಿತ್ರ ಸಮೇತ ಎಚ್ಚರಿಕೆ ಸಂದೇಶ ಮುದ್ರಿಸುವ ಅಗತ್ಯವಿಲ್ಲವೆಂದು ರಾಜ್ಯ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿದೆ.

ಮುಖ್ಯ ಅಂಶಗಳು

- ಜನರ ಆರೋಗ್ಯವೇ ಪ್ರಧಾನ ಎಂದು ಅಭಿಪ್ರಾಯಪಟ್ಟಿರುವ ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ಅವರ ನೇತೃತ್ವದ ಪೀಠ, "ಆರೋಗ್ಯದ ವಿಚಾರಕ್ಕೆ ಬಂದಾಗ ವ್ಯಾಪಾರ ಉದ್ದೇಶಗಳನ್ನು ಬದಿಗಿರಿಸಬೇಕು. ಅದರಲ್ಲೂ ವ್ಯಕ್ತಿಯ ಆರೋಗ್ಯವನ್ನು ಸಂಪೂರ್ಣ ನಾಶಪಡಿಸಬಲ್ಲ ವಿಚಾರಕ್ಕೆ ಬಂದಾಗ, ಈ ನಿಯಮ ಮತ್ತಷ್ಟು ಪ್ರಾಶಸ್ತ್ಯ ಪಡೆದುಕೊಳ್ಳುತ್ತದೆ," ಎಂದು ಹೇಳಿತು.

- ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ರಾಜ್ಯ ಹೈಕೋರ್ಟ್ ಆದೇಶಕ್ಕೆ ತಕ್ಷಣವೇ ತಡೆ ನೀಡಬೇಕು ಎಂದು ಕೇಂದ್ರ ಸರಕಾರದ ಪರವಾಗಿ ಅಟಾರ್ನಿ ಜನರಲ್ ಕೆ ಕೆ ವೇಣುಗೋಪಾಲ್ ಅವರು ವಿಚಾರಣೆ ವೇಳೆ ನ್ಯಾಯಾಲಯಕ್ಕೆ ಮನವಿ ಮಾಡಿದರು. ಇದನ್ನು ನ್ಯಾಯಪೀಠ ಪುರಸ್ಕರಿಸಿತು.

- "ಸಿಗರೇಟ್ ಮತ್ತು ಇತರ ತಂಬಾಕು ಉತ್ಪನ್ನಗಳ (ಜಾಹಿರಾತು ನಿಷೇಧ ಹಾಗೂ ವ್ಯಾಪಾರ, ಉತ್ಪಾದನೆ ಮತ್ತು ಪೂರೈಕೆ ನಿಯಂತ್ರಣ) ಕಾಯಿದೆ 2003ರ ಉದ್ದೇಶ ಮತ್ತು ನಿಯಮಗಳನ್ನು ಗಮನಿಸುವುದಾದರೆ ಮತ್ತು ಈ ಸಂಬಂಧ ಸರಕಾರ ಕೈಗೊಂಡ ಕ್ರಮಗಳನ್ನು ಪರಿಗಣಿಸುವುದಾದರೆ ಕರ್ನಾಟಕ ಹೈಕೋರ್ಟ್‌ನ ತೀರ್ಪಿಗೆ ತಡೆ ನೀಡುವುದೇ ಸೂಕ್ತ ಎಂದು ನಮ್ಮ ಭಾವನೆ," ಎಂದು ನ್ಯಾಯಪೀಠ ಹೇಳಿತು.

- ಮನವಿ ತಿರಸ್ಕೃತ: ಇದೇ ವೇಳೆ 85% ಚಿತ್ರ ಸಮೇತ ಎಚ್ಚರಿಕೆ ಮುದ್ರಣದಿಂದ ವ್ಯಾಪಾರಕ್ಕೆ ಹೊಡೆತ ಬೀಳುತ್ತದೆ ಎಂದು ತಂಬಾಕು ಕಂಪನಿಗಳ ವಕೀಲರು ಮಂಡಿಸಿದ ವಾದವನ್ನು ನ್ಯಾಯಪೀಠ ಪುರಸ್ಕರಿಸಲಿಲ್ಲ.

- ''ಇಂತಹ ಕ್ರಮದಿಂದ ವ್ಯಾಪಾರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ತಂಬಾಕು ಕಂಪನಿ ಪರ ವಕೀಲರು ಹೇಳಿದ್ದಾರಾದರೂ, ಸಾರ್ವಜನಿಕ ಆರೋಗ್ಯ ಮತ್ತು ಬಹುಜನ ಹಿತಾಸಕ್ತಿಯೇ ನಮ್ಮ ಮೊದಲ ಆದ್ಯತೆಯಾಗಿರುವುದಿಂದ ವಕೀಲರ ವಾದವನ್ನು ಪುರಸ್ಕರಿಸಲು ಸಾಧ್ಯವಿಲ್ಲ. ಇದರಿಂದ ಜರನ ಆರೋಗ್ಯದ ಮೇಲೆ ಗಂಭೀರ ಪರಿಣಾಮವಾಗುತ್ತದೆ ಎಂಬ ವಿಚಾರ ಅವರಿಗೆ ಗೊತ್ತಿರಬೇಕು,'' ಎಂದು ನ್ಯಾಯಪೀಠ ಹೇಳಿತು. ಪ್ರಕರಣದ ಮುಂದಿನ ವಿಚಾರಣೆಯನ್ನು ಮಾ.12ಕ್ಕೆ ಮುಂದೂಡಲಾಯಿತು.

### ಕರ್ನಾಟಕ ಹೈಕೋರ್ಟ್ ಹೇಳಿದ್ದೇನು?

- ತಂಬಾಕು ಉತ್ಪನ್ನಗಳ ಪ್ಯಾಕ್‌ಗಳ ಮೇಲೆ ಶೇ. 85ರಷ್ಟು ಚಿತ್ರ ಸಮೇತ ಎಚ್ಚರಿಕೆ ಮುದ್ರಿಸಬೇಕು ಎಂಬ ಕೇಂದ್ರ ಸರಕಾರದ ನಿಯಮವನ್ನು ಕರ್ನಾಟಕ ಹೈಕೋರ್ಟ್ ಕಳೆದ ತಿಂಗಳು ರದ್ದುಪಡಿಸಿತ್ತು. ಈ ನಿಯಮಕ್ಕೆ ಯಾವುದೇ ವೈಜ್ಞಾನಿಕ ಆಧಾರಗಳಿಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿತ್ತು. ಅಲ್ಲದೆ, ಇಂತಹ ಚಿತ್ರಸಮೇತ ಎಚ್ಚರಿಕೆಯನ್ನು 85%ನಿಂದ 40%ಗೆ ಇಳಿಸಬಹುದೆಂದು ಕೋರ್ಟ್ ಹೇಳಿತ್ತು.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 46. ಇಸ್ರೋ ಅಧ್ಯಕ್ಷರಾಗಿ ಹಿರಿಯ ವಿಜ್ಞಾನಿ ಶಿವನ್

### ಪ್ರಮುಖ ಸುದ್ದಿ

- ಭಾರತೀಯ ಬಾಹ್ಯಾಕಾಶ ಸಂಸ್ಥೆ ಅಧ್ಯಕ್ಷರಾಗಿ ಹಿರಿಯ ವಿಜ್ಞಾನಿ ಶಿವನ್ ಕೆ. ನೇಮಕಗೊಂಡಿದ್ದಾರೆ.
- ಕಿರಣ್ ಕುಮಾರ್ ಅವರ ಸ್ಥಾನಕ್ಕೆ ಶಿವನ್ ಅವರನ್ನು ನೇಮಕ ಮಾಡಿ ಕೇಂದ್ರ ಸರಕಾರ ಆದೇಶ ಹೊರಡಿಸಿದೆ.

- ಸದ್ಯ ವಿಕ್ರಮ್ ಸಾರಾಭಾಯಿ ಅಂತರಿಕ್ಷ ಕೇಂದ್ರದ ನಿರ್ದೇಶಕರಾಗಿರುವ ಶಿವನ್, ಜನವರಿ 12ರಂದು ಅಧಿಕಾರ ವಹಿಸಿಕೊಳ್ಳಲಾಗಿದೆ.
- ಮದ್ರಾಸ್ ಐಐಟಿಯಲ್ಲಿ 1980ರಲ್ಲಿ ಏರೋನಾಟಿಕಲ್ ಎಂಜಿನಿಯರಿಂಗ್ ಪದವಿ ಪಡೆದಿರುವ ಶಿವನ್ ನಂತರ ಬೆಂಗಳೂರಿನ ಐಐಎಸ್‌ಸಿಯಲ್ಲಿ ಏರೋಸ್ಪೇಸ್ ಎಂಜನಿಯರಿಂಗ್ ಪದವಿ ಪಡೆದಿದ್ದಾರೆ.
- ಐಐಟಿ ಬಾಂಬೆಯಲ್ಲಿ 2006ರಲ್ಲಿ ಏರೋಸ್ಪೇಸ್ ಎಂಜನಿಯರಿಂಗ್‌ನಲ್ಲಿ ಪಿಎಚ್‌ಡಿ ಕೂಡ ಪಡೆದುಕೊಂಡಿದ್ದಾರೆ.
- ಅವರ ಹಲವಾರು ಲೇಖನಗಳು ಪ್ರಕಟಗೊಂಡಿದ್ದು, ಹಲವಾರು ಪ್ರಶಸ್ತಿ, ಪುರಸ್ಕಾರಗಳಿಗೂ ಭಾಜನರಾಗಿದ್ದಾರೆ.

## 47. ಸುಪ್ರೀಂ ಕೋರ್ಟ್‌ಗೆ ಮತ್ತೊಬ್ಬರು ಮಹಿಳಾ ನ್ಯಾಯಮೂರ್ತಿ

### ಪ್ರಮುಖ ಸುದ್ದಿ

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಹಿರಿಯ ವಕೀಲರಾದ ಇಂದು ಮಲ್ಹೋತ್ರಾ ಅವರನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಹುದ್ದೆಗೆ ಕೊಲಿಜಿಯಂ ಶಿಫಾರಸು ಮಾಡಿದೆ. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಹುದ್ದೆಗೆ ನೇರವಾಗಿ ನೇಮಕವಾಗಲಿರುವ ಮೊದಲ ಮಹಿಳೆ ಎಂಬ ಹಿರಿಮೆಗೆ ಇಂದು ಮಲ್ಹೋತ್ರಾ ಪಾತ್ರವಾಗಲಿದ್ದಾರೆ .

### ಮುಖ್ಯ ಅಂಶಗಳು

- ಇಂದು ಅವರು ನೇಮಕವಾದರೆ ಸ್ವಾತಂತ್ರ್ಯಾನಂತರ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಹುದ್ದೆಗೇರಿದ ಏಳನೇ ಮಹಿಳೆ ಎನಿಸಿಕೊಳ್ಳಲಿದ್ದಾರೆ. ಉಳಿದವರೆಲ್ಲವರೂ ಹೈಕೋರ್ಟ್‌ಗಳಿಂದ ಬಡ್ತಿಯಾಗಿ ಬಂದವರು. ಈಗ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಕೆಲಸ ಮಾಡುತ್ತಿರುವ

ಏಕೈಕ ಮಹಿಳೆ ಆರ್. ಭಾನುಮತಿ. ಇಂದು ಅವರನ್ನು 2007ರಲ್ಲಿ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲೆ ಎಂದು ನಿಯೋಜಿಸಲಾಗಿತ್ತು.

- 1950ರಲ್ಲಿ ಸುಪ್ರೀಂ ಕೋರ್ಟ್ ಸ್ಥಾಪನೆಯಾಯಿತು. 67 ವರ್ಷಗಳ ಇತಿಹಾಸದಲ್ಲಿ ಎರಡು ಬಾರಿ ಮಾತ್ರ ಸುಪ್ರೀಂ ಕೋರ್ಟ್‌ನಲ್ಲಿ ಇಬ್ಬರು ಮಹಿಳಾ ನ್ಯಾಯಮೂರ್ತಿಗಳಿದ್ದರು. ಜ್ಞಾನ್ ಸುಧಾ ಮತ್ತು ರಂಜನಾ ಅವರು ಜತೆಯಾಗಿ ಕೆಲಸ ಮಾಡಿದ್ದರು. ಹಾಗೆಯೇ ರಂಜನಾ ಮತ್ತು ಭಾನುಮತಿ ಅವರೂ ಒಂದೇ ಸಮಯದಲ್ಲಿ ನ್ಯಾಯಮೂರ್ತಿಗಳಾಗಿದ್ದರು.

### ಮೊದಲ ಆರು ಮಹಿಳೆಯರು

- ಮಹಿಳಾ ನ್ಯಾಯಮೂರ್ತಿ ನೇಮಕವಾದ ವರ್ಷ
- ಎಂ. ಫಾತಿಮಾ ಬೀವಿ 1950
- ಸುಜಾತಾ ವಿ. ಮನೋಹರ್ 1994
- ರುಮಾ ಪಾಲ್ 2000
- ಜ್ಞಾನ್ ಸುಧಾ ಮಿಶ್ರಾ 2010
- ರಂಜನಾ ಪ್ರಕಾಶ್ ದೇಸಾಯಿ 2011
- ಆರ್. ಭಾನುಮತಿ 2014

## 48. ಇಸ್ರೊದಿಂದ 100ನೇ ಉಪಗ್ರಹ ಉಡಾವಣೆ ಯಶಸ್ವಿ

### ಪ್ರಮುಖ ಸುದ್ದಿ

- ಹಲವು ಐತಿಹಾಸಿಕ ದಾಖಲೆಗಳ ಮೂಲಕ ವಿಶ್ವದ ಗಮನ ಸೆಳೆದಿರುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೊ 100ನೇ ಉಪಗ್ರಹವನ್ನು ಯಶಸ್ವಿಯಾಗಿ

ಉಡಾವಣೆಗೊಳಿಸಿದೆ. ಒಂದೇ ಬಾರಿಗೆ 31 ಉಪಗ್ರಹಗಳನ್ನು ಕಕ್ಷೆಗಳಿಗೆ ಸೇರಿಸುವ ಇಸ್ರೊದ ಸಾಹಸ ಫಲಪ್ರದವಾಗಿದೆ.

ಮುಖ್ಯ ಅಂಶಗಳು

- ಕಾರ್ಟೋಸ್ಯಾಟ್ -2 ಸೇರಿದಂತೆ ದೇಶದ ಮೂರು ಹಾಗೂ 28 ವಿದೇಶಿ ಉಪಗ್ರಹಗಳನ್ನು (ಒಟ್ಟು ತೂಕ 1323 ಕೆ.ಜಿ.) ಹೊತ್ತ ಪಿಎಸ್‌ಎಲ್‌ವಿ-ಸಿ40 ರಾಕೆಟ್ ಆಂಧ್ರ ಪ್ರದೇಶದ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಉಡ್ಡಯನ ನೆಲೆಯಿಂದ ನಭಕ್ಕೆ ಕಳಿಸಲಾಯಿತು. 44.4 ಮೀ. ಎತ್ತರವಿರುವ ರಾಕೆಟ್ ಮೂಲಕ ಉಪಗ್ರಹಗಳನ್ನು ಉಡಾವಣೆಗೊಳಿಸಲಾಯಿತು.

- ಭೂ ಪರಿವೀಕ್ಷಣೆ ಉಪಗ್ರಹ 'ಕಾರ್ಟೋಸ್ಯಾಟ್-2' ಈ ಬಾರಿ ಉಡಾವಣೆಗೊಂಡ ಭಾರತದ ಪ್ರಮುಖ ಉಪಗ್ರಹ. ಇದು ಈ ಸರಣಿಯ 3ನೇ ಸ್ಯಾಟಲೈಟ್. ಅತ್ಯಧಿಕ ರೆಸಲ್ಯೂಷನ್‌ನ ಸುಸ್ಪಷ್ಟ ನಕ್ಷೆಗಳ ಜತೆಗೆ ರಸ್ತೆ ಸಂಪರ್ಕ ವ್ಯವಸ್ಥೆತಯ ಮೇಲೆ ಇಗಾ, ಭೂ ಬಳಕೆಯಲ್ಲಿ ಬದಲಾವಣೆ ಗುರುತಿಸುವಿಕೆ, ನಗರ ಯೋಜನೆಗಳ ರಚನೆ ಮುಂತಾದ ಹತ್ತು ಹಲವು ಉದ್ದೇಶಗಳಿಗೆ ಅಗತ್ಯ ಮಾಹಿತಿಯನ್ನು ಇದು ಒದಗಿಸಲಿದೆ ಎಂದು ಇಸ್ರೊ ಹೇಳಿದೆ.

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಆ.31ರಂದು ಪಿಎಸ್‌ಎಲ್'ವಿ ರಾಕೆಟ್ ಮೂಲಕ ಇಸ್ರೊ ನಡೆಸಿದ್ದ ಉಡಾವಣೆ ವಿಫಲಗೊಂಡಿತ್ತು. ಆದರೂ ಮತ್ತೆ ಪಿಎಸ್‌ಎಲ್'ವಿ ಸರಣಿ ರಾಕೆಟ್ ನಲ್ಲಿಯೇ ಉಡಾವಣೆ ಮಾಡಲಾಗಿದೆ.

## 49. ಸುಲಲಿತ ಲಾಜಿಸ್ಟಿಕ್ಸ್ (ಲೀಡ್ಸ್) ವಿವಿಧ ರಾಜ್ಯಗಳಲ್ಲಿನ ಸೂಚ್ಯಂಕ

ಪ್ರಮುಖ ಸುದ್ದಿ

- ಕೇಂದ್ರ ಸರ್ಕಾರದ ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆ ಬಿಡುಗಡೆ ಮಾಡಿದ ಲಾಜಿಸ್ಟಿಕ್ಸ್ ಈಸ್ ಅಕ್ರಾಸ್ ಡಿಫರೆಂಟ್ ಸ್ಟೇಟ್ಸ್ (ಲೀಡ್ಸ್) ಸೂಚ್ಯಂಕದಲ್ಲಿ ಗುಜರಾತ್ 22 ರಾಜ್ಯಗಳ ಪೈಕಿ ಅಗ್ರಸ್ಥಾನದಲ್ಲಿದೆ.

- ಈ ಸೂಚ್ಯಂಕವನ್ನು ಕೇಂದ್ರ ಸರ್ಕಾರದ ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆ ಬಿಡುಗಡೆ ಮಾಡಿದೆ. ಕೇಂದ್ರ ಕೈಗಾರಿಕಾ ಸಚಿವ ಸುರೇಶ್ ಪ್ರಭು ಅವರು ವ್ಯಾಪಾರ ಅಭಿವೃದ್ಧಿ ಮತ್ತು ಉತ್ತೇಜನ ಮಂಡಳಿಯ ಮೂರನೇ ಸಭೆಯಲ್ಲಿ ಈ ಸೂಚ್ಯಂಕ ಬಿಡುಗಡೆ ಮಾಡಿದರು.

## ಲೀಡ್ಸ್ ಸೂಚ್ಯಂಕ ರ್ಯಾಂಕಿಂಗ್

- ಲೀಡ್ಸ್ ಸೂಚ್ಯಂಕ ರ್ಯಾಂಕಿಂಗ್‌ನಲ್ಲಿ ಪಂಜಾಬ್ ಎರಡನೇ ಸ್ಥಾನದಲ್ಲಿದೆ. ಆಂಧ್ರಪ್ರದೇಶ, ಕರ್ನಾಟಕ ಹಾಗೂ ಮಹಾರಾಷ್ಟ್ರ ಕ್ರಮವಾಗಿ ನಂತರದ ಸ್ಥಾನಗಳಲ್ಲಿವೆ. ಕೇಂದ್ರಾಡಳಿತ ಪ್ರದೇಶಗಳ ಪೈಕಿ ಡಮನ್ ಮತ್ತು ಡಿಯು ಅಗ್ರಸ್ಥಾನಿಯಾಗಿದ್ದು, ದೆಹಲಿ ಮತ್ತು ಚಂಡೀಗಢ ನಂತರ ಸ್ಥಾನಗಳಲ್ಲಿವೆ. ಬೆಟ್ಟರಾಜ್ಯಗಳ ಪೈಕಿ ತ್ರಿಪುರಾ, ಮಿಜೋರಾಂ ಹಾಗೂ ಮೇಘಾಲಯ ಅಗ್ರ ಮೂರು ಸ್ಥಾನಗಳನ್ನು ಹೊಂದಿವೆ.

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## ಲೀಡ್ಸ್ ಸೂಚ್ಯಂಕದ ಬಗ್ಗೆ

- ಲೀಡ್ಸ್ ಸೂಚ್ಯಂಕವು ಸಂಯುಕ್ತ ಸೂಚಕವಾಗಿದ್ದು, ಅಂತರರಾಷ್ಟ್ರೀಯ ವ್ಯಾಪಾರ ಲಾಜಿಸ್ಟಿಕ್ಸ್ ಲಭ್ಯತೆಯ ಸೂಚಕವಾಗಿದೆ. ಇದು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಹಕ್ಕುದಾರರ ಸಮೀಕ್ಷೆ ನಡೆಸಿ ಇದನ್ನು ಸಿದ್ಧಪಡಿಸಲಾಗುತ್ತದೆ. ವಾಣಿಜ್ಯ ಹಾಗೂ ಕೈಗಾರಿಕಾ ಸಚಿವಾಲಯ ಇದನ್ನು ನಡೆಸುತ್ತದೆ. ಎಂಟು ಮಾನದಂಡಗಳ ಆಧಾರದಲ್ಲಿ ಸೂಚ್ಯಂಕ ಸಿದ್ಧಪಡಿಸಲಾಗುತ್ತದೆ. ಈ ಮಾನದಂಡಗಳೆಂದರೆ ಮೂಲಸೌಕರ್ಯ ಸೇವೆಗಳು, ಕಾಲಾವಧಿ,

ಟ್ರ್ಯಾಕ್ ಅಂಡ್ ಟ್ರೇಸ್, ಬೆಲೆಯಲ್ಲಿ ಸ್ಪರ್ಧಾತ್ಮಕತೆ, ಕಾರ್ಗೋ ಸುರಕ್ಷತೆ, ನಿರ್ವಹಣೆಯ ಪರಿಸರ ಮತ್ತು ನಿಯಂತ್ರಣ ಪ್ರಕ್ರಿಯೆ.

- ಲೀಡ್ಸ್ ಸೂಚ್ಯಂಕವು ಮುಖ್ಯವಾಗಿ ವಿಶ್ವಬ್ಯಾಂಕಿನ ದ್ವೈವಾರ್ಷಿಕ ಲಾಜಿಸ್ಟಿಕ್ಸ್ ಪ್ರಿಫರೆನ್ಸ್ ಇಂಡೆಕ್ಸ್ ವರದಿಯನ್ನು ಆಧರಿಸಿದೆ. ಇದರಲ್ಲಿ 2016ನೇ ಇಸ್ವಿಯಲ್ಲಿ ಭಾರತ 160 ದೇಶಗಳ ಪೈಕಿ 35ನೇ ಸ್ಥಾನದಲ್ಲಿವೆ. 2014ರಲ್ಲಿ ಭಾರತ 54ನೇ ಸ್ತಾನದಲ್ಲಿತ್ತು. ಇದು ಲಾಜಿಸ್ಟಿಕ್ಸ್ ಸೇವೆಗಳ ಕ್ಷಮತೆಯನ್ನು ಆಧರಿಸಿದ್ದು, ಇದು ರಫ್ತು ಉತ್ತೇಜನ ಹಾಗೂ ಆರ್ಥಿಕ ಬೆಳವಣಿಗೆಗೆ ಪೂರಕವಾಗಿದೆ.

## 50. ಅಪಾಯಕಾರಿ ಓಜೋನ್ ರಂಧ್ರ ಕ್ಷೀಣ: ನಾಸಾ ಅಧ್ಯಯನದಿಂದ ಬೆಳಕಿಗೆ

### ಪ್ರಮುಖ ಸುದ್ದಿ

- ವಾಯುಮಂಡಲದಲ್ಲಿ ಕ್ಲೋರಿನ್ ಮಟ್ಟ ವೇಗವಾಗಿ ಕಡಿಮೆಯಾಗುತ್ತಿದ್ದು, ಓಜೋನ್ ಪದರದ ರಂಧ್ರ ಕ್ಷೀಣಿಸಿದೆ ಎಂದು ನ್ಯಾಷನಲ್ ಏರೋನಾಟಿಕ್ಸ್ ಆ್ಯಂಡ್ ಸ್ಪೇಸ್ ಅಡ್ಮಿನಿಸ್ಟ್ರೇಷನ್ (ನಾಸಾ) ಖಚಿತಪಡಿಸಿದ್ದು, ಕ್ಲೋರೋಫ್ಲೋರೋ ಕಾರ್ಬನ್ಸ್ ನಿಷೇಧದ ಪರಿಣಾಮ ಎಂದು ಹೇಳಿದೆ.

### ಮುಖ್ಯ ಅಂಶಗಳು

- ಓಜೋನ್ ರಂಧ್ರ ಕ್ಷೀಣಿಸುತ್ತಿರುವುದು ಕಳೆದ ವರ್ಷ ಉಪಗ್ರಹದಿಂದ ತೆಗೆದ ಛಾಯಾಚಿತ್ರಗಳಿಂದ ಪತ್ತೆಯಾಗಿದ್ದು, 2060ರ ವೇಳೆಗೆ ಓಜೋನ್ ಪದರ ಸಂಪೂರ್ಣ ದುರಸ್ತಿಯಾಗಲಿದೆ ಎಂಬ ಭರವಸೆ ಇಡಲಾಗಿದೆ.

- ಆದರೂ, ಕ್ಲೋರೋಫ್ಲೋರೋಕಾರ್ಬನ್ಸ್ ನಿರ್ಮೂಲನ ಮಾಡುವ ನಿಟ್ಟಿನಲ್ಲಿ ಜಗತ್ತಿನ ಎಲ್ಲ ರಾಷ್ಟ್ರಗಳು 1985ರಲ್ಲಿ ಸಹಿ ಹಾಕಿದ ಮಾಂಟ್ರಿಯಲ್ ಪ್ರೊಟೊಕಾಲ್ ನ ನೇರ ಪರಿಣಾಮ ಓಜೋನ್ ರಂಧ್ರ ಸುಧಾರಣೆ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. ತನ್ನ ಔರಾ ಉಪಗ್ರಹ ಮೂಲಕ ನಾಸಾ 2005 ರಿಂದ ಓಜೋನ್ ಪದರದಲ್ಲಿನ ರಂಧ್ರವನ್ನು ನಿರಂತರವಾಗಿ ಗಮನಿಸುತ್ತಿದ್ದು, ವಾಯುಮಂಡಲದಲ್ಲಿ ಕ್ಲೋರಿನ್ ಮಟ್ಟ ಶೇ. 20ರಷ್ಟು ಕುಸಿದಿದೆ ಎಂದು ತಿಳಿಸಿದೆ.

- ಮಾನವರಲ್ಲಿ ಚರ್ಮ ಕ್ಯಾನ್ಸರ್, ಕ್ಯಾಟರಾಕ್ಟ್ಸ್ ಹಾಗೂ ಜೀವನಿರೋಧಕ ಶಕ್ತಿಯನ್ನು ಕುಂದಿಸುವುದರ ಜತೆಗೆ ಸಸ್ಯ ಸಂಕುಲವನ್ನು ಹಾಳುಗೆಡುವ ಸೂರ್ಯನ ಅತಿನೇರಳೆ ವಿಕಿರಣವನ್ನು ತಡೆಯುವ ಕೆಲಸವನ್ನು ಓಜೋನ್ ಪದರ ನಿರ್ವಹಿಸುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ